ದುಡಿವ ಜನರ ಪ್ರಾಣ ಮಿತ್ರ


# ಐಕ್ಯರಂಗ

ಸಂಪುಟ 27 ಸಂಚಿಕೆ 33 ಆಗಸ್ಟ್ [illegible], 2005 ಬೆಲೆ ರೂ. 3.00


## ಜೀವ ತೆಗೆದ ಜೀವನದಿಗಳು



## ಬಾಗೀನ ಅರ್ಪಿಸಿ ಮುಖ ತಿರುವಿದ ಮಂತ್ರಿಗಳು



## ಸುಧಾರಣೆಗಳ ಮತ್ತೊಂದು ಮುಖವೇ ಉದ್ಯೋಗನಾಶ !




## ನೈಸ್ ಕಂಪನಿಯ ಭೂ ಕಬಳಿಕೆ ವಿರುದ್ಧ ವಸತಿ ಹೀನರ ಹೋರಾಟ



ರೈಸುವತ್ತ ಆಪ್ತಮಿತ್ರ - ಅಂಥದ್ದೇನಿದೆ ?

- ವಯೋಮಿತಿ ಮೀರಿದ ಶಿಕ್ಷಕರ ಬವಣೆ
- ಆಕಾಶವ ಎತ್ತಿ ನಿಲ್ಲಿಸಿ ನೀಲಿಯಾಗಿ ನಿಂತವರು...
- ಚಾರಿತ್ರಿಕ ಕೆರಿಬಿಯನ್ ತೈಲ ಒಪ್ಪಂದ



**ರಾಜಕೀಯ ಮುಖಂಡರು ಇತಿಹಾಸವನ್ನು ಸೃಷ್ಟಿಸುತ್ತಾರೆಂದು ಭಾವಿಸಿರುವವರು ಭಾರತ ಸ್ವಾತಂತ್ರ್ಯ ಚಳುವಳಿಯನ್ನು ಸಹ ರಾಷ್ಟ್ರೀಯ ಮುಖಂಡರ ಒಲವು-ನಿಲುವುಗಳನ್ನಾಗಿಯೇ ನೋಡುತ್ತಾರೆ. ದುಡಿಯುವ ಜನತೆ - ಜನ ಸಾಮಾನ್ಯರು ವಹಿಸಿದ ಪಾತ್ರವನ್ನು ನಿರ್ಲಕ್ಷಿಸುತ್ತಾರೆ. ಆದರೆ ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ದೇಶದ ಹಾಗೂ ಕರ್ನಾಟಕ ರಾಜ್ಯದ ಕಾರ್ಮಿಕ ವರ್ಗ ವಹಿಸಿದ ಉಜ್ವಲ ಪಾತ್ರವನ್ನು ಗುರುತಿಸಿ ವಿಶ್ಲೇಷಿಸಿದ್ದಾರೆ ಹಿರಿಯ ಕಾರ್ಮಿಕ ನೇತಾರರಾದ ಕಾಂ. ವಿ.ಜೆ.ಕೆ.ನಾಯರ್‌ರವರು.**

# ರಾಷ್ಟ್ರೀಯ ಚಳುವಳಿಯಲ್ಲಿ ಕಾರ್ಮಿಕ ವರ್ಗದ ಪಾತ್ರ

ಇಪ್ಪತ್ತನೇ ಶತಮಾನದ ಭಾರತದ ಚರಿತ್ರೆಯನ್ನು ಸ್ಥೂಲವಾಗಿ ಎರಡು ಭಾಗವನ್ನಾಗಿ ಮಾಡಬಹುದು. ಮೊದಲ ಭಾಗದ 1950 ರಲ್ಲಿ ಸಾಧಿಸಲಾದ ಭಾರತ ಗಣರಾಜ್ಯದ ಸ್ಥಾಪನೆ ಮತ್ತು ಅದಕ್ಕಾಗಿ ನಡೆದ ಚಳುವಳಿ. ಎರಡನೆಯದು ಭಾರತ ದೇಶದ ಶೋಷಿತ ಮೂಲ ವರ್ಗಗಳು ತಮ್ಮ ಹಕ್ಕುಗಳನ್ನು ಪ್ರತಿಪಾದಿಸುವ ಮೂಲಕ ದೇಶದಲ್ಲಿ ಯೋಜಿತ ಅಭಿವೃದ್ಧಿಯು ಹಾದಿ ರೂಪುಗೊಳ್ಳಲು ಕಾರಣವಾಗಿದ್ದು ಮತ್ತು ಸ್ವಾತಂತ್ರ್ಯದ ಕ್ರೋಢೀಕರಣ. ಮೊದಲ ಭಾಗದಲ್ಲಿ ಕಾರ್ಮಿಕವರ್ಗ ತನ್ನ ಹೋರಾಟದಲ್ಲಿ ಇತರ ವಿವಿಧ ವಿಭಾಗಗಳ ಪ್ರೋತ್ಸಾಹವನ್ನು ಗಳಿಸಿತು. ಏಕೆಂದರೆ ಭಾರತ ಸ್ವಾತಂತ್ರ್ಯ ಗಳಿಸಬೇಕಾದರೆ ಕಾರ್ಮಿಕ ವರ್ಗದ ದನಿಯೂ ಜೊತೆಗೂಡಬೇಕಾಗಿತ್ತು. ಎರಡನೆಯ ಭಾಗದಲ್ಲಿ ಕಾರ್ಮಿಕ ವರ್ಗವು ಬಂಡವಾಳಶಾಹಿ ಪಕ್ಷ ವಹಿಸಿದ ತನ್ನದೇ ರಾಷ್ಟ್ರೀಯ ನಾಯಕತ್ವದಿಂದ ಅಪಮಾನಕರ ರೀತಿಯ ಶೋಷಣೆಗೆ ಗುರಿಯಾಯಿತು.

ಆಗಿನ್ನೂ ಬೆಳೆದು ಬರುತ್ತಿದ್ದ ಸ್ವಾತಂತ್ರ್ಯ ಹೋರಾಟದ ಆರಂಭಿಕ ಕಾಲಘಟ್ಟದಲ್ಲಿ ಕಾರ್ಮಿಕ ವರ್ಗವು ತಾನು ಇನ್ನೂ ಪ್ರಬುದ್ಧತೆಯನ್ನು ಗಳಿಸಿಕೊಳ್ಳಬೇಕಾದ ಸ್ಥಿತಿಯಲ್ಲಿತ್ತು. ಕಾರ್ಮಿಕ ವರ್ಗವು ತನ್ನ ಶೈಶವಾವಸ್ಥೆಯಲ್ಲಿ ಸಹ ದೇಶಪ್ರೇಮದ ಪ್ರಶ್ನೆಯಲ್ಲಿ ಯಾವುದೇ ರೀತಿಯಲ್ಲೂ ಇತರ ವಿಭಾಗಕ್ಕಿಂತ ಕಡಿಮೆಯಾಗಿರಲಿಲ್ಲ ಎಂಬುದನ್ನು ನಾವಿಲ್ಲಿ ಗುರುತಿಸಬೇಕಾಗುತ್ತದೆ. ಈ ಸ್ವಾತಂತ್ರ್ಯ ಸಂಗ್ರಾಮದಲ್ಲಿ ವಹಿಸಿದ ಪಾತ್ರವನ್ನೇ ಕಾರ್ಮಿಕವರ್ಗವು ಸ್ವಂತ ತನ್ನದೇ ಚಳುವಳಿಯನ್ನು ಸಂಘಟಿಸಿಕೊಳ್ಳಲು ಬಳಸಿಕೊಂಡಿತು. ರಾಷ್ಟ್ರೀಯ ಬಂಡವಾಳಶಾಹಿ ವರ್ಗವು ಈ ಕಾರ್ಮಿಕ ವರ್ಗದ ಚಳುವಳಿಯನ್ನು ತನ್ನ ಗುರಿ ಸಾಧನೆಗೆ ಬಳಸಿಕೊಂಡದ್ದು ಬೇರೆ ವಿಚಾರ.

'ಆಧುನಿಕ ಕಾರ್ಮಿಕ ವರ್ಗ'ದ ಅಂದಿನ ವಿವರಣೆಗೆ ಹತ್ತಿರವಾಗಿದ್ದ ಬಾಂಬೆಯ ಕಾರ್ಮಿಕ ವರ್ಗವು ಈ ಸ್ವಾತಂತ್ರ್ಯ ಸಂಗ್ರಾಮದಲ್ಲಿ ತನ್ನ ವಿಶೇಷ ಪಾತ್ರವನ್ನು ವಹಿಸಿತು.

1908 ರಷ್ಟು ಹಿಂದೆಯೇ ಅಂದಿನ 'ತೀವ್ರಗಾಮಿ' ನಾಯಕರಾಗಿದ್ದ ಲೋಕಮಾನ್ಯ ಬಾಲಗಂಗಾಧರ ತಿಲಕರ ರಕ್ಷಣೆಗಾಗಿ ಬಾಂಬೆಯ ಕಾರ್ಮಿಕ ವರ್ಗ ನಡೆಸಿದ ತೀವ್ರ ಮತ್ತು ಸಾಮೂಹಿಕ ಕಾರ್ಯಾಚರಣೆಯನ್ನು ಅಂದಿನ ಮಹಾನ್ ಕ್ರಾಂತಿಕಾರಿ ಲೆನಿನ್‌ರವರು ಸಹ ಗುರುತಿಸಿದ್ದರು. ಲೆನಿನ್‌ರವರು ಆ ಬಗ್ಗೆ 'streets rose in defense of the pen' (ಲೇಖನಿಯ ರಕ್ಷಣೆಗಾಗಿ ಬೀದಿಗಳು ಎದ್ದು ನಿಂತಿವೆ') ಎಂದು ಬಣ್ಣಿಸಿದ್ದಾರೆ. ಬ್ರಿಟಿಷ್ ಪ್ರಭುತ್ವ 'ಸ್ವರಾಜ್' ಪತ್ರಿಕೆಯ ಸಂಪಾದಕರಾಗಿದ್ದ ತಿಲಕರನ್ನು ಬಂಧಿಸಿ ಜೈಲಿಗೆ ಹಾಕಿದಾಗ ಅವರ ರಕ್ಷಣೆಗೆ ನಿಂತು ಸಾಮಾನ್ಯ ಕಾರ್ಮಿಕ ವರ್ಗ ನಡೆಸಿದ ಬೀದಿ ಕಾಳಗದ ಕುರಿತು ಲೆನಿನ್‌ರವರು ಈ ಸುಂದರವಾದ ಮತ್ತು ಅರ್ಥಪೂರ್ಣವಾದ ಮಾತನ್ನು ಹೇಳಿದ್ದಾರೆ.

ಕಾರ್ಮಿಕವರ್ಗದ ಇತಿಹಾಸಕಾರರಾದ ಸುಕೋಮಲ್‌ಸೇನ್ ಕಾರ್ಮಿಕವರ್ಗದ ಈ ಸಂಗ್ರಾಮವನ್ನು ದಾಖಲಿಸಿದ್ದಾರೆ. ಬಾಂಬೆಯ ಸುಮಾರು 10 ಬೃಹತ್ ಜವಳಿ ಗಿರಣಿಗಳು ಕೆಲಸವನ್ನು ಸ್ಥಗಿತಗೊಳಿಸಿ ಬೀದಿ ಬೀದಿಗಳಲ್ಲಿ ಬ್ರಿಟೀಷರ ಪೊಲೀಸರು ಮತ್ತು ಸೈನ್ಯದೊಂದಿಗೆ ಸಂಘರ್ಷ ನಡೆಸಿತು. 1908 ಜೂನ್ 29ರಂದು ಆರಂಭವಾದ ಸಂಘರ್ಷ ಜುಲೈ 24ವರೆಗೆ ತಿಲಕರು ಬಿಡುಗಡೆಯಾಗುವವರೆಗೆ ಮುಂದುವರಿಯಿತು. "ಸ್ವರಾಜ್ಯ ನನ್ನ ಆ ಜನ್ಮ ಸಿದ್ಧ ಹಕ್ಕು" ಎಂದು ಘೋಷಿಸಿದ ತಿಲಕರಿಗಿಂತಲೂ ತಮ್ಮ ಉತ್ಪಾದನೆಯೇ ಮುಖ್ಯ ಎಂದು ಭಾವಿಸಿದ ಬಾಂಬೆಯ ಗಿರಣಿ ಮಾಲಿಕರ ಶಾಮೀಲುತನದ ವರ್ತನೆಗಳನ್ನು ಸುಕೋಮಲ್‌ಸೇನ್ ಬಯಲು ಮಾಡಿದ್ದಾರೆ. ಈ ಗಿರಣಿ ಮಾಲೀಕರು ಒಂದೆಡೆ ಈ ಸ್ವದೇಶಿ ಚಳುವಳಿಯಲ್ಲಿ ಕಾರ್ಮಿಕ ವರ್ಗವನ್ನು ಚಾಣಾಕ್ಷತೆಯಿಂದ ದುರುಪಯೋಗ ಮಾಡಿಕೊಳ್ಳುತ್ತಾ ಮತ್ತೊಂದೆಡೆ ಬ್ರಿಟಿಷ್ ಆಡಳಿತದ ಕೃಪಾ ಕಟಾಕ್ಷವನ್ನು ಗಳಿಸಲು ಪ್ರಯತ್ನಿಸುತ್ತಿದ್ದರು.

1920ರಲ್ಲಿ ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್ (ಎಐಟಿಯುಸಿ) ಸ್ಥಾಪನೆಯಾಯಿತು. ಎಐಟಿಯುಸಿ ಸ್ಥಾಪನೆಯ ದಾರಿ ನಿರ್ಮಿಸಿ 'ಪಥದರ್ಶನ' ಕೊಟ್ಟ ಒಟ್ಟು 101 ಕಾರ್ಮಿಕ ಸಂಘಟನೆಗಳಲ್ಲಿ 14 ರೈಲ್ವೆ ಕಾರ್ಮಿಕರ ಸಂಘಟನೆಗಳಾಗಿದ್ದವು. ಪಂಜಾಬ್ ಪ್ರಾಂತದ ಲಾಲಾಲಜಪತ ರಾಯ್ ರವರು ಎಐಟಿಯುಸಿಯ ಪ್ರಥಮ ಅಧ್ಯಕ್ಷರಾಗಿ ಚುನಾಯಿತರಾಗಿದ್ದು ಸಹಜವೇ ಆಗಿತ್ತು. ಅವರು ಪಂಜಾಬ್‌ನ ರೈಲ್ವೆ ಕಾರ್ಮಿಕ ಮುಖಂಡರಾಗಿದ್ದರು. ಈ 14 ರೈಲ್ವೆ ಕಾರ್ಮಿಕರ ಸಂಘಟನೆಗಳಲ್ಲಿ 70 ಸಾವಿರದಷ್ಟು ಸದಸ್ಯತ್ವವಿದ್ದ ಅತಿದೊಡ್ಡ ಸಂಘಟನೆ 'ನಾರ್ಥ್ ವೆಸ್ಟ್ ಫ್ರಂಟೀಯರ್ ರೈಲ್ವೆ'ಯದಾಗಿತ್ತು.

ತಮ್ಮ ಮೇಲಿನ ಅಮಾನವೀಯ ಶೋಷಣೆ ತಡೆಯಲಾಗದೆ ತೋಟ ಬಿಟ್ಟು ಪಲಾಯನ



ಮಾಡುತ್ತಿದ್ದ ಬಂಗಾಳ ಮತ್ತು ಆಸ್ಸಾಂಗಳಲ್ಲಿನ ತೋಟ ಕಾರ್ಮಿಕರ ಬೆಂಬಲಾರ್ಥ ಬಂಗಾಳದ ರೈಲ್ವೆ ಕಾರ್ಮಿಕರು ಮತ್ತು ನಾವಿಕರು ನಡೆಸಿದ ಸೌಹಾರ್ದ ಕಾರ್ಯಾಚರಣೆಯ ಕುರಿತು ಇಎಂಎಸ್ ನಂಬೂದರಿಪಾಡ್‌ರವರು ತಮ್ಮ `history of freedom struggle' ಕೃತಿಯಲ್ಲಿ ಬರೆದು ಗೌರವಿಸಿದ್ದಾರೆ. ತೋಟ ಬಿಟ್ಟು ಓಡಿ ಹೋಗುತ್ತಿದ್ದ ಈ ಕಾರ್ಮಿಕರನ್ನು ಹಿಡಿದು ಬಡಿದು ವಾಪಸ್ ತರಲು ಸರ್ಕಾರ ನೇಮಿಸಿದ್ದ 'ಗೂರ್ಖಾ ಬೆಟಾಲಿಯನ್' ಈ ಕಾರ್ಮಿಕರ ಮೇಲೆ ನಡೆಸುತ್ತಿದ್ದ ಘೋರ ಧಾಳಿಗಳ ಕುರಿತೂ ಬರೆದಿದ್ದಾರೆ. ಕಾರ್ಮಿಕರು ರೈಲುಗಳು ಮತ್ತು ನದಿಗಳಲ್ಲಿ ಯಾಂತ್ರಿಕ ದೋಣಿಗಳ ಮೂಲಕ ಓಡಿ ಹೋಗುತ್ತಿದ್ದರು. ಈ 'ಗೂರ್ಖಾ ಬೆಟಾಲಿಯನ್' ಅಸಹಾಯಕ ಕಾರ್ಮಿಕರ ಮೇಲೆ ನಡೆಸುತ್ತಿದ್ದ ಭೀಕರ ಕ್ರೂರ ಹಿಂಸಾಚಾರಗಳನ್ನು ನೋಡಲಾಗದೆ ಈ ರೈಲ್ವೆ ಮತ್ತು ನಾವಿಕ ಕಾರ್ಮಿಕರು ತಾವು ನಡೆಸುವ ರೈಲು ಮತ್ತು ದೋಣಿಗಳಲ್ಲಿ ಸ್ಥಗಿತಗೊಳಿಸಿ ತೋಟ ಕಾರ್ಮಿಕರಿಗೆ ತಮ್ಮ ಬೆಂಬಲ ತೋರಿಸಿದರು. ಇದು ನಡೆದದ್ದು 1921ರಲ್ಲಿ ಗಾಂಧೀಜಿಯವರ ನೇತೃತ್ವದ ಅಸಹಕಾರ ಚಳುವಳಿಯ ಬಗೆಗೆ ಜನ ಜಾಗೃತಿ ಮೂಡುತ್ತಿದ್ದ ಸಂದರ್ಭದಲ್ಲಿ.

ಈಗ ಮಹಾರಾಷ್ಟ್ರದಲ್ಲಿರುವ ಸೊಲ್ಲಾಪುರದಲ್ಲಿ ಒಂದು ಸಂಘಟಿತ ಕಾರ್ಮಿಕ ವರ್ಗದ ಕಾರ್ಯಾಚರಣೆ ನಡೆಯಿತು. ಅಲ್ಲಿನ ಗಿರಣಿ ಕಾರ್ಮಿಕರು ದಂಗೆ ಎದ್ದು ಬ್ರಿಟೀಷ್ ಆಡಳಿತಗಾರರನ್ನು ಪಟ್ಟಣದಿಂದ ಹೊರಗಟ್ಟಿದರು. ಆ ಮೂಲಕ ಕೆಲವು ದಿನಗಳ ಕಾಲ ಪಟ್ಟಣವನ್ನು ವಿದೇಶಿ ಆಡಳಿತಗಾರರ ನೊಗದಿಂದ ಮುಕ್ತಗೊಳಿಸಿದರು. ಮರಳಿ ಪಟ್ಟಣದಲ್ಲಿ ನಿಯಂತ್ರಣ ಸ್ಥಾಪಿಸಿದ ಬ್ರಿಟೀಷರು ಕಾರ್ಮಿಕರನ್ನು ಅತ್ಯಂತ ಕ್ರೂರವಾಗಿ ಹತ್ತಿಕ್ಕಿದರು. ನಾಲ್ವರು ಕಾರ್ಮಿಕರನ್ನು ನೇಣಿಗೇರಿಸಲಾಯಿತು. ಈ ಕಾರ್ಮಿಕರಿಗೆ ಗೌರವ ಪೂರ್ಣ ನಮನ ಸಲ್ಲಿಸಿರುವ ಇಎಂಎಸ್‌ರವರು ಚಿತ್ತಗಾಂಗ್‌ನಲ್ಲಿ ಶಸ್ತ್ರಗಳನ್ನು ಲೂಟಿ ಮಾಡಿದ ಸೂರ್ಯಸೇನ್ ಮತ್ತು ಪ್ರಯಂವದಾರವರ ಸಾಹಸದಂತೆ ಈ ಹೋರಾಟವು ವ್ಯಕ್ತಿಗತ ಸಾಹಸವಾಗದೆ, ಸೊಲ್ಲಾಪುರದ ಕಾರ್ಮಿಕವರ್ಗ ಇಲ್ಲಿ ಸಾಮೂಹಿಕ ಚಳುವಳಿ-ಕಾರ್ಯಾಚರಣೆ ನಡೆಸಿ ತನ್ನ ಸಾಮರ್ಥ್ಯ ಮತ್ತು ಶಕ್ತಿಯನ್ನು ಪ್ರದರ್ಶಿಸಿದೆ ಮತ್ತು ಕಾರ್ಮಿಕವರ್ಗ ಸ್ವತಂತ್ರ ಸಂಗ್ರಾಮದಲ್ಲಿ ತನ್ನ ಪಾತ್ರವೇನೆಂದು ತೋರಿಸಿದೆ ಎಂದಿದ್ದಾರೆ.

1937ರ ನಂತರದಲ್ಲಿ ಬಾಂಬೆಯ ಕಾರ್ಮಿಕರು ಕಾಂಗ್ರೆಸ್ ಪಕ್ಷದ ಚುನಾವಣಾ ಪ್ರಣಾಳಿಕೆಯಿಂದ ಆಕರ್ಷಿತರಾದರು ಮತ್ತು ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿದರು. ಮೊರಾರ್ಜಿ ದೇಸಾಯಿಯವರು ಬಾಂಬೆ ಪ್ರಾಂತ್ಯದ ಮುಖ್ಯ ಮಂತ್ರಿಗಳಾದರು. ಆದರೆ ಸ್ವಾತಂತ್ರ್ಯ ಮತ್ತು ಪರಿಹಾರದ ಬದಲು ಹೊಸ ಆಡಳಿತಗಾರರು ದೇಶೀಯರೇ ಆದರೂ ಸಹ ಕಾರ್ಮಿಕರು ಲಾಠಿ, ಬೂಟು, ಬಂದೂಕುಗಳನ್ನು ಹಾಗೂ ಮುಷ್ಕರ ನಿಷೇದಗಳನ್ನು ಎದುರಿಸಬೇಕಾಯಿತು. ದೇಶ ಸ್ವಾತಂತ್ರ್ಯ ಪಡೆಯುವ ಸುಮಾರು ಒಂದು ದಶಕಗಳಷ್ಟು ಮೊದಲೇ ಕಾರ್ಮಿಕ ವರ್ಗವು ನಮ್ಮವರೇ ಆದ ರಾಷ್ಟ್ರೀಯ ನಾಯಕರ ವಿದ್ರೋಹದ ರುಚಿ ನೋಡಬೇಕಾಯಿತು.

1946 ರಲ್ಲಿ ಸ್ವಾತಂತ್ರ್ಯ ಚಳುವಳಿಯ ಕೊನೆಯ ಹಂತದಲ್ಲಿ ಈ ಚಳುವಳಿಗೆ ಕಳಸವಿಟ್ಟಂತೆ ಕಾರ್ಮಿಕ ವರ್ಗದ ಹೋರಾಟಗಳು ಉತ್ತುಂಗಕ್ಕೇರಿದವು. ಭಾರತದ ಒಕ್ಕೂಟದಲ್ಲಿ ವಿಲೀನವಾಗಲು ಒಪ್ಪದೇ ಪ್ರತ್ಯೇಕವಾಗಲು ಪ್ರಯತ್ನಿಸುತ್ತಿದ್ದ ತಿರುವಾಂಕೂರಿನ ಆಡಳಿತಗಾರರ ವಿರುದ್ಧ ಅಲೆಪ್ಪಿ ಜಿಲ್ಲೆಯ ಕಾರ್ಮಿಕ ವರ್ಗ ಶಸಸ್ತ್ರ ಬಂಡಾಯವೆದ್ದಿತು.

ತಿರುವಾಂಕೂರು ಪ್ರಾಂತ್ಯದ ಅಲೆಪ್ಪಿಯ ತೆಂಗಿನ ನಾರು ಕಾರ್ಖಾನೆ ಕಾರ್ಮಿಕರು ದಂಗೆಯೆದ್ದಿದ್ದರು. ಕಾರ್ಮಿಕರು ಮತ್ತು ಅವರ ಗ್ರಾಮೀಣ ಸಂಬಂಧಿಗಳು ಸೇರಿ ಶಸಸ್ತ್ರ ಶಿಬಿರಗಳನ್ನು ಸಂಘಟಿಸಿದರು. ಭರ್ಜಿ, ಕೊಡಲಿ, ಮಚ್ಚು, ಚಾಕು, ಮರದಿಂದ ಮಾಡಿದ ಈಟಿ, ಕಲ್ಲು ಇತ್ಯಾದಿಗಳೊಂದಿಗೆ ಸಜ್ಜುಗೊಂಡ ಇವರು ಮೆಷಿನ್ ಗನ್‌ಗಳೊಂದಿಗೆ ಸಿದ್ಧವಾಗಿದ್ದ ಸರ್.ಸಿ.ಪಿ.ರಾಮಸ್ವಾಮಿ ಅಯ್ಯರ್‌ನ ಪೊಲೀಸರನ್ನು ಎದುರಿಸಿದರು. ನೂರಾರು ಸಂಖ್ಯೆಯಲ್ಲಿ ಅವರು ಪ್ರಾಣಾರ್ಪಣೆ ಮಾಡಿದರು. ಆದರೆ ತಿರುವಾಂಕೂರು ಭಾರತ ಒಕ್ಕೂಟದಿಂದ ಪ್ರತ್ಯೇಕ ಗೊಳ್ಳುವುದನ್ನು ಅವರು ವಿಫಲಗೊಳಿಸಿದರು.

1946ರಲ್ಲಿ ಪ್ರಸಿದ್ಧ ರಿನ್(RIN) ಬಂಡಾಯ ಬಾಂಬೆಯಲ್ಲಿ ಜರುಗಿತು. ಬಾಂಬೆಯ ಕಾರ್ಮಿಕರು ಬ್ರಿಟೀಷರ ವಿರುದ್ಧ ಬಂಡಾಯವೆದ್ದ ನಾವಿಕ ಪಡೆಯ ಸೈನಿಕರ ಬೆಂಬಲಾರ್ಥ ಕಾರ್ಯಾಚರಣೆಗಿಳಿದರು. ಹಲವಾರು ಕಾರ್ಮಿಕರು ಬ್ರಿಟೀಷ್ ಸೈನಿಕರಿಂದ ಹತ್ಯೆಗೆ ಗುರಿಯಾದರು. ಈ ಕಾರ್ಮಿಕ ವರ್ಗದ ತ್ಯಾಗ ಬಲಿದಾನವು ಎರಡನೇ ವಿಶ್ವಯುದ್ಧದ ನಂತರದ ಸನ್ನಿವೇಶದಲ್ಲಿ ಬ್ರಿಟೀಷರ ಭಾರತೀಯರಿಗೆ ಅಧಿಕಾರ ಹಸ್ತಾಂತರಿಸಲು ಕಾರಣವಾಯಿತು.

ಮೈಸೂರು ಪ್ರಾಂತ್ಯದಲ್ಲಿ ಜವಾಬ್ದಾರಿ ಸರ್ಕಾರಕ್ಕಾಗಿ ನಡೆದ ಹೋರಾಟದಲ್ಲಿ ಕೋಲಾರ ಚಿನ್ನದ ಗಣಿ (ಕೆ.ಜಿ.ಎಫ್) ಪ್ರದೇಶದಲ್ಲಿ ಪೊಲೀಸರ ದಬ್ಬಾಳಿಕೆಯಲ್ಲಿ 1946ರಲ್ಲಿ ನಾಲ್ವರು ಕೆ.ಜಿ.ಎಫ್ ಕಾರ್ಮಿಕರು ಪ್ರಾಣ ತೆತ್ತರು. ಅಂತಿಮವಾಗಿ ಜವಾಬ್ದಾರಿ ಸರ್ಕಾರದ ಗುರಿಯನ್ನು ಸಾಧಿಸಲಾಯಿತು ಮತ್ತು ಈ ಚಳುವಳಿಯ ಮುಖಂಡ ಕೆ.ಸಿ.ರೆಡ್ಡಿಯವರು ರಾಜ್ಯದ ಪ್ರಥಮ ಮುಖ್ಯಮಂತ್ರಿಗಳಾದರು.

ಬೆಂಗಳೂರಿನಲ್ಲಿ 1942ರಲ್ಲಿ ಮಹಾತ್ಮ ಗಾಂಧಿಯವರ 'ಕ್ವಿಟ್ ಇಂಡಿಯಾ ಚಳುವಳಿ ಕರೆಗೆ ಸ್ಪಂಧಿಸಿ ಮೈಸೂರು ಬ್ಯಾಂಕ್ ವೃತ್ತದಲ್ಲಿ ಸೇರಿದ ಗಿರಣಿ ಕಾರ್ಮಿಕರಲ್ಲಿ 4 ಮಂದಿ ಪೊಲೀಸರ ಗುಂಡಿಗೆ ಬಲಿಯಾದರು. ಈಗಲೂ ಅವರ ಹೆಸರಿನಲ್ಲಿ ಸ್ಮಾರಕವೊಂದು ಮೈಸೂರು ಬ್ಯಾಂಕ್

ಪುಟ 8 ಕ್ಕೆ

**ಇಂದಿಗಾಗಿ ನಾಳಿನ ಕಾರ್ಯಕ್ರಮಗಳು**

- **ಆಗಸ್ಟ್ 20, 2005**
  ಸಮುದಾಯ - ರಾಜ್ಯಮಟ್ಟದ ಸಭೆ
  ಕರೂರು ವೈಶ್ಯಬ್ಯಾಂಕ್ ಯೂನಿಯನ್ ಆಫೀಸು, ಬೆಂಗಳೂರು.
- **ಆಗಸ್ಟ್ 21, 2005**
  ಸಮುದಾಯ ನಡೆದು ಬಂದ ದಾರಿ ಕುರಿತು ಕಾರ್ಯಕ್ರಮ.
  NSD-RRC ಅವರಿಂದ. ನಯನ ಸಭಾಂಗಣ, ಕನ್ನಡ ಭವನ ಬೆಂಗಳೂರು. ಬೆಳಿಗ್ಗೆ 10 ಗಂಟೆಯಿಂದ
- **ಆಗಸ್ಟ್ 24, 2005**
  ಕಾಂ. ಸೂರಿ ಜನ್ಮದಿನ - ವಿಚಾರಸಂಕಿರಣ, ಎನ್‌ಜಿಓ ಹಾಲ್, ಬೆಂಗಳೂರು. ಸಂಜೆ 4 ಗಂಟೆಗೆ.
- **ಆಗಸ್ಟ್ 25, 2005**
  ಸೆಪ್ಟೆಂಬರ್ 29 ರ ಮುಷ್ಕರ ಯಶಸ್ಸಿಗೆ ಕರೆ ಕಾರ್ಮಿಕ ಸಂಘಟನೆಗಳ ರಾಜ್ಯಮಟ್ಟದ ಸಮಾವೇಶ. ಪುರಭವನ - ಬೆಂಗಳೂರು
- **ಆಗಸ್ಟ್ 25, 2005**
  ಶಿಕ್ಷಣದ ಖಾಸಗೀಕರಣ, ವ್ಯಾಪಾರೀಕರಣದ ವಿರುದ್ಧ ಶಾಲಾ, ಕಾಲೇಜು ಬಂದ್ - ಎಸ್‌ಎಫ್‌ಐ ಕರೆ
- **ಆಗಸ್ಟ್ 26, 2005**
  ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಕಾಂ. ಪ್ರಕಾಶ್ ಕಾರಟ್ ಬೆಂಗಳೂರಿಗೆ. 4 ಗಂಟೆಗೆ - ವಿಚಾರಸಂಕಿರಣ, ಸೆನೆಟ್‌ಹಾಲ್‌ನಲ್ಲಿ 'ಭಾರತ - ಅಮೆರಿಕಾ ಸಂಬಂಧಗಳ ಕುರಿತು'

# ಜೀವ ತೆಗೆದ ಜೀವನದಿಗಳು - ಬಾಗೀನ ಅರ್ಪಿಸಿ ಮುಖ ತಿರುವಿದ ಮಂತ್ರಿಗಳು

ಹೀಗೆ ಫೋನಾಯಿಸಿದ ಹಿರಿಯ ರೈತ ನಾಯಕರಾದ ಭೀಮಸಿ ಕಲಾದಗಿಯವರನ್ನು ಮಳೆ-ಬೆಳೆ-ನೆರೆ ಹಾವಳಿಯು ಬಗ್ಗೆ ವಿಚಾರಿಸಿದಾಗ 'ಇಲ್ಲಿ ಮಳೆ ಇಲ್ಲ, ಆದರೆ ಭಾರೀ ನೀರು ನದಿಯಲ್ಲಿ ಹರಿದಿದೆ. ಜೀವ ಅರಳಿಸಬೇಕಾದ ನೀರು ಜನ-ಜಾನುವಾರಗಳ ಜೀವ ತೆಗೆಯುತ್ತಿದೆ. ಹೊಲಗಳು ಒಣಗಿವೆ, ನೆಲಕಿಲ್ಲದ ನೀರು ಅದೆಷ್ಟು ಹರಿದರೇನು?. ಈಗ ನಡೆದಿರುವುದು ಭಾರಿ ಅನಾಹುತ' ಎಂದರು. ಒಂದೆಡೆ ಭೀಮಾ ನದಿ, ಇನ್ನೊಂದೆಡೆ ಕೃಷ್ಣಾ ನದಿಗಳ ಹರಿವಿನ ಗಡಿಯೊಳಗೆ ಇರುವುದು ವಿಜಾಪುರ. ಇನ್ನೊಂದು ಬದಿ ಹೊಸ ಜಿಲ್ಲೆ ಬಾಗಲಕೋಟೆ. ಪಂಚನದಿಗಳು ಹರಿದರೂ ಬರಡಾಗಿರುವ ಜಿಲ್ಲೆಗಳು. ಮಹಾರಾಷ್ಟ್ರದಲ್ಲಿ ಸುರಿದ ಭಾರಿ ಮಳೆ ಮಹಾ ಪ್ರವಾಹವಾಗಿ ಹರಿದು ಕೃಷ್ಣ - ಭೀಮಾ ನದಿಗಳ ದಂಡೆಗುಂಟ ಸಾವಿನ ನಾಲಿಗೆಯಾಗಿ ಸವರುತ್ತಲೇ ತುಂಬಿ ಹರಿಯುತ್ತಿದೆ. ನದಿಗಳೊಡಲು ಬಿರಿದು ತುಂಬಿದ್ದೇ ಕಂಟಕವಾಗಿದೆ.

ಈ ಪ್ರವಾಹಕ್ಕೆ ಬೆಳಗಾಂ, ವಿಜಾಪುರ, ಬಾಗಲಕೋಟೆ, ಗುಲ್ಬರ್ಗಾ, ರಾಯಚೂರು ಜಿಲ್ಲೆಗಳು ತೀವ್ರ ಹಾನಿಗೊಳಗಾಗಿವೆ. ಕೊಡಗು, ಬಳ್ಳಾರಿಯಲ್ಲಿ ಗಂಭೀರ ಹಾನಿಯಾಗಿ ಸುರಕ್ಷಿತ ಜಾಗಕ್ಕೆ ತೆರಳುವ ಸೂಚನೆಗಳು ಇಲ್ಲದೆ, ಅನಿರೀಕ್ಷಿತ - ಅಘಾತವಾಗಿ ನುಗ್ಗಿದ ಪ್ರವಾಹದಿಂದ ಕಂಗಾಲಾಗಿ ಜನ ಅಂಗೈಯಲ್ಲಿ ಜೀವ ಹಿಡಿದು ನಲುಗಿದ್ದಾರೆ. ಹಲವರು ಶವವಾಗಿ ಕೊಚ್ಚಿಹೋಗಿದ್ದಾರೆ. ಜಾನುವಾರುಗಳು ಜೀವ ಉಳಿಸಿ ಕೊಳ್ಳಲಾಗದೆ ಹೆಣವಾಗಿ ತೇಲಿವೆ. ಇದ್ದಬದ್ದ ಸಣ್ಣಪುಟ್ಟ ವಸ್ತುಗಳು, ಮನೆಗಳು ನಾಶವಾಗಿವೆ- ನೀರಿನಲ್ಲಿ ಮುಳುಗಿವೆ.

ಈ ಸ್ಥಿತಿಯಲ್ಲಿ ಸರ್ಕಾರ ಮಾಡಿದ ಘನಕಾರ್ಯವೆಂದರೆ ಹಾನಿಯನ್ನು ಹೆಲಿಕಾಪ್ಟರ್‌ನಲ್ಲಿ ಕೂತು ಸರ್ವೆ ಮಾಡಿದ್ದು, ಕೇಂದ್ರದ ತಂಡವನ್ನು ಕರೆಸಿದ್ದು, ಪ್ರವಾಹದ ಸಂತ್ರಸ್ತರಿಗೆ ನೀಡಿದ ನೆರವು ಅಗತ್ಯಕ್ಕೆ ಅನುಗುಣವಿಲ್ಲ, ಹಲವೆಡೆ ನಿರ್ಲಕ್ಷಿಸಲಾಗಿದೆ.

ಸರ್ಕಾರದ ಅಂದಾಜಿನಂತೆ ಆದ ಆಸ್ತಿ ಹಾನಿ 1300 ಕೋಟಿ. ಕೇಂದ್ರದ ಮುಂದೆ ಪರಿಹಾರ ಬಯಸಿರುವುದು 1050 ಕೋಟಿ. ಇಷ್ಟು ಅನಾಹುತವಾದ ಬಳಿಕವಾದರೂ ಮೀನಮೇಷ ಎಣಿಸದೇ ಕೇಂದ್ರ - ರಾಜ್ಯ ಸರ್ಕಾರಗಳು ಕೂಡಲೇ ನೆರವಿಗೆ ಪೂರ್ಣ ಪ್ರಮಾಣದಲ್ಲಿ ಧುಮುಕಬೇಕು.



ಇನ್ನೂ ಸೋನಿಯಾರ ಭೇಟಿ, ಪ್ರಧಾನಿ ಭೇಟಿ ಎಂದು ಕಾಲಹರಣ ಮಾಡುವ ಅಮಾನವೀಯತೆ ನಿಲ್ಲಬೇಕು.

ಸರ್ಕಾರ ಹಸಿದ ಒಡಲಿಗೆ ಅರೆಕಾಸಿನ ಮಜ್ಜಿಗೆ ಹಾಕಿ ಬೀಗಿದರೆ ಆಕ್ರಂದನ ನಿಲ್ಲುವುದಿಲ್ಲ. ಇಂತಹ ಗಂಭೀರ ಸ್ಥಿತಿಯಲ್ಲಿ ಬೆಳಗಾಂವ ಜಿಲ್ಲೆಯ ಅಥಣಿ ಪ್ರದೇಶ ಅಪಾರ ಹಾನಿಗೆ ಒಳಗಾಗಿದೆ. ನಿರಾಶ್ರಿತರು ಸಾವಿರಾರು ಜನ. ಬದುಕು ಕೊಚ್ಚಿಹೋಗಿ ನೆಲೆ ತಪ್ಪಿದವರ ನೆರವಿಗೆ ನಾಗರಿಕರು ನೆರವಿನೊಂದಿಗೆ ಆಹಾರ ಸಂಗ್ರಹಿಸಲು ಧುಮುಕಿದ್ದು ರಾಮದುರ್ಗ - ಬೆಳಗಾಂವ ಪ್ರಾಂತ ರೈತ ಸಂಘ ಹಾಗೂ ಸಿಪಿಐ(ಎಂ) 'ನಿಮ್ಮ ಪ್ರತಿ ಮನೆಯಿಂದ ಕನಿಷ್ಠ ಹತ್ತು ರೊಟ್ಟಿ'ಯನ್ನಾದರೂ ಕೊಡಿ ಒಂದು ದಿನದ ಹಸಿವನ್ನಾದರೂ ಅದು ತಣಿಸೀತು' ಎಂದು ಕರೆ ಕೊಟ್ಟರು. ಇದಕ್ಕೆ ಬಂದ ಜನಸ್ಪಂದನ ಅದ್ಭುತ. ನಮ್ಮ ಮನವಿಗೆ ಈ ದಿನವೇ ಸಂಗ್ರಹವಾದದ್ದು 36,000 ರೊಟ್ಟಿಗಳು. ಜನತೆಯ ಮಾನವೀಯ ಸ್ಪಂದನದಿಂದ ಹೃದಯ ತುಂಬಿ ಬಂದಿದೆ ಎನ್ನುತ್ತಾರೆ ಸಿಪಿಐ(ಎಂ) ನಾಯಕ ವಿ.ಪಿ.ಕುಲಕರ್ಣಿಯವರು.

ಇಷ್ಟಾದ ಬಳಿಕವಾದರೂ ಅಧಿಕಾರಸ್ಥರಿಗೆ ತಾವು ಮಾಡಿದ್ದು ಸಾಲದು ಎಂದು ಅನಿಸೀತೆ? ಬರ-ನೆರೆಯ ಸಂಕಷ್ಟದಲ್ಲಿ ಜನ ಒದ್ದಾಡಿ ನರಳುತ್ತಿರುವಾಗ ದುರ್ಲಾಭ ಹೊಡೆವ ಯೋಚನೆಯಿಲ್ಲದೆ ನೆರವಿಗೆ ಪೂರ್ಣ ಪ್ರಮಾಣದಲ್ಲಿ ಮುಂದಾಗಲಿ.

**ಈವಾರ ಕರ್ನಾಟಕ ಒಂದು ನೋಟ**

— ಎಸ್.ವೈ.ಗುರುಶಾಂತ್

## ಜಾತ್ಯತೀತ ಜನತಾದಳದಲ್ಲಿನ ಒಡಕು ಅನಿವಾರ್ಯವೇ?

ಜಾತ್ಯತೀತ ಜನತಾದಳ ಮತ್ತೇ ವಿಭಜನೆಯತ್ತ ದಾಪುಗಾಲಿಡುತ್ತಿದೆ. ತಾಳ್ಮೆ ಸಂಯಮದ ಮಾತುಗಳ ಪ್ರದರ್ಶನವಿದ್ದರೂ ಉಭಯತ್ರರಲ್ಲಿ ಅಸಹನೆ, ಅವಿಶ್ವಾಸ ಕುದಿಯುತ್ತಲಿದೆ. ಪದಚ್ಯುತಿಗೊಳಿಸಿಯಾಗಿದೆ, ಆದರೆ ಶಿಸ್ತು ಪಾಲಿಸಿ ಪಕ್ಷ ಕಟ್ಟಲಿ ಎನ್ನುತ್ತಿದ್ದಾರೆ, ಹೊರಗೆ ನಿಂತಾಗಿದೆ ಆದರೆ ಇದು ನಮ್ಮ ಮನೆ ಎನ್ನುತ್ತಿದ್ದಾರೆ. ಆಡುವ ಇಂತಹ ಮಾತುಗಳ ಮರ್ಮ ಅವರಿಗೂ ಗೊತ್ತು, ಇವರಿಗೂ ಗೊತ್ತು. ಹೊರಹೋಗಲಿ ಎಂಬುದು - ಹೊರ ಹಾಕಲಿ ಎಂಬುದು ಎರಡು ಬಣಗಳ ನಡುವಿನಲ್ಲಿರುವ ಲೆಕ್ಕಾಚಾರ ಅಷ್ಟೆ. ವಿಭಜನೆ ಈ ಬಣಗಳ ಪಾಲಿಗೆ ಬಯಸಿ ಬಂದ ಅನಿವಾರ್ಯ ಭಾಗ್ಯ ಎಂದೇ ಬಗೆದಂತಿದೆ.

1999 ರ ಚುನಾವಣೆಯ ಹೊಸ್ತಿಲಲ್ಲಿ ಜನತಾದಳ ಒಡೆಯಿತು. ನಿನ್ನೆಯವರೆಗೂ ಬಿಜೆಪಿಯನ್ನು ಕ್ಯಾನ್ಸರ್ ಎಂದೇ ಕರೆದಿದ್ದ ಮುಖ್ಯಮಂತ್ರಿ ಜೆ.ಎಚ್.ಪಟೇಲರು ಮರುದಿನ ಅದರೊಂದಿಗೆ ಹಸ್ತಲಾಘವ ನೀಡುತ್ತಿದ್ದರು. ಇದನ್ನು ರಾಜಕೀಯವಾಗಿ - ಸೈದ್ಧಾಂತಿಕವಾಗಿ ವಿರೋಧಿಸಿದವರು ಜಾತ್ಯಾತೀತ ಜನತಾದಳವಾದರು, ಬಿಜೆಪಿಯ ಧೃತರಾಷ್ಟ್ರ ಆಲಿಂಗನಕ್ಕೆ ಸಿದ್ಧವಾದವರು ಸಂಯುಕ್ತ ಜನತಾದಳದವರು. ಮುಂದೆ ಚುನಾವಣೆಯಲ್ಲಿ ಅದರ ಫಲ ಉಭಯತ್ರರೂ ಅನುಭವಿಸುವಂತಾಯಿತು. ಕಾಂಗ್ರೆಸ್ ಅಧಿಕಾರಕ್ಕೇರಿ ಕೃಷ್ಣರು ಮುಖ್ಯಮಂತ್ರಿಗಳಾದರು. 2004 ರ ಚುನಾವಣೆಯಲ್ಲಿ ಬಿಜೆಪಿ ಸಖ್ಯದಲ್ಲಿದ್ದ ಜೆಡಿ(ಯು) ನೆಲೆಯನ್ನು ಕೋಮುವಾದಿಗಳಿಗೆ ಒಪ್ಪಿಸಿ ಕೃಶವಾಯಿತು. ಜೆಡಿ(ಎಸ್)ನ ಬಲ ಹೆಚ್ಚಿತು. ಆದರೆ ಸ್ವತಂತ್ರವಾಗಿ ಸರ್ಕಾರ ರಚಿಸಲು ಜನತೆ ಯಾರಿಗೂ ಪೂರ್ಣ ಅಧಿಕಾರ ಕೊಡಲಿಲ್ಲ. ಆಗ ಕೋಮುವಾದಿಗಳನ್ನು ದೂರ ಇಡಲೆಂದೇ ಘೋಷಿತವಾಗಿ ರಚಿತವಾದದ್ದು ಕಾಂಗ್ರೆಸ್-ಜೆಡಿ(ಎಸ್) ನ ಸಮ್ಮಿಶ್ರ ಸರ್ಕಾರ. ವಿಚಿತ್ರವೆಂದರೆ ಈ ಉದ್ದೇಶದ ಸಾಧನೆಯತ್ತ ಹೆಜ್ಜೆ ಇಡಲಾಯಿತೇ, ಜನಾದೇಶವನ್ನು ಗೌರವಿಸಿ ಅಧಿಕಾರ ನಡೆಸಲಾಯಿತೇ ಎಂಬುದನ್ನು ವರ್ಷ ಕಳೆದರೂ ವಿಮರ್ಶೆಗೆ ಒಡ್ಡಿಕೊಂಡಿಲ್ಲ.

ಕುಸಿದುಹೋಗಿದ್ದ ಜನತಾದಳ (ಜಾತ್ಯಾತೀತ)ಕ್ಕೆ ಪುನಶ್ಚೇತನ ತುಂಬಿ, ಆತ್ಮವಿಶ್ವಾಸ ಮೂಡಿಸಿ ಮೂರನೇ ಪರ್ಯಾಯ ವೃದ್ಧಿಗೊಳಿಸುವ ದಿಶೆಯಲ್ಲಿ ಶ್ರಮಿಸಿದವರಲ್ಲಿ ದೇವೇಗೌಡರು, ಸಿದ್ದರಾಮಯ್ಯ ನಂತಹವರು ಪ್ರಮುಖರು. ಈಗ ಒಡಕು ಬಂದಿರುವುದು ಇವರಲ್ಲೇ. ಜನತಾದಳ ಒಡೆಯುವುದು ಕೆಲವು ನಾಯಕರು ಮತ್ತೆ ಒಂದುಗೂಡುವುದು ನಡೆದೇ ಬಂದ ವಿದ್ಯಮಾನ. ಇದು ಬಲಪಂಥೀಯ ಪಕ್ಷಗಳಲ್ಲಿ ಅಂತರ್ಗತ ಸಂಗತಿ.

ಜನತಾದಳ(ಎಸ್) ಮತ್ತೆ ವಿಭಜನೆ



ಯಾಗುವುದನ್ನು ತಡೆಯಲು ಸಾಧ್ಯವಿಲ್ಲವೇ? ಒಡಕು ತಡೆಯಲಾಗುತ್ತಿರಲಿಲ್ಲವೇ? ಸಾಧ್ಯವಿತ್ತು. ಮುಕ್ತ ಮಾತುಕತೆ, ಗ್ರಹಿಕೆಗಳ ಸರಿಪಡಿಸಿ ಕೊಳ್ಳುವಿಕೆಯಿಂದ ಆಗಬಹುದಿತ್ತು. ಆದರೆ ಗೌಡರೂ- ಸಿದ್ದರಾಮಯ್ಯನವರೂ ಪರಸ್ಪರ ಕುಳಿತು ಚರ್ಚಿಸುವ ಪರಿಸ್ಥಿತಿಯೇ ಇಲ್ಲವಾಗಿತ್ತು. ಪಕ್ಷದ ನಾಯಕರು ಕರೆದ ಶಾಸಕಾಂಗ ಸಭೆಗೆ ಶಾಸಕಾಂಗ ಪಕ್ಷದ ನಾಯಕರಾದ ಸಿದ್ದರಾಮಯ್ಯ ಹಾಗೂ ಸಚಿವದ್ವಯರಿಗೆ ಆಹ್ವಾನ ಹೋಗಲೇ ಇಲ್ಲ. ಅಂದರೆ ಸಭೆಗೂ ಮೊದಲು ಕ್ರಮ ನಿರ್ಧಾರವಾಗಿತ್ತು ಎನ್ನಿಸುತ್ತದೆ. ಈಗ ಪ್ರಜಾಪ್ರಭುತ್ವ, ಶಿಸ್ತಿನಕುರಿತು ಮಾತನಾಡುತ್ತಿರುವುದಕ್ಕೆ ಅರ್ಥ ಬಂದೀತೆ? ಜೆಡಿ(ಎಸ್) ರಾಷ್ಟ್ರಾಧ್ಯಕ್ಷರಾದ ದೇವೇಗೌಡರು ಮತ್ತೆ ರಾಜ್ಯಾಧ್ಯಕ್ಷ ತಿಪ್ಪಣ್ಣನವರು ಅವರದೇ ಕ್ರಮವನ್ನು ಸಮರ್ಥಿಸಿಕೊಳ್ಳುತ್ತಿದ್ದಾರೆ. ಹಿರಿಯ ಸಚಿವರಾದ ಸಿಂಧ್ಯಾ, ಉಪ ಮುಖ್ಯಮಂತ್ರಿಯಾಗಿರುವ ಎಂ.ಪಿ.ಪ್ರಕಾಶರವರು ಈ ನಡುವೆ ಕ್ರಮವನ್ನು ಸಮರ್ಥಿಸಿಕೊಂಡಿದ್ದಾರೆ. ಸಿದ್ದರಾಮಯ್ಯನವರು ಹಿರಿಯ ಸಚಿವರು, ಮುಂದಿನ 'ಹರಕೆಯ ಕುರಿ' ಎಂದು ಕರೆದಿದ್ದಾರೆ. ಇವೆಲ್ಲಾ ಅನಪೇಕ್ಷಿತ ಘಟನೆಗಳು.

ಈ ನಡುವೆಯೇ ಮಂತ್ರಿಮಂಡಲದ ಪುನರ್ ರಚನೆಯ ಕಸರತ್ತು ನಡೆದಿದೆ. ವಿವಿಧ ಜಾತಿ ಸಂಯೋಜನೆ - ವಿಭಾಗಗಳನ್ನು ಸೆಳೆದು ಆಗಬಹುದಾದ ಹಾನಿ ತುಂಬುವ ಕಸರತ್ತು ಆರಂಭಗೊಂಡಿದೆ. ಸಿದ್ದರಾಮಯ್ಯನ, ಗೆಳೆಯರು 'ಅಹಿಂದ' ಸಮಾವೇಶಗಳ ಮೂಲಕ ಬಲ ತುಂಬಿಕೊಳ್ಳುವ ಅಡಿ ಇಟ್ಟಿದ್ದಾರೆ.

ಜೆಡಿ(ಎಸ್) ನ ನಡುವಿನ ಬಿರುಕು ಕೂಡಿಸಲಾಗದ್ದು ಎಂಬಂತೆ ಕಂಡರೂ, ಈಗಲೂ ಕಾಲಮಿಂಚಿಲ್ಲ. ಕಾಂಗ್ರೆಸ್ - ಬಿಜೆಪಿ ಪಕ್ಷಗಳಿಗೆ ಮೂರನೇ ಜಾತ್ಯತೀತ ಪರ್ಯಾಯವಾಗಿ ಜೆಡಿ(ಎಸ್) ಬಲಗೊಳ್ಳುವುದು ಕಾಂಗ್ರೆಸ್-ಬಿಜೆಪಿಗಳಿಗೆ ಬೇಕಿಲ್ಲ. ದಳ ದುರ್ಬಲವಾಗುವುದು ರಾಜ್ಯದ-ರಾಷ್ಟ್ರದ ರಾಜಕಾರಣದಲ್ಲಿ ಹಾನಿಯನ್ನು ತರುವ ಸಂಗತಿಯಾಗಿದೆ. ಗೌಡರ-ಸಿದ್ದರಾಮಯ್ಯನವರ ಬಣಗಳ ಲೆಕ್ಕಾಚಾರ ಏನೇ ಇರಲಿ, ರಾಜ್ಯದಲ್ಲಿ ಕೋಮುವಾದಿ ಬಿಜೆಪಿ ಅಪಾಯ ಹೆಚ್ಚಾಗಿದೆ ಎಂಬುದನ್ನು ಪರಿಗಣಿಸಲೇಬೇಕು. ಕಾಂಗ್ರೆಸ್‌ನ ಕೈಬಿಟ್ಟು ಬಿಜೆಪಿಯೊಂದಿಗೆ ಸೇರಿ ಅಧಿಕಾರ ನಡೆಸಬೇಕೆಂಬುದು ಸಹ ಅತ್ಯಂತ ಅಪಾಯಕಾರಿ ಸೂಚನೆ. ಹೇಗೋ ಸರ್ಕಾರ - ಅಧಿಕಾರ ಎಂಬುದು ರಾಜಕೀಯ ದಿವಾಳಿತನದ ಸೂಚಕ. ಈ ಅವನತಿಯ ಹಾದಿ ಹಿಡಿಯುವುದು ಕೇವಲ ನಾಯಕರು ಮಾತ್ರವಲ್ಲ - ಜನತೆಯನ್ನು ತಳ್ಳಲಾಗುವುದು ಎಂಬುದನ್ನು ನೆನಪಿನಲ್ಲಿಡಬೇಕು. ಆದ್ದರಿಂದ ಈ ಹಿನ್ನೆಲೆಯಲ್ಲಿ ದಳದ ಈ ಉಭಯ ನಾಯಕರಲ್ಲಿ ಪುನರಾಲೋಚನೆ ಅಗತ್ಯ. ಇಲ್ಲವಾದರೆ ಜನತೆ ಕ್ಷಮಿಸಲಾರರು ಎಂಬುದು ನೆನಪಿರಬೇಕು.

**ತೇಪೆ ಹಚ್ಚಿಕೊಂಡಿರುವ ಬಿಜೆಪಿ**

ರಾಜ್ಯದಲ್ಲಿ ಬಹಳ ಬಿರುಸಿನ ಬೆಳವಣಿಗೆಗಳು ಇರುವಾಗ ತತ್ವನಿಷ್ಠ ಪಕ್ಷವೆಂದು ಬೊಗಳೆ ಬಿಡುವ ಬಿಜೆಪಿಯಲ್ಲಿ ಸ್ಫೋಟಗೊಂಡ ಭಿನ್ನಮತ ಗಮನಾರ್ಹ. ಕಾಂಗ್ರೆಸ್ ಆಗಲಿ, ದಳವೇ ಆಗಲಿ ಅವರೊಂದಿಗೆ ಕೈಜೋಡಿಸಿ ಅಧಿಕಾರ ಅನುಭವಿಸಿಯೇ ಬಿಡಬೇಕು ಎಂದು ಯಡಿಯೂರಪ್ಪ ಮತ್ತವರ ಬಣ ನಡೆಸಿದ ಸರ್ಕಸ್ಸು ಬಿಜೆಪಿ ಭಿನ್ನ ಪಕ್ಷ ಎಂಬುದನ್ನು ಅಣಕ ವಾಡಿತು. ಇದು ಸಹಜವಾದ ವಿದ್ಯಮಾನ.


ಇದು ಮಾಜಿ ಸಚಿವ ಅನಂತಕುಮಾರ್, ವಿರೋಧ ಪಕ್ಷದ ನಾಯಕ ಯಡಿಯೂರಪ್ಪ ಬಣಗಳ ನಡುವಿನ ಘರ್ಷಣೆ ಎಂಬುದು ಹೊರನೋಟದ ಸಂಗತಿಯಾದರೂ ಅಧಿಕಾರ ಹಿಡಿವ ಆಸೆ ಹುಟ್ಟಿಸಿ ಒಂದಿಷ್ಟು ಜನರನ್ನು ಸೆಳೆದು, ಜನರಿಂದ ತಿರಸ್ಕಾರಕ್ಕೆ ಒಳಗಾಗುತ್ತಿರುವ ಬಿಜೆಪಿಯೊಳಗಿನ ಆಂತರಿಕ ತಳಮಳವಿದು. ಆರ್.ಎಸ್.ಎಸ್. ನ ಕಪಿಮುಷ್ಠಿ, ನಿಯಂತ್ರಣವನ್ನು ಧಿಕ್ಕರಿಸುವ ಎರಡೂ ಗುಂಪುಗಳ ನಡುವಿನ ಕಾದಾಟವಿದು. ಇನ್ನೇನು 50 ಕ್ಕೂ ಅಧಿಕ ಶಾಸಕರೊಂದಿಗೆ ಯಡಿಯೂರಪ್ಪ ಬಣ ಹೊರಬರುತ್ತದೆ, ಬಿಜೆಪಿಯಲ್ಲಿ ಒಡಕು ನಿಶ್ಚಿತ ಎಂಬಂತಹ ಸನ್ನಿವೇಶ ಏರ್ಪಟ್ಟಾಗ ಕೇಂದ್ರದ ನಾಯಕರು ಓಡೋಡಿ ಬಂದು ತೇಪೆ ಹಚ್ಚಿದ್ದು, ರಾಜಕೀಯ ಸನ್ಯಾಸಿ ಪೇಜಾವರರು ಮಂತ್ರ ಊದಿದ್ದೂ ಎಷ್ಟು ದಿನ ನಡೆಯುತ್ತದೆ ಎಂಬುದು ಕುತೂಹಲಕಾರಿಯಾಗಿದೆ. ಬಲಪಂಥೀಯ ರಾಜಕಾರಣದ ಎಲ್ಲಾ ಸೋಗಲಾಡಿತನ, ವಂಚನೆ, ಜನದ್ರೋಹಗಳು ಉಗ್ರ ಬಲಪಂಥೀಯ ಬಿಜೆಪಿಯಲ್ಲಿಯೂ ಮನೆ ಮಾಡಿರುವುದು ಹೊಸ ಸಂಗತಿಯೇನಲ್ಲ.

ಬಿಜೆಪಿಯಲ್ಲಿ ಹಚ್ಚಲಾದ ತೇಪೆ ಎಂದು ಹರಿಯುತ್ತದೆ - ಕಾದುನೋಡಿ!

# ಬಿಎಸ್‌ಎನ್‌ಎಲ್ ದಿನಗೂಲಿ ನೌಕರರ ಬೇಡಿಕೆ ಈಡೇರಿಕೆಗಾಗಿ ಮತ ಪ್ರದರ್ಶನ

ದ.ಕ ಜಿಲ್ಲೆಯಾದ್ಯಂತ ಬಿಎಸ್‌ಎನ್‌ಎಲ್ ಎಕ್ಸ್‌ಚೇಂಜ್ ಆಫೀಸ್‌ಗಳಲ್ಲಿ ದುಡಿಯುವ ದಿನಕೂಲಿ ಮತ್ತು ಗುತ್ತಿಗೆ ಕಾರ್ಮಿಕರು ತಮ್ಮ ಬೇಡಿಕೆಗಳಾದ ಎಕ್ಸ್‌ಚೇಂಜ್‌ಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕಾರ್ಮಿಕರ ಸಂಖ್ಯೆ ಕಡಿತಗೊಳಿಸಬಾರದು, ಒಂದು ಗಂಟೆಗಿಂತ ಹೆಚ್ಚು ಅಧಿಕ ಕೆಲಸ ನಿರ್ವಹಿಸಿದರೆ ಹೆಚ್ಚುವರಿ ವೇತನ ನೀಡಬೇಕು, ಕನಿಷ್ಟ ವೇತನ ಜ್ಯಾರಿಗೊಳಿಸಬೇಕು, ಕೆಲಸದ ಭದ್ರತೆ ಹಾಗೂ ಎಲ್ಲಾ ಕಾರ್ಮಿಕರಿಗೆ ಗುರುತು ಚೀಟಿ ನೀಡಬೇಕು, ಪ್ರೊವಿಡೆಂಟ್ ಫಂಡ್ ರಶೀಧಿ ನೀಡಬೇಕು, ತುಟ್ಟಿಭತ್ಯೆ, ರಜಾಸಂಬಳ, ಇಎಸ್‌ಐ ಸೌಲಭ್ಯ ನೀಡಬೇಕೆಂಬ ಹಲವಾರು ಬೇಡಿಕೆಗಳನ್ನು ಒತ್ತಾಯಿಸಿ 2.8.2005 ರಂದು ಮಂಗಳೂರಿನಲ್ಲಿ ಮೆರವಣಿಗೆ ನಡೆಸಿ ಬಿಎಸ್‌ಎನ್‌ಎಲ್ ಮುಖ್ಯ ಕಛೇರಿ ಮುಂದುಗಡೆ ಪ್ರತಿಭಟನಾ ಪ್ರದರ್ಶನ ನಡೆಸಿದರು.

ಪ್ರದರ್ಶನಗಾರರನ್ನು ಉದ್ದೇಶಿಸಿ ಸಿಐಟಿಯು ಕರ್ನಾಟಕ ರಾಜ್ಯ ಸಮಿತಿ ಅಧ್ಯಕ್ಷರಾದ ಬಿ.ಮಾಧವರವರು ಮಾತನಾಡುತ್ತಾ ಟೆಲಿಕಾಂ ಈಗ ಬಿಎಸ್‌ಎನ್‌ಎಲ್ ಆಗಿದೆ. ಎನ್‌ಡಿಎ ಸರಕಾರದ ನೀತಿಯನ್ನು ಯುಪಿಎ ಸರಕಾರ ಅಳವಡಿಸುತ್ತಿದೆ. ಟೆಲಿಕಾಂ ರಂಗದಲ್ಲಿ ಶೇ.74 ವಿದೇಶಿ ನೇರ ಹೂಡಿಕೆಗೆ ಅವಕಾಶ ಅಳವಡಿಸುತ್ತಿದೆ. ಟೆಲಿಕಾಂ ಕಾರ್ಮಿಕರಲ್ಲಿ ಅಭದ್ರತೆಯ ವಾತಾವರಣ ಇದೆ. ಎಲ್ಲವನ್ನು ಗುತ್ತಿಗೆ ನೆಲೆಯಲ್ಲಿ ಕೆಲಸ ಮಾಡಿಸಲಾಗುತ್ತಿದೆ. ಕಾರ್ಮಿಕ ಕಾನೂನುಗಳನ್ನು ಸಡಿಲಗೊಳಿಸಲಾಗುತ್ತಿದೆ. ಕಾರ್ಮಿಕರು ಹೋರಾಟದ ದಾರಿ ಹಿಡಿಯುವುದು ಅನಿವಾರ್ಯವಾಗಿದೆ ಎಂದರು. ಬಿಎಸ್‌ಎನ್‌ಎಲ್ ಎಕ್ಸ್‌ಚೇಂಜ್‌ಗಳಲ್ಲಿ ಕಾರ್ಮಿಕರ ಸಂಖ್ಯೆ ಕಡಿತಗೊಳಿಸುವ ಪ್ರಸ್ತಾಪ ಕಾರ್ಮಿಕ ವಿರೋಧಿಯಾಗಿದೆ ಇದನ್ನು ಒಪ್ಪಲು ಸಾಧ್ಯವಿಲ್ಲವೆಂದೂ ಅವರು ಹೇಳಿದರು.




ನೌಕರರ ಸಂಘದ ಅಧ್ಯಕ್ಷರಾದ ಬಿ.ಎಂ. ಭಟ್‌ರವರು ಮಾತನಾಡುತ್ತಾ ಬಿಎಸ್‌ಎನ್‌ಎಲ್ ಎಕ್ಸ್‌ಚೇಂಜ್ ಆಫೀಸ್‌ಗಳಲ್ಲಿ ಕಾರ್ಮಿಕರಿಂದ ರಾತ್ರಿ ಹಗಲು ಕೆಲಸ ಮಾಡಿಸಿ ಅವರಿಗೆ ಯಾವುದೇ ಸವಲತ್ತು ನೀಡದೆ ಅವರನ್ನು ಗುಲಾಮರಂತೆ ದುಡಿಸುತ್ತಿರುವುದನ್ನು ಒಪ್ಪಲು ಸಾಧ್ಯವಿಲ್ಲ. ಕಾರ್ಮಿಕರಿಗೆ ಕಾನೂನು ಪ್ರಕಾರ ನೀಡಬೇಕಾದ ವೇತನ ನೀಡದೇ ಶೋಷಣೆ ಮಾಡುತ್ತಿರುವುದು, ವಿನಾಕಾರಣ ಕೆಲಸದಿಂದ ತೆಗೆದು ಹಾಕುವುದನ್ನು ಕಾರ್ಮಿಕರು ಪ್ರಶ್ನಿಸಬೇಕಾಗಿದೆ ಎಂದರು.

ಸಿಐಟಿಯು ದಕ್ಷಿಣ ಕನ್ನಡ ಜಿಲ್ಲಾಸಮಿತಿ ಪ್ರಧಾನ ಕಾರ್ಯದರ್ಶಿ ವಸಂತ ಆಚಾರಿಯವರು ಮಾತನಾಡುತ್ತಾ ಬಿಎಸ್‌ಎನ್‌ಎಲ್ ಎಕ್ಸ್‌ಚೇಂಜ್ ಕಛೇರಿಗಳಲ್ಲಿ ಯಾವುದೇ ಕಾರಣಕ್ಕೂ ಕಾರ್ಮಿಕರ ಸಂಖ್ಯೆ ಕಡಿತಗೊಳಿಸುವ ನೆಪದಲ್ಲಿ ಕಾರ್ಮಿಕರನ್ನು ಕೆಲಸದಿಂದ ತೆಗೆದರೆ ಇಡೀ ದೂರವಾಣಿ ಇಲಾಖೆಯನ್ನು ಬಂದ್ ಮಾಡುವ ಅನಿವಾರ್ಯತೆ ಇದೆ. ಈ ಕಾರ್ಮಿಕರು ಈಗಾಗಲೇ ಹಲವಾರು ವರ್ಷಗಳಿಂದ ಕಡಿಮೆ ವೇತನ, ಹಲವಾರು ಕಷ್ಟನಷ್ಟಗಳನ್ನು ಅನುಭವಿಸಿಯೂ ದುಡಿದಿರುತ್ತಾರೆ. ಈಗ ಅವರು ಕೆಲಸ ಬಿಡಲು ಸಾಧ್ಯವಿಲ್ಲ. ಗುತ್ತಿಗೆದಾರರು ಕಾರ್ಮಿಕರ ವೇತನದಲ್ಲಿ ಪ್ರೊವಿಡೆಂಟ್ ಫಂಡ್, ಇಎಸ್‌ಐಗೆ ಮೊತ್ತ ಕಡಿತಗೊಳಿಸಿದ್ದರೂ ಇಲಾಖೆಗೆ ಪಾವತಿಸದೆ ಕಾರ್ಮಿಕರಿಗೆ ಮೋಸ ಮಾಡುತ್ತಿರುವುದನ್ನು ತಡೆಯಬೇಕಾಗಿದೆ. ದಿನಕೂಲಿ ನೌಕರರು ಎಂಬ ನೆಲೆಯಲ್ಲಿ ಕಾನೂನು ಸವಲತ್ತು ನೀಡದಿರುವುದು ಸಮರ್ಥನೀಯವಲ್ಲ. ಸಿಐಟಿಯು ಸಂಘಟನೆ ಕಾರ್ಮಿಕ ವರ್ಗದ ಪಕ್ಷಪಾತಿ. ರಾಜಿ ಇಲ್ಲದ ಹೋರಾಟ ನಡೆಸಲಾಗುವುದು ಎಂದರು.

ಬಿಎಸ್‌ಎನ್‌ಎಲ್ ಡೆಪ್ಯೂಟಿ ಜನರಲ್ ಮೇನೇಜರ್‌ರವರಿಗೆ ಉನ್ನತಮಟ್ಟದ ನಿಯೋಗವು ಮನವಿ ನೀಡಿ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿತು.

ಪ್ರಾರಂಭದಲ್ಲಿ ಜಿಲ್ಲಾಸಮಿತಿ ಕಾರ್ಯದರ್ಶಿ ನವೀನ್‌ರವರು ಸ್ವಾಗತಿಸಿ, ಉಪಾಧ್ಯಕ್ಷರಾದ ಮಧುರವರು ಧನ್ಯವಾದ ನೀಡಿದರು.

- ವಸಂತ ಆಚಾರಿ

# ಹೋಂಡಾ ಕಾರ್ಮಿಕರ ಮೇಲಿನ ದೌರ್ಜನ್ಯ ಖಂಡಿಸಿ ಮಂಗಳೂರಿನಲ್ಲಿ ಪ್ರತಿಭಟನೆ

ಹರ್ಯಾಣ ಗುರ‍್ಗಾವ್ ಹೊಂಡಾ ಮೋಟಾರ್ ಸೈಕಲ್ ಮತ್ತು ಸ್ಕೂಟರ್ ಕಾರ್ಮಿಕರ ಮೇಲೆ ಪೋಲೀಸರು ನಡೆಸಿರುವ ದೌರ್ಜನ್ಯವನ್ನು ಖಂಡಿಸಿ 01.08.2005ರಂದು ಮಂಗಳೂರಿನ ಜಿಲ್ಲಾಧಿಕಾರಿಗಳ ಕಛೇರಿ ಮುಂದುಗಡೆ ಸಿಐಟಿಯು ಮತ್ತು ಎಐಟಿಯುಸಿ ಕಾರ್ಯಕರ್ತರು ಪ್ರತಿಭಟನಾ ಪ್ರದರ್ಶನ ನಡೆಸಿದರು.

ಪ್ರತಿಭಟನಗಾರರನ್ನು ಉದ್ದೇಶಿಸಿ ಸಿಐಟಿಯು ಕರ್ನಾಟಕ ರಾಜ್ಯ ಸಮಿತಿ ಅಧ್ಯಕ್ಷರಾದ ಬಿ.ಮಾಧವರವರು ಮಾತನಾಡುತ್ತಾ ಹರ್ಯಾಣ ಪೋಲೀಸರು ಕಾರ್ಮಿಕರ ಮೂಲಭೂತ ಹಕ್ಕುಗಳನ್ನು ಹತ್ತಿಕ್ಕಲು ಮಾನವೀಯತೆಯೇ ಇಲ್ಲದಂತೆ ಕಾರ್ಮಿಕರ ಮೇಲೆ ಹಲ್ಲೆ ನಡೆಸಿರುವುದು ಖಂಡನೀಯ. ಹೋಂಡಾ ಮೋಟಾರ್ ಸೈಕಲ್ ಮತ್ತು ಸ್ಕೂಟರ್ ಕಾರ್ಮಿಕರು ಆಡಳಿತ ವರ್ಗ ಕಾರ್ಮಿಕ ಕಾನೂನು ಸವಲತ್ತುಗಳನ್ನು ಜಾರಿಗೊಳಿಸಲು ಸಂಘವನ್ನು ರಚಿಸಲು ಹೊರಟಾಗ ಆಡಳಿತ ವರ್ಗ ಕಾರ್ಮಿಕರ ಮೇಲೆ ದಾಳಿಯನ್ನು ನಡೆಸಿತು. ಈ ದಾಳಿಯ ವಿರುದ್ಧ 25.07.2005ರಂದು ಮೆರವಣಿಗೆ ನಡೆಸಿದಾಗ ಹರ್ಯಾಣ ಗುರ‍್ಗಾವ್ ಪೋಲೀಸರು ಕಾರ್ಮಿಕರ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿದರು. ಇದು ಸರಕಾರದ ನೀತಿಯ ಪ್ರತಿಫಲನವಾಗಿದೆ ಎಂದು ಅವರು ಹೇಳಿದರು. ದೇಶವ್ಯಾಪಿ ಪ್ರತಿಭಟನೆ, ಪಾರ್ಲಿಮೆಂಟನಲ್ಲಿ ಚರ್ಚೆ ನಡೆದು ಆಡಳಿತ ವರ್ಗ ಒಪ್ಪಂದಕ್ಕೆ ಬಂದಿದೆ. ಆದರೆ ಈ ಒಪ್ಪಂದದಲ್ಲಿ ಹಲವಾರು ಕಾರ್ಮಿಕ ವಿರೋಧಿ ಶರತ್ತುಗಳನ್ನು ಅಳವಡಿಸಲಾಗಿದೆ ಎಂದ ಅವರು ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಮಣೆ ಹಾಕುವ ಸರಕಾರದ ನೀತಿಯ ವಿರುದ್ಧ ಕಾರ್ಮಿಕರು ಹೋರಾಟ ನಡೆಸಬೇಕು ಎಂದು ಕರೆ ನೀಡಿದರು.

ಎಐಟಿಯುಸಿ ಜಿಲ್ಲಾ ಕಾರ್ಯದರ್ಶಿ ಚೆಂದಪ್ಪ ಅಂಚನ್‌ರವರು ಮಾತನಾಡುತ್ತಾ ಯುಪಿಎ ಸರಕಾರ ಎನ್‌ಡಿಎ ಸರಕಾರದ ನೀತಿಗಳನ್ನೇ ಅಳವಡಿಸುತ್ತಿರುವುದು ಖಂಡನೀಯ. ಕಾರ್ಮಿಕ ಕಾನೂನುಗಳನ್ನು ಜಾರಿಗೊಳಿಸಲು ಒತ್ತಾಯಿಸಿ ನಡೆಯುವ ಹೋರಾಟದ ಮೇಲೆ ದಾಳಿ ನಡೆಸುತ್ತಿರುವ ಪೋಲೀಸ್ ನೀತಿ ದೇಶವ್ಯಾಪಿ ಪ್ರತಿರೋಧವನ್ನು ಎದುರಿಸುತ್ತಿದೆ. ಯುಪಿಎ ಕೇಂದ್ರ ಸರಕಾರ ಕಾರ್ಮಿಕರ ಹಕ್ಕುಗಳನ್ನು ರಕ್ಷಿಸಲು ಮುಂದಾಗಬೇಕೆಂದು ಅವರು ಒತ್ತಾಯಿಸಿದರು.

ಪ್ರತಿಭಟನಾ ಪ್ರದರ್ಶನದ ನೇತೃತ್ವವನ್ನು ಸಿಐಟಿಯು ಮುಖಂಡರಾದ ಕೆ.ಆರ್.ಶ್ರೀಯಾನ್, ಜೆ.ಬಾಲಕೃಷ್ಣ ಶೆಟ್ಟಿ, ಸುಕುಮಾರ್, ಯು.ಬಿ.ಲೋಕಯ್ಯ, ಪದ್ಮಾವತಿ ಎಸ್.ಶೆಟ್ಟಿ, ರಾಮಚಂದ್ರ ಉಚ್ಚಿಲ್, ಯಾದವಶೆಟ್ಟಿ, ಎಐಟಿಯುಸಿ ನಾಯಕರಾದ ವಿಶ್ವನಾಥ ನಾಯಕ್, ಸಂಜೀವ ಪಿ., ಹೆನ್ರಿ ಲೋಬೋ, ಬೋಜ ಕೋಟ್ಯಾನ್, ಪ್ರಭಾಕರ ರಾವ್ ಮುಂತಾದವರು ವಹಿಸಿದ್ದರು.

ಪ್ರಾರಂಭದಲ್ಲಿ ಸಿಐಟಿಯು ದ.ಕ.ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಸಂತ ಆಚಾರಿ ಪ್ರಾಸ್ತಾವಿಕ ಭಾಷಣ ಮಾಡಿ, ಎ.ಐ.ಟಿ.ಯು.ಸಿ. ಮುಂದಾಳು ಶೇಖರ್‌ರವರು ಧನ್ಯವಾದ ನೀಡಿದರು.

ವಸಂತ ಆಚಾರಿ



# ಆಟೋರಿಕ್ಷಾ ಮತ್ತು ವಾಹನ ಚಾಲಕರ ಸಂಘದ 4ನೇ ವಾರ್ಷಿಕ ಮಹಾಸಭೆ

ಕುಂದಾಪುರ ತಾಲೂಕು ಆಟೋರಿಕ್ಷಾ ಮತ್ತು ವಾಹನ ಚಾಲಕರ ಸಂಘ(ಸಿಐಟಿಯು) ಇದರ 4ನೇ ವಾರ್ಷಿಕ ಮಹಾಸಭೆಯು ಶಶಿಧರ ಸಭಾಭವನದಲ್ಲಿ ಎಚ್.ಕರುಣಾಕರರವರ ಅಧ್ಯಕ್ಷತೆಯಲ್ಲಿ ಸೇರಿತು.

ಇತ್ತೀಚೆಗೆ ನಿಧನಗೊಂಡ ಕುಂದಾಪುರ ಸಿಪಿಐ(ಎಂ) ಮುಖಂಡ ವಿ.ಆನಂದ ದೇವಾಡಿಗ ಹಾಗೂ ಸಿಪಿಐ(ಎಂ) ಪಕ್ಷದ ಮಾಜಿ ಶಾಸಕರು ಮತ್ತು ಪಕ್ಷದ ರಾಜ್ಯ ಸಮಿತಿಯ ಸದಸ್ಯರಾದ ಕಾಮ್ರೇಡ್ ಟಿ.ಎಸ್. ಮಣಿಯವರಿಗೆ ಎಲ್ಲರೂ ಒಂದು ನಿಮಿಷ ಮೌನ ಆಚರಿಸುವ ಮೂಲಕ ತೀವ್ರ ಸಂತಾಪ ವ್ಯಕ್ತಪಡಿಸಲಾಯಿತು,

ಮುಖ್ಯ ಅತಿಥಿಯಾಗಿ ಬಂದ ಅಬ್ರಹಾಂ ಕರ್ಕಡರವರು ಮಾತನಾಡಿ ಶಿಸ್ತಿನಿಂದ ಸಂಘಟನೆಯನ್ನು ಉಳಿಸಿ - ಬೆಳೆಸಿಕೊಂಡು ಹೋಗಬೇಕು ಹಾಗೂ ಸಮಸ್ಯೆಗಳ ಪರಿಹಾರಕ್ಕೆ ಸಂಘಟಿತ ಹೋರಾಟ ಜಿಲ್ಲೆಯಲ್ಲೂ - ರಾಜ್ಯವ್ಯಾಪಿಯಾಗಿಯೂ ನಡೆಯಬೇಕೆಂದು ಹೇಳಿದರು.

ಸಿಐಟಿಯುವಿನ ರಾಜ್ಯ ಸಮಿತಿಯ ಉಪಾಧ್ಯಕ್ಷರಾದ ಕೆ.ಶಂಕರ್‌ರವರು ಸಭೆಯನ್ನುದ್ದೇಶಿಸಿ ಮಾತನಾಡಿ, ಆಟೋರಿಕ್ಷಾ ಚಾಲಕರು ಹಾಗೂ ಇತರ ವಾಹನ ಚಾಲಕರು ತಮ್ಮ ಉದ್ಯೋಗ ಭದ್ರತೆಗಾಗಿ, ಸಾಮಾಜಿಕ ನ್ಯಾಯ ಮತ್ತು ಸೌಲಭ್ಯಗಳಿಗಾಗಿ ಸಂಘಟನೆಯನ್ನು ವಿಸ್ತರಿಸಿ ಬೆಳೆಸಲು ಮುಂದಾಗಬೇಕೆಂದು ಕರೆ ನೀಡಿದರು. ಸರಕಾರದ ತಪ್ಪು ಆರ್ಥಿಕ ನೀತಿಯ ವಿರುದ್ಧ ಐಕ್ಯ ಹೋರಾಟ ನಡೆಸಬೇಕೆಂದು ಹೇಳಿ, ಆಹಾರ, ಭೂಮಿ ಮತ್ತು ಉದ್ಯೋಗಕ್ಕಾಗಿ ರಾಷ್ಟ್ರವ್ಯಾಪಿ ನಡೆಯುವ ಹೋರಾಟಕ್ಕೆ ಬೆಂಬಲ ನೀಡಬೇಕೆಂದು ಕೇಳಿಕೊಂಡರು.

ಸಭೆಯ ಅಧ್ಯಕ್ಷತೆ ವಹಿಸಿದ ಎಚ್.ಕರುಣಾಕರರು ಮಾತನಾಡಿ ಸಂಘದ ಸ್ವಂತ ಕಛೇರಿಯನ್ನು ಸದ್ಯವೇ ಉದ್ಘಾಟನೆ ಮಾಡಲಿದ್ದು, ಆಟೋರಿಕ್ಷಾ ಚಾಲಕರು ಮತ್ತು ಇತರ ವಾಹನ ಚಾಲಕರ ಸಂಘಟನೆಯ ಕೇಂದ್ರವೊಂದು ಸ್ಥಾಪನೆಯಾಗಲಿದೆ ಎಂದು ಹರ್ಷ ವ್ಯಕ್ತಪಡಿಸಿದರು. ನಿಸ್ವಾರ್ಥ ಕಾರ್ಯಕರ್ತರ ಪ್ರಯತ್ನದಿಂದಾಗಿ ಸಂಘದ ನಿಧಿ ಸಂಗ್ರಹ ಮಾಡಲು ಹಾಗೂ ಇಲ್ಲಿಯವರೆಗೆ ಶಿಸ್ತಿನ ಸಂಘಟನೆಯಾಗಿ ಉಳಿಸಲು ಸಾಧ್ಯವಾಯಿತೆಂದರು. ಅಪಘಾತ ಪರಿಹಾರ, ಸಾಮಾನ್ಯ ವಿಮೆಯಿಂದಾಗಿ ಪರಿಹಾರ ಹಾಗೂ ತೀರಾ ಕಷ್ಟಕ್ಕೊಳಗಾದ ಚಾಲಕರಿಗೆ ತುರ್ತಿನ ನೆರವು ನೀಡಲು ಸಂಘವು ಸಮರ್ಥವಾಗಿದೆ ಎಂದು ವಿವರಿಸಿದರು.

ಪುರಸಭಾ ವ್ಯಾಪ್ತಿಯಲ್ಲಿ ರಸ್ತೆಗಳು ದುರಸ್ತಿಯಾಗದೇ ಸಾಮಾನ್ಯ ಜನರಿಗೆ ನಡೆಯಲು ಹಾಗೂ ವಾಹನಗಳು ಚಲಿಸಲು ಕಷ್ಟವಾಗಿದೆ. ಆಡಳಿತ ವರ್ಗ ಕೂಡಲೇ ಗಮನ ಹರಿಸಿ ರಸ್ತೆಗಳನ್ನು ತುರ್ತು ದುರಸ್ತಿ ಮಾಡುವಂತೆ ಒತ್ತಾಯಿಸುವ ನಿರ್ಣಯವನ್ನು ಕೈಗೊಳ್ಳಲಾಯಿತು.

ಸಂಘದ ಅಧ್ಯಕ್ಷರಾಗಿ ಎಚ್.ಕರುಣಾಕರರವರನ್ನು ಹಾಗೂ ಕಾರ್ಯದರ್ಶಿಯಾಗಿ ಚಂದ್ರ ವಿ. ಇವರನ್ನು ಆಯ್ಕೆ ಮಾಡಲಾಯಿತು. ಕೋಶಾಧಿಕಾರಿಯಾಗಿ ನಾಗರಾಜನವರನ್ನು ಆಯ್ಕೆ ಮಾಡಲಾಯಿತು. ಉಪಾಧ್ಯಕ್ಷರಾಗಿ ಗೋವಿಂದ ಗುಡಾರಹಕ್ಲು, ಉಮೇಶ, ನಾರಾಯಣ ಮತ್ತು ಗಣೇಶ ದೇವಾಡಿಗ, ಜತೆ ಕಾರ್ಯದರ್ಶಿಗಳಾಗಿ ಆನಂದ, ರಮೇಶ ವಿ., ರಾಜು ದೇವಾಡಿಗ, ಸಂತೋಷ ಕಲ್ಲಾಗರ ಮತ್ತು ಬಾಬು ಶೆಟ್ಟಿಯರವರನ್ನು ಆರಿಸಲಾಯಿತು.

ಆರಂಭದಲ್ಲಿ ನಿತ್ಯಾನಂದನವರು ಅಧ್ಯಕ್ಷರನ್ನು ಮತ್ತು ಅತಿಥಿಗಳನ್ನು ವೇದಿಕೆಗೆ ಕರೆದರು. ರಮೇಶನವರು ಎಲ್ಲರನ್ನು ಸ್ವಾಗತಿಸಿ ಮಹಾಸಭೆಯ ಮಹತ್ವವನ್ನು ವಿವರಿಸಿದರು.

ಕಳೆದ ಒಂದು ವರ್ಷದ ಸಂಘದ ಚಟುವಟಿಕೆಗಳ ಲಿಖಿತ ವರದಿಯನ್ನು ಸಂಘದ ಕಾರ್ಯದರ್ಶಿಯವರಾದ ಚಂದ್ರ ವಿ. ಯವರು ಮಂಡಿಸಿದರು. ಲೆಕ್ಕಪತ್ರದ ವರದಿಯನ್ನು ಕೋಶಾಧಿಕಾರಿಯವರಾದ ನಾಗರಾಜನವರು ಮಂಡಿಸಿದರು. ಚರ್ಚೆ ನಡೆದು ಎರಡೂ ವರದಿಗಳನ್ನು ಅಂಗೀಕರಿಸಲಾಯಿತು.

ರಾಜು ದೇವಾಡಿಗನವರು ಕೊನೆಯಲ್ಲಿ ಧನ್ಯವಾದವನ್ನರ್ಪಿಸಿದರು.

- ವರದಿ : ಚಂದ್ರ ವಿ.

# ಕೋಮುಗಲಭೆಕೋರರನ್ನು ಶಿಕ್ಷಿಸಲೇಬೇಕು

**ರಾಷ್ಟ್ರದ ರಾಜಧಾನಿಯಲ್ಲಿ ಸಾವಿರಾರು ಅಮಾಯಕ ಸಿಖ್ಖರನ್ನು ಸಿಕ್ಕ ಸಿಕ್ಕಲ್ಲಿ ಕೊಚ್ಚಿಹಾಕಿದ 1984 ರ ಸಿಖ್ ವಿರೋಧಿ ಹಿಂಸಾಚಾರದಲ್ಲಿ ನೊಂದವರಿಗೆ- ಅನ್ಯಾಯಕ್ಕೆ ಗುರಿಯಾದವರಿಗೆ 21 ವರುಷಗಳ ನಂತರವೂ ನ್ಯಾಯ ಸಿಕ್ಕಿಲ್ಲ. ಯಾವ ಅಪರಾಧಿಗಳ ವಿರುದ್ಧವೂ ಯಾವ ಕ್ರಮಗಳನ್ನೂ ಕೈಗೊಳ್ಳಲಾಗಿಲ್ಲ ಎಂಬುದು ನಿಜಕ್ಕೂ ದಿಗ್ಭ್ರಮೆ ಮೂಡಿಸುವ ವಿಚಾರವಾಗಿದೆ. ಎಡ ಪಕ್ಷಗಳ ತೀವ್ರ ಒತ್ತಾಯದಿಂದಾಗಿ ಈ ಸಂಬಂಧದ 'ನಾನಾವತಿ' ಆಯೋಗದ ವರದಿಯನ್ನು ಸಂಸತ್ತಿನಲ್ಲಿ ಮಂಡಿಸಲಾಗಿದೆ. ಕೋಮು ಹಿಂಸಾಚಾರ ನಡೆಸುವ ಹಿಂಸಾ ಪಶುಗಳನ್ನು ಹಿಡಿದು ಸಾಧ್ಯವಾದಷ್ಟು ಶೀಘ್ರವಾಗಿ ಶಿಕ್ಷಿಸಬೇಕಿದೆ.**

ಭಾರತ ತನ್ನ ಸ್ವಾತಂತ್ರ್ಯದ 58ನೇ ವಾರ್ಷಿಕೋತ್ಸವವನ್ನು ಆಚರಿಸಲು ಸಿದ್ಧವಾಗುತ್ತಿರುವಂತೆ ಕಳೆದ ವಾರದ ಎರಡು ಘಟನೆಗಳು ಕೋಮುಗಲಭೆಗಳನ್ನು ನಡೆಸುವವರನ್ನು ರಕ್ಷಿಸುವ ಪ್ರಶ್ನೆಯನ್ನು ಮತ್ತೆ ಎತ್ತಿವೆ.

ಮೊದಲನೆಯದಾಗಿ, ನಾನಾವತಿ ಆಯೋಗದ ವರದಿ ಅಂತೂ ಬಂದಿದೆ. 1984ರಲ್ಲಿ ಇಂದಿರಾ ಗಾಂಧಿಯವರ ಹತ್ಯೆಯ ಹಿನ್ನೆಲೆಯಲ್ಲಿ ನಡೆದ ಸಿಖ್ಖರ ಹತ್ಯಾಕಾಂಡ ಕುರಿತ 9ನೇ ತನಿಖೆ ಇದು. ಆರು ತಿಂಗಳೊಳಗೆ ಈ ಭೀಕರ ಹತ್ಯಾಕಾಂಡ ಎಸಗಿದವರನ್ನು ಗುರುತಿಸಬೇಕೆಂಬ ಕೆಲಸವನ್ನು ಈ ಆಯೋಗಕ್ಕೆ ಒಪ್ಪಿಸಲಾಗಿತ್ತು. ಆದರೆ ಆಯೋಗಕ್ಕೆ ತನ್ನ ಕೆಲಸ ಮುಗಿಸಲು ಐದು ವರ್ಷ ಹಿಡಿಯಿತು. ಹೀಗೆ ಬಂದಿರುವ ವರದಿಯೂ ಈಗಿರುವ ವಿವಾದಗಳನ್ನು ಪರಿಹರಿಸುವ ಬದಲು ಇನ್ನಷ್ಟು ವಿವಾದಗಳನ್ನೇ ಸೃಷ್ಟಿಸುವಂತೆ ಕಾಣುತ್ತಿದೆ. ಯಾರು ಈ ನರಮೇಧ ನಡೆಸಿದವರು ಎಂಬುದನ್ನು ಸಾಬೀತು ಮಾಡುವಲ್ಲಿ ಅದು ವಿಫಲವಾಗಿದೆ.


ಕಾಂಗ್ರೆಸ್ ಪಕ್ಷ ಮತ್ತು ಅದರ ಮುಖಂಡತ್ವವನ್ನು ಹಿಂಸಾಚಾರ ಆಪಾದನೆಯಿಂದ ಮುಕ್ತಗೊಳಿಸಿರುವ ವರದಿ, ಸ್ಥಳೀಯ ಕಾಂಗ್ರೆಸ್ (ಐ) ಮುಖಂಡರು "ಸ್ವಂತ ರಾಜಕೀಯ ಕಾರಣಗಳಿಗಾಗಿ" ಮಾಡಿರುವಂತೆ ಕಾಣುತ್ತಿದೆ ಎಂದಿದೆ. ಇಂತಹ ವ್ಯಕ್ತಿಗಳನ್ನು ಗುರುತಿಸಲಾಗಿದೆ. ಆದರೆ ಅವರ ವಿರುದ್ಧವೂ ಸ್ಫುಟವಾದ ಸಾಕ್ಷ್ಯಗಳನ್ನು ಅದು ನೀಡಿಲ್ಲ 21 ವರ್ಷಗಳ ನಂತರವೂ ಈ ಹಿಂಸಾಚಾರಕ್ಕೆ ಬಲಿಯಾದವರಿಗೆ ನ್ಯಾಯ ಸಿಕ್ಕಿಲ್ಲ, ನರಮೇಧ ನಡೆಸಿದವರು ಆರಾಮವಾಗಿ ಅಡ್ಡಾಡಿಕೊಂಡಿದ್ದಾರೆ ಎಂಬುದು ನಿಜಕ್ಕೂ ನಾಚಿಕೆಗೇಡು. ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು ಎಂಬುದು ಎಲ್ಲರೂ ಒಪ್ಪುವ ಮಾತು. ಆದರೆ ಇಲ್ಲಿ ತಪ್ಪಿತಸ್ತರು ಯಾರು ಎಂಬ ಪ್ರಶ್ನೆ ಇನ್ನೂ ಹಾಗೆಯೇ ಉಳಿದಿದೆ.

ಯುಪಿಎ ಸರಕಾರ ನಾನಾವತಿ ಆಯೋಗ ಹೆಸರಿಸಿದ ವ್ಯಕ್ತಿಗಳ ಬಗ್ಗೆ ಇನ್ನಷ್ಟು ವಿಚಾರಣೆ ನಡೆಸಿ ತಪ್ಪಿತಸ್ಥರಿಗೆ ಶಿಕ್ಷೆ ನೀಡಬೇಕು ಎಂದು ಜನ ನಿರೀಕ್ಷಿಸುತ್ತಾರೆ. ಏಕೆಂದರೆ ಕಾಂಗ್ರೆಸ್ ಒಂದು ಪಕ್ಷವಾಗಿ ತನ್ನ ಮುಖಂಡರು, ಸದಸ್ಯರು ಈ ಸಿಖ್ ವಿರೋಧಿ ಹಿಂಸಾಚಾರದಲ್ಲಿ ವಹಿಸಿದ ಪಾತ್ರಕ್ಕಾಗಿ ಕ್ಷಮೆ ಕೇಳಿದೆ.

### ಗುಜರಾತ್ ಹತ್ಯಾಕಾಂಡ

ಎರಡನೆಯದಾಗಿ, ಗುಜರಾತ್ ಹತ್ಯಾಕಾಂಡ



ಕೇಂದ್ರ ಸರಕಾರ ನಾನಾವಟಿ ಆಯೋಗದ ವರದಿ ಹಾಗೂ ಅದರಲ್ಲೇ ಕೈಗೊಂಡ ಗ್ರಾಮದ ವರದಿಯನ್ನು ಸಂಸತ್ತಿನಲ್ಲಿ ಮಂಡಿಸಿದ ದಿನವೇ ಭಾರತದ ಸರ್ವೋಚ್ಚ ನ್ಯಾಯಾಲಯ ಗುಜರಾತ್ ಪೋಲೀಸ್ ಒಂದೋ ಆಪಾದಿತರೊಂದಿಗೆ ಕೈ ಮಿಲಾಯಿಸಿದೆ, ಇಲ್ಲವೇ ನಿಷ್ಪ್ರಯೋಜಕವಾಗಿದೆ ಎಂದು ಕಟುವಾಗಿ ಟಿಪ್ಪಣಿ ಮಾಡಿದೆ. ರಾಜ್ಯದಲ್ಲಿ ಸರಕಾರಿ ಪ್ರಾಯೋಜಿತ ಭಯಾನಕ ಕೋಮು ಹಿಂಸಾಕಾಂಡದ ಮೂರು ವರ್ಷಗಳ ನಂತರವೂ ತಪ್ಪಿತಸ್ಥರು ಸಿಕ್ಕಿಲ್ಲ, ಮಾಧ್ಯಮದ ವರದಿಗಳು, ಕಣ್ಣಾರೆ ಕಂಡವರ ಮಾತುಗಳು ಮುಂತಾದ ಅಪಾರ ಸಾಕ್ಷ್ಯಾಧಾರಗಳು ಇದ್ದರೂ ತಪ್ಪಿತಸ್ಥರು ಇನ್ನೂ ಸಿಕ್ಕಿಲ್ಲ. ಅತ್ತ ಹಿಂಸಾಕಾಂಡಕ್ಕೆ ತುತ್ತಾದವರು ಇನ್ನೂ ನರಳುತ್ತಿದ್ದಾರೆ. ವಿವಿಧ ನ್ಯಾಯಾಲಯಗಳಲ್ಲಿ ಈ ಹಿಂಸಾಕಾಂಡದ ವಿಚಾರಣೆ ನಡೆಯುತ್ತಿದ್ದರೂ, ಇವರಿಗೆ ಪರಿಹಾರವೂ ಸಿಕ್ಕಿಲ್ಲ, ಅಲ್ಪಸಂಖ್ಯಾತರಿಗೆ ಭಯ, ಅಭದ್ರತೆಯ ನಿವಾರಣೆಯ ಇನ್ನೂ ದೂರವೇ ಇದೆ. ಮತ್ತೆ ಅದೇ ನ್ಯಾಯಮೂರ್ತಿ ನಾನಾವತಿಯವರು ಗುಜರಾತ್ ನರಮೇಧದ ವಿಚಾರಣೆ ನಡೆಸಲಿದ್ದಾರೆ ಎಂಬುದು ಇನ್ನೊಂದು ವ್ಯಂಗ್ಯ.

ಅದರಲ್ಲಿ ಎಂದಿನವರೆಗೆ ಜಾತ್ಯತೀತ ಭಾರತೀಯ ಗಣತಂತ್ರದ ನ್ಯಾಯ ನೀಡಿಕೆ ವ್ಯವಸ್ಥೆ ಇದೇ ರೀತಿ ಮುಂದುವರಿಯಲು ಉತ್ತಮಗೊಳ್ಳದಿರಲು ಸಾಧ್ಯ? ಕೋಮು ಗಲಬೆ ನಡೆಸುವವರನ್ನು ಶಿಕ್ಷೆಗೆ ಗುರಿಪಡಿಸುವ ಅಗತ್ಯ ಮಾನವೀಯತೆ ಮತ್ತು ಅನುಕಂಪದ ದೃಷ್ಟಿಯಿಂದ ಮಾತ್ರವೇ ಅಲ್ಲ, ಆಧುನಿಕ ಭಾರತದ ಗಣತಂತ್ರದ ಜಾತ್ಯತೀತ ಪ್ರಜಾಸತ್ತಾತ್ಮಕ ಅಡಿಪಾಯವನ್ನು ಗಟ್ಟಿಗೊಳಿಸಲು ಕೂಡಾ ನ್ಯಾಯ ಒದಗಿಸುವುದು ಅತ್ಯಗತ್ಯ.

### ಮಾದರಿ ಕಾನೂನು

ಯುಪಿಎ ಸರಕಾರದ ರಾಷ್ಟ್ರೀಯ ಸಾಮಾನ್ಯ ಕನಿಷ್ಠ ಕಾರ್ಯಕ್ರಮ ಕೋಮುವಾದೀ ಹಿಂಸಾಚಾರವನ್ನು ಎದುರಿಸಲು 2005 ಸಮಗ್ರ ಕಾನೂನು ತರುವುದಾಗಿ ಹೇಳಿದೆ. ಇಂತಹ ಒಂದು ಕಾನೂನಿನ ಅಗತ್ಯದ ಬಗ್ಗೆ ಯಾರಿಗೂ ಭಿನ್ನಾಭಿಪ್ರಾಯವಿಲ್ಲ, ಆದರೆ ಈ ಬಗ್ಗೆ ಚರ್ಚಿಸುವಾಗ ಕೆಲವು ಗಂಭೀರ ಆತಂಕಗಳು ವ್ಯಕ್ತವಾದವು. ಇವು ನಮ್ಮ ಸಂವಿಧಾನದ ಒಕ್ಕೂಟ ಸ್ವರೂಪಕ್ಕೆ ಸಂಬಂಧಪಟ್ಟ ಆತಂಕಗಳು. ಸಂವಿಧಾನವು ಭಾರತ 'ರಾಜ್ಯಗಳ ಒಕ್ಕೂಟ' ಎನ್ನುತ್ತದೆ. ಈ ವ್ಯಾಪ್ತಿಯಿಂದ ಜವಾಬ್ದಾರಿಗಳು ಮತ್ತು ಅಧಿಕಾರಗಳ ಹಂಚಿಕೆ ಮಾಡುವಾಗ ಕಾನೂನು ವ್ಯವಸ್ಥೆ ರಾಜ್ಯದ ಪಟ್ಟಿಯಲ್ಲಿ ಬರುತ್ತದೆ. ಆದ್ದರಿಂದ ಒಂದು ಕೇಂದ್ರೀಯ ಶಾಸನ ರೂಪಿಸುವುದು ರಾಜ್ಯದ ಅಧಿಕಾರದಲ್ಲಿ ಹಸ್ತಕ್ಷೇಪ ಮಾಡಿದಂತಾಗುತ್ತದೆ ಎಂಬುದು ಆತಂಕದ ಒಂದು ವಿಷಯ. ಇನ್ನೊಂದು ಎಂದರೆ ಕಾನೂನನ್ನು ರಾಜಕೀಯ ಕಾರಣಗಳಿಗಾಗಿ ಯಾವುದೇ ರಾಜ್ಯ ಸರಕಾರದ ವಿರುದ್ಧ ನಡೆಸಿಕೊಳ್ಳುವ ಸಾಧ್ಯತೆ ಇದೆ ಎಂಬುದು. ಕೊನೆಗೂ ಆ ಚರ್ಚೆಗಳಲ್ಲಿ ಮೂಡಿ ಬಂದ ಒಮ್ಮತವೆಂದರೆ ಒಂದು ಮಾದರಿ ಕಾನೂನನ್ನು ರಚಿಸುವುದು ಹಾಗೂ ರಾಜ್ಯಗಳ ವಿಶಿಷ್ಟ ಪರಿಸ್ಥಿತಿಗಳಿಗೆ ಅನುಗುಣವಾಗಿ ರಾಜ್ಯ ಸರಕಾರಗಳು ತಮ್ಮದೇ ಕಾನೂನನ್ನು ತರುವಂತೆ ಅದನ್ನು ಕೇಳಿಕೊಳ್ಳುವುದು. ಈ ವಚನವನ್ನು ಇನ್ನೂ ಜಾರಿಗೆ ತಂದಿಲ್ಲ. ಈಗ ಕೇಂದ್ರ ಸರ್ಕಾರ ತುರ್ತಾಗಿ, ಒಂದೆಡೆ ರಾಜ್ಯದ ಹಕ್ಕುಗಳು ಮತ್ತು ನ್ಯಾಯಪ್ರತಿಯನ್ನು ಕಾಪಾಡುತ್ತಲೇ, ಇನ್ನೊಂದೆಡೆ ರಾಜ್ಯ ಸರಕಾರಗಳಿಗೆ ಕೋಮುವಾದಿ ಸಭೆಗಳನ್ನು ತಡೆಯಲು, ಅದಕ್ಕೆ ಒಳಗಾದವರಿಗೆ ತ್ವರಿತವಾಗಿ ನ್ಯಾಯ ಒದಗಿಸಲು ಅಗತ್ಯವಾದ ಅಧಿಕಾರ ನೀಡುವಂತಹ ಒಂದು ವ್ಯವಸ್ಥೆಯನ್ನು ಸಂಬಂಧಪಟ್ಟ ಎಲ್ಲರೊಡನೆ ಚರ್ಚಿಸಿ ವಿಕಾಸಗೊಳಿಸಬೇಕಾದ ಮುತುವರ್ಜಿ ವಹಿಸಬೇಕಾದ ಅಗತ್ಯವಿದೆ. 58ನೇ ಸ್ವಾತಂತ್ರ್ಯ ದಿನಾಚರಣೆ ಮಾಡುತ್ತಿರುವಾಗ ನಮ್ಮ ಜಾತ್ಯಾತೀತ, ಪ್ರಜಾಸತ್ತಾತ್ಮಕ ಗಣತಂತ್ರವನ್ನು ಬಲಗೊಳಿಸಲು ಆ ದಿಕ್ಕಿನಲ್ಲಿ ತುರ್ತಾಗಿ ಸಾಗಬೇಕಾಗಿದೆ.

○

# ಮುಂಬೈ ಪ್ರವಾಹ ಮತ್ತು ಎಲ್‌ಪಿಜಿ ನೀತಿಗಳು

ಜುಲೈ 26 ರಿಂದ 10 ದಿನಗಳ ಕಾಲ ಮುಂಬೈ ಕಂಡ ಮಳೆ ಭಾರೀ ಅನಾಹುತಗಳನ್ನೇ ತಂದಿದೆ. ಕಳೆದ ಮೂರು ದಶಕಗಳಿಂದ ಕಾಂಗ್ರೆಸ್, ಶಿವಸೇನೆ - ಬಿಜೆಪಿ ಹಾಗೂ ಕಾಂಗ್ರೆಸ್ ಎನ್‌ಸಿಪಿ ಸರ್ಕಾರಗಳು ಅನುಸರಿಸುತ್ತಾ ಬಂದ ನೀತಿಗಳು, ಅದರಲ್ಲೂ ಕಳೆದ ಒಂದೂವರೆ ದಶಕದಲ್ಲಿ ಅನುಸರಿಸಿದ ಉದಾರೀಕರಣ, ಖಾಸಗೀಕರಣ, ಜಾಗತೀಕರಣ ನೀತಿಗಳು ಪರಿಸ್ಥಿತಿಯನ್ನು ಇನ್ನಷ್ಟು ಬಿಗಡಾಯಿಸಿದೆ. ಭಾರತದ ಎಲ್ಲಾ ದೊಡ್ಡ ನಗರಗಳಂತೆ ಮುಂಬೈಯನ್ನು ಸಿಂಗಾಪುರವೋ, ಹಾಂಕಾಂಗೋ ಅಥವಾ ಈಗ ಶಾಂಘಾಯಿಯೋ ಮಾಡುವ ಘೋಷಣೆಯಡಿ ನಿಜವಾಗಿ ನಡೆದದ್ದು ಏನು ಎಂಬುದು ಈಗ ಎಲ್ಲರ ಮುಂದಿದೆ.

ಮುಂಬೈ ಭಾರತ ಹಣಕಾಸು ರಾಜಧಾನಿಯಾಗಿದೆ. ಇದು ಬಹಳ ದಿನಗಳಿಂದ ಬೂರ್ಜ್ವಾ ರಾಜಕಾರಣಿಗಳು, ಹಲ್ಲುಗಿಂಜುವ ಅಧಿಕಾರಶಾಹಿ, ಗುತ್ತೇದಾರಿ ಬಂಡವಾಳಶಾಹಿ, ಲೂಟಿಕೋರ ಬಿಲ್ಡರ್‌ಗಳು ಹಾಗೂ ಒಂದು ಕ್ರಿಮಿನಲ್ ಮಾಫಿಯಾದ ಭ್ರಷ್ಟ ಮತ್ತು ಲಂಚಕೋರ ಕೂಟದ ಹತೋಟಿಯಲ್ಲಿದೆ ಎಂಬುದು ಕಂಡ ವಾಸ್ತವ. ಇತ್ತೀಚೆಗೆ ಇದರಲ್ಲಿ ವಿಶ್ವಬ್ಯಾಂಕ್, ಬಹುರಾಷ್ಟ್ರೀಯ ಕಂಪನಿಗಳ ಮಾರ್ಮಿಕ ವಿದೇಶಿ ಹಣಕಾಸು ಬಂಡವಾಳವೂ ಶಾಮೀಲಾಗಿದೆ. ಇವೆಲ್ಲಾ ಸೇರಿಕೊಂಡು ಮುಂಬೈಯ ಬೆಳವಣಿಗೆಯನ್ನು ಈ ಹಿತಾಸಕ್ತಿಗಳ ಈಡೇರಿಕೆಗಾಗಿಯೇ ರೂಪಿಸಿವೆ, ಅದರ ಹೊರೆಯನ್ನು ಮಾತ್ರ ಜನಸಾಮಾನ್ಯರ ಮೇಲೆ ಹಾಕಿದೆ.

ಇದರ ದುಷ್ಪರಿಣಾಮ ಈಗ ಕಂಡಿರುವ ಪ್ರವಾಹದಂತಹ ಬಿಕ್ಕಟ್ಟಿನ ಸಮಯದಲ್ಲಿ ಎದ್ದು ಕಾಣುತ್ತದೆ, ಈ ಹಿತಾಸಕ್ತಿಗಳು ಒಟ್ಟು ಸೇರಿ ರೂಪಿಸಿರುವ ಬೆಳವಣಿಗೆ ಈ ನಗರ ಬಹಳ ದಿನ ತಾಳಿಕೊಳ್ಳಲಾರದ ಬೆಳವಣಿಗೆ ಎಂದು ಈಗಲಾದರೂ ಕೆಲವರಿಗೆ ಅರಿವಿಗೆ ಬರುತ್ತಿದೆ. ಈ ಬಗ್ಗೆ ಮಾಧ್ಯಮಗಳಲ್ಲಿ ಚರ್ಚೆ ಆರಂಭವಾಗಿದೆ. ಹಿಂದೆ ಇದೇ ಮಾಧ್ಯಮಗಳು ಅವೇ ಪಟ್ಟಭದ್ರ ಹಿತಾಸಕ್ತಿಗಳ ಬಾಲ ಹಿಡಿದಿದ್ದವು ಎಂಬುದು ಬೇರೆ ಮಾತು.

ಮುಂಬೈನಲ್ಲಿ ಭಾರೀ ಮಳೆ ತಂದ ಪ್ರವಾಹದ ಪ್ರಕೋಪಕ್ಕೆ ಮುಖ್ಯ ಕಾರಣ ಪ್ರವಾಹದ ನೀರು ಸಮುದ್ರಕ್ಕೆ ಹರಿದು ಹೋಗುವ ವ್ಯವಸ್ಥೆಯೇ ಇರದಿರುವುದು. ಮುಂಬೈಯಲ್ಲಿ ಎರಡು ಹೊಳೆಗಳು ಹರಿದು




ಸಮುದ್ರ ಸೇರುತ್ತವೆ. ಆದರೆ ಈ ನಗರದಲ್ಲಿ ಅನುಸರಿಸಿದ ಬೆಳವಣಿಗೆಯ ದಾರಿಯಿಂದಾಗಿ ಬಂದಿರುವ ದೊಡ್ಡ - ದೊಡ್ಡ ಕಾಂಪ್ಲೆಕ್ಸ್‌ಗಳು, ಫ್ಲೈಓವರ್‌ಗಳು ಈ ಹೊಳೆಗಳನ್ನು ಆವರಿಸಿಕೊಂಡಿದ್ದರಿಂದ ಪ್ರವಾಹದ ಪರಿಸ್ಥಿತಿ ಉಲ್ಬಣಗೊಂಡಿತು ಎಂಬುದು ಈಗ ಎಲ್ಲರ ಗಮನಕ್ಕೆ ಬಂದಿದೆ. ಪ್ರಕೃತಿಯ ನಿಯಮಗಳ ನಗ್ನ ಉಲ್ಲಂಘನೆ, ಹಳೆಯ ಪ್ರಾಚೀನವೆನ್ನಬಹುದಾದ ಒಳಚರಂಡಿ ವ್ಯವಸ್ಥೆಯನ್ನು ಸುಧಾರಿಸದಿರುವುದು ಹಾಗೂ ಬಿಲ್ಡರ್‌ಗಳ ಆಟಾಟೋಪದಿಂದ ಕಾಣುತ್ತಿರುವ ಕಾಂಕ್ರಿಟೀಕರಣಕ್ಕೆ ಮುಂಬೈ ನಿವಾಸಿಗಳು ಬೆಲೆ ತೆರಬೇಕಾಗಿ ಬಂದಿದೆ.

ಅದರೆ ಇದನ್ನೇ ನೆವ ಮಾಡಿಕೊಂಡು ಮುಂಬೈಯನ್ನು ಪ್ರತ್ಯೇಕ ರಾಜ್ಯವಾಗಿ ಮಾಡಬೇಕು, ಕೇಂದ್ರಾಡಳಿತ ಪ್ರದೇಶವಾಗಿ ಮಾಡಬೇಕು ಎಂಬ ಆಳುವ ವರ್ಗಗಳ ಹಳೆಯ ಪಿತೂರಿ ಮಾತ್ರ ಜೀವ ಪಡೆಯುತ್ತಿದೆ. 1950ರ ದಶಕದಲ್ಲಿ ಎಡಪಕ್ಷಗಳ ನೇತೃತ್ವದ ಸಂಯುಕ್ತ ಮಹಾರಾಷ್ಟ್ರ ಆಂದೋಲನ ಈ ಪಿತೂರಿಯನ್ನು ವಿಫಲಗೊಳಿಸಿತ್ತು. ಇದಕ್ಕಾಗಿ 105 ಮಂದಿ ಹುತಾತ್ಮರಾಗಿದ್ದು, ಇದರಿಂದಾಗಿ ಮುಂಬೈಯ ಫ್ಲೋರಾ ಫೌಂಟನ್‌ಗೆ 'ಹುತಾತ್ಮ ಚೌಕ' ಎಂಬ ಹೆಸರು ಬಂದಿತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬೇಕು.

○

ಬೆಳೆಯುತ್ತಿರುವ ಈ ಬಂಡವಾಳಶಾಹಿ ವ್ಯವ
ಐಎಂಎಫ್-ವಿಶ್ವಬ್ಯಾಂಕುಗಳಿಂದ ಜಾಗತೀಕ
ದೀಕ್ಷೆ ಪಡೆದಿರುವ ಆಳುವ ಸರ್ಕಾರಗಳು
ಉದಾರೀಕರಣ-ಖಾಸಗೀಕರಣ ಮಂತ್ರಜಪಿ
ಉದ್ಯೋಗಸೃಷ್ಟಿ-ನೇಮಕಾತಿ-ಕೈಗಾರಿಕೆಗಳ ಸ
ಎಂಬ ಮಾತುಗಳನ್ನೂ ಮರೆತುಬಿಟ್ಟಿವೆ. ಹಾ
ಇರುವಂತಹ ಉದ್ಯೋಗಗಳಲ್ಲಿಯೇ ಲಕ್ಷ ಲ
ಉದ್ಯೋಗಗಳನ್ನು ನಾಶ ಮಾಡುವುದೇ ಈಗ
ಆಳುವವರ ಪೂರ್ಣಾವಧಿ ಉದ್ಯೋಗವಾಗಿದ
ಇಂತಹ ಸನ್ನಿವೇಶದಲ್ಲಿ 'ಉದ್ಯೋಗ ನಾಶ
ನಡೆಸುತ್ತಿರುವ ಸರ್ಕಾರಗಳ ಕರಾಳ ನೀತಿಗಳ
ಹಾಗೂ ಗ್ರಾಮೀಣ ಜನತೆಗೆ ಮಾತ್ರವಲ್ಲ, ನ
ವಿಸ್ತರಿಸಬೇಕಾದ 'ಉದ್ಯೋಗ ಖಾತ್ರಿ' ಯೋ
ಅಗತ್ಯದ ಬಗೆಗೆ ಬರೆದಿದ್ದಾರೆ
ಯುವಜನ ಮುಖಂಡರುಗಳ

ಕೆ.ಮಹಾಂತೇಶ್ -
ಕೆ.ಎನ್.ಉಮೇಶ್



# ಸುಧಾರಣೆಗಳ ಮತ್ತೊಂದು ಮುಖ

'ನಿರುದ್ಯೋಗ - ಇದು ಅನಿವಾರ್ಯವಲ್ಲ.ಫಲಭಿವೃದ್ಧಿ ಪ್ರಕ್ರಿಯೆಯು ಬೆಳವಣಿಗೆಯು ಸ್ವಾಭಾವಿಕವಾಗಿಯೇ ಉದ್ಯೋಗವಕಾಶವನ್ನು ಸೃಷ್ಟಿಸುವುದರಿಂದ ಉದ್ಯೋಗವನ್ನು ಖಾತ್ರಿಗೊಳಿಸುವ ಯೋಜನೆ ನಮಗೆ ಅನವಶ್ಯಕ' - ಯೋಜನಾ ಆಯೋಗದ ಉಪಾಧ್ಯಕ್ಷ ಶ್ರೀ ಮಾಂಟೆಕ್‌ಸಿಂಗ್ ಅಹ್ಲುವಾಲಿಯಾ ಹೇಳಿದ ಮಾತುಗಳಿವು!

ಇದೇ ಮಾಂಟೆಕ್‌ಸಿಂಗ್ ನೇತೃತ್ವದಲ್ಲೇ ಭಾರತದ ಯೋಜನಾ ಆಯೋಗವು ರಚಿಸಲಾಗಿದ್ದ ಕ್ಷಿಪ್ರ ಕಾರ್ಯಪಡೆ (Task Force) ಯೇ ನೀಡಿದ ವರದಿಯಿಂದ ಸ್ಪಷ್ಟಗೊಂಡಿರುವುದೇನೆಂದರೆ -

"ದಶಕಗಳ ಸುಧಾರಣೆಗಳು ನಿರುದ್ಯೋಗ ಸಮಸ್ಯೆಯನ್ನು ಮತ್ತಷ್ಟು ಹದಗೆಡಿಸಿವೆಯೇ ಹೊರತು ಸಮಸ್ಯೆಯನ್ನು ತಗ್ಗಿಸಿಲ್ಲ" ಎನ್ನುವುದು. ಇದರರ್ಥವೇನೆಂದರೆ ನಮ್ಮ ದೇಶದಲ್ಲಿ ಸುಧಾರಣೆಯ ಹೆಸರಿನಲ್ಲಿ ಜಾರಿಗೊಳಿಸಲ್ಪಡುತ್ತಿರುವ ಆರ್ಥಿಕ ಕಾರ್ಯಕ್ರಮಗಳು ಯಾರಿಗೆ ಲಾಭವನ್ನು ತಂದೊಡುತ್ತಿವೆ ಎಂಬುದು ದಿನ ಕಳೆದಂತೆ ಸ್ಪಷ್ಟಗೊಂಡಿದೆ.

**ಸುಧಾರಣೆ ಯಾತಕ್ಕಾಗಿ? ಯಾರಿಗಾಗಿ?**

ಭಾರತದಲ್ಲಿ 90ರ ದಶಕದಿಂದಲೇ ಆರಂಭಗೊಂಡ ಈ ಸುಧಾರಣಾ ನೀತಿಗಳ ಉದ್ದೇಶವಾದರೂ ಏನು? ನಮ್ಮ ಆರ್ಥಿಕತೆಯನ್ನು ಉತ್ಪಾದನಾ ವ್ಯವಸ್ಥೆಯಿಂದ ಲಾಭದ ಬೆಂಬತ್ತಿರುವ ವಿದೇಶಿ ಬಹುರಾಷ್ಟ್ರೀಯ ಕಂಪನಿಗಳ ಮಾರುಕಟ್ಟೆಯಾಗಿ ಪರಿವರ್ತಿಸುವುದು. ದೊಡ್ಡ ಕೈಗಾರಿಕಾ ಕ್ಷೇತ್ರದಿಂದ ಬಂಡವಾಳ ವಾಪಸ್ ಪಡೆಯುವುದು ಮತ್ತು ನವೀನ ತಂತ್ರಜ್ಞಾನದ ಮೂಲಕ ಹೊಸ ಉದ್ಯೋಗಗಳ ಸೃಷ್ಟಿಗೆ ಕಡಿವಾಣ ಹಾಕುವುದು. ಕೈಗಾರಿಕೆಗಳನ್ನು ರೋಗಗ್ರಸ್ತ ಮಾಡಿ ಮುಚ್ಚುವುದು ಮತ್ತು ಕೊಂಡು ಕೊಳ್ಳುವಿಕೆ / ವಿಲೀನ (Aquisition & Mergar) ದಿಂದಾಗಿ ಉದ್ಯೋಗ ನಷ್ಟ ಮಾಡುವುದರ ಮೂಲಕ ಭಾರಿ ನಿರುದ್ಯೋಗ ಸೃಷ್ಟಿಸುವುದು ಈ ಸುಧಾರಣೆಗಳ ಹಿಂದಿರುವ ಕ್ರೂರಮುಖ. ಆದರೆ ಈ ನಿಜವಾದ ಮುಖವನ್ನು ತೋರಿಸಲು ಇಷ್ಟಪಡದ ಬಂಡವಾಳಶಾಹಿ ವ್ಯವಸ್ಥೆಯ ಪರಿಣಿತರು ಹೇಳುತ್ತಿರುವುದೇನೆಂದರೆ - ಪ್ರಸಕ್ತ ಸಂದರ್ಭದಲ್ಲಿ ನಿರುದ್ಯೋಗ ಎಂಬುದು ಹಿಂದುಳಿದ - ಮುಂದುವರೆದ ಸೇರಿದಂತೆ ಎಲ್ಲಾ ದೇಶಗಳಲ್ಲಿದೆ. ಈ ನಿರುದ್ಯೋಗ ನಿವಾರಣೆಗಾಗಿ ನಾವೇನು ಹೆಚ್ಚು ತಲೆ ಕೆಡಿಸಿಕೊಳ್ಳಬೇಕಿಲ್ಲ. ಅದು ಎಲ್ಲಾ ಕಡೆ ಇರುವುದು ವಾಸ್ತವಿಕ ಸಂಗತಿಯಾಗಿರುವಾಗ ನಿರುದ್ಯೋಗದೊಂದಿಗೆ ಬದುಕುವುದನ್ನು ನಾವು ರೂಢಿಸಿಕೊಳ್ಳಬೇಕು. ಯಾಕೆಂದರೆ ಎಲ್ಲರಿಗೂ ಉದ್ಯೋಗ ನೀಡುವುದು ಸಾಧ್ಯವಿಲ್ಲ' ಎಂಬ ಉದ್ಗಾರವನ್ನು ಸುಧಾರಣಾ ಪರವಾಗಿರುವವರು ಬಿಂಬಿಸುತ್ತಾರೆ.



ನಿರುದ್ಯೋಗಿಗಳ ಪಡೆ

ಭಾರತವನ್ನು ಒಳಗೊಂಡಂತೆ ತೃತೀಯ ಜಗತ್ತಿನ ದೇಶಗಳಲ್ಲಿ ಪ್ರಸ್ತುತ ಜಾರಿಯಾಗುತ್ತಿರುವ ಈ ಸಾಮ್ರಾಜ್ಯಶಾಹಿ ಪ್ರೇರಿತ ಉದಾರೀಕರಣ-ಖಾಸಗೀಕರಣ ನೀತಿಗಳ ಒಟ್ಟಾರೆ ಪ್ರತಿಫಲನವೆಂದರೆ ಉದ್ಯೋಗಹೀನ ಬೆಳವಣಿಗೆ(Jobless growth). ಆದರೆ ಇದೇ ನೀತಿಗಳು 2ನೇ ತಲೆಮಾರಿನ ಸುಧಾರಣೆಗಳ ಹೆಸರಲ್ಲಿ ಮತ್ತೆ ವಕ್ಕರಿಸಿ - ಉದ್ಯೋಗ ನಷ್ಟ ಬೆಳವಣಿಗೆ(Jobloss growth) ಯಾಗುವ ಸಂಚು ರೂಪಿಸಿ ಯಶಸ್ವಿಯಾಗುತ್ತಿವೆ. ಅಂದರೆ ಸ್ವಾತಂತ್ರ್ಯದ ದಶಕಗಳಲ್ಲಿ ಅಲ್ಪಸ್ವಲ್ಪ ಉದ್ಯೋಗ ಸೃಷ್ಟಿಸುವ ಪ್ರಕ್ರಿಯೆಯಲ್ಲಿ ನಾವು ತೊಡಗಿಸಿಕೊಂಡಿದ್ದಾಗಲೇ ಅಂತಹ ಅವಕಾಶಗಳನ್ನೆಲ್ಲ ಆಧುನೀಕರಣ ಮತ್ತು ಗಣಕೀಕರಣದ ಹೆಸರಲ್ಲಿ ಇಲ್ಲವಾಗಿಸಿದ್ದು ಒಂದೆಡೆಯಾದರೆ ಮತ್ತೊಂದೆಡೆ ಪ್ರಸ್ತುತ ಇರುವ ಉದ್ಯೋಗಗಳನ್ನೇ ಇಲ್ಲವಾಗಿಸುವ ಪ್ರಕ್ರಿಯೆ ಶರವೇಗದಲ್ಲಿ ನಡೆದಿದೆ.

**ಸೇವಾರಂಗದಲ್ಲಿ ಸುಧಾರಣೆಯ ದಾಳಿ**

ಭಾರತದಲ್ಲಿ ಜಾರಿಯಾಗುತ್ತಿರುವ ಈ ಸುಧಾರಣೆಗಳ ದಾಳಿಗಳು ಸಾರ್ವಜನಿಕರಂಗ ಮತ್ತು ಸೇವಾ ರಂಗದಲ್ಲಿ ಭಾರಿ ಸಂಚಲನವನ್ನುಂಟು ಮಾಡುತ್ತಿವೆ. ಭಾರತದ ಸಾರ್ವಜನಿಕ ಹಾಗೂ ಖಾಸಗಿ ಕ್ಷೇತ್ರಗಳೆರಲ್ಲೂ ಈ ನೀತಿಗಳ ಪರಿಣಾಮವಾಗಿ ಭಾರಿ ಉದ್ಯೋಗಗಳು ಕಡಿತಗೊಂಡಿವೆ. 2001 ರಲ್ಲಿ ಸಂಘಟಿತ ವಲಯದಲ್ಲಿ 277.89 ಲಕ್ಷ ಇದ್ದ ಉದ್ಯೋಗಗಳು, 2003 ರಲ್ಲಿ 270 ಲಕ್ಷಗಳಿದಿವೆ. ಅಂದರೆ ಕೇವಲ ಮೂರು ವರ್ಷದಲ್ಲಿ 7.89 ಲಕ್ಷ ಉದ್ಯೋಗವಕಾಶಗಳು ನಾಶಗೊಂಡವು.

ಸಂಘಟಿತ ವಲಯದ ಸಾರ್ವಜನಿಕ ಕ್ಷೇತ್ರದಲ್ಲಿ ಈ ರೀತಿ ಉದ್ಯೋಗ ನಾಶಕ್ಕೆ ಪ್ರಮುಖ ಕಾರಣವೆಂದರೆ ಬಂಡವಾಳ ಹಿಂತೆಗೆದುಕೊಳ್ಳುವ ಪ್ರಕ್ರಿಯೆ ಒಂದೆಡೆಯಾದರೆ, ಸರ್ಕಾರಿ ನೇಮಕಾತಿಗಳನ್ನೇ ಸಂಪೂರ್ಣ ರದ್ದು ಪಡಿಸಬೇಕೆಂಬ ವಿಶ್ವಬ್ಯಾಂಕ್ ಒತ್ತಡ. ಪರಿಣಾಮವಾಗಿ 90 ರ ದಶಕದಿಂದ ಇಲ್ಲಿಯವರೆಗೆ ಸುಧಾರಣೆಯ ಹೆಸರಲ್ಲಿ ರಚಿತವಾದ ರಾಕೇಶ್ ಮೋಹನ್ ಸಮಿತಿಯು,

ಕೆ.ಮಹಾಂತೇಶ್

ರೈಲ್ವೆಯಲ್ಲಿ ನೇಮಕಾತಿಯನ್ನು ರದ್ದುಪಡಿಸುವುದಕ್ಕೆ ಶಿಫಾರಸ್ಸು ಮಾಡಿ, ಕಂಟ್ರಾಕ್ಟ್ ಪದ್ಧತಿ ಜಾರಿಗೊಳಿಸಲು ಕಾರಣವಾಯಿತು. ಒಂದೆಡೆ ದಿನಗೂಲಿಗಳಾಗಿ ರೈಲ್ವೆಯಲ್ಲಿ ಲಕ್ಷಾಂತರ ನೌಕರರಿರುವಾಗಲೇ ಅವರ ಬಗ್ಗೆ ಏನೂ ಮಾತನಾಡದೇ ರೈಲ್ವೆ ಖಾಸಗೀಕರಣಕ್ಕೆ ಚಾಲನೆ ನೀಡಲು ಸೂಚಿಸಲಾಯಿತು. ಸಂಘಟಿತ ಕ್ಷೇತ್ರದಲ್ಲಿನ ಆಡಳಿತ ವೆಚ್ಚವನ್ನು ನಿಯಂತ್ರಿಸುವ ಸಲುವಾಗಿ ರಚಿತವಾದ ಗೀತಾ ಕೃಷ್ಣನ್ ಸಮಿತಿಯು ಎಲ್ಲಾ ರಾಜ್ಯಗಳಲ್ಲಿಯೂ ಮತ್ತು ಕೇಂದ್ರ ಸರ್ಕಾರದ ಎಲ್ಲಾ ಇಲಾಖೆಗಳಲ್ಲಿಯೂ ಆಡಳಿತ ವೆಚ್ಚಗಳನ್ನು ತಗ್ಗಿಸಲು ಅಗತ್ಯ ಸುಧಾರಣೆಗಳನ್ನು ನಡೆಸಬೇಕೆಂಬ ಬಗ್ಗೆ ಶಿಪಾರಸ್ಸು ಮಾಡಿತು. ಭಾರತದ ಯೋಜನಾ ಆಯೋಗದ ಅಡಿಯಲ್ಲಿ ರಚಿತವಾದ ಶ್ರೀ ಮಾಂಟೆಕ್‌ಸಿಂಗ್ ಅಹ್ಲುವಾಲಿಯಾ ನೇತೃತ್ವದ ಕ್ಷಿಪ್ರ ಕಾರ್ಯಪಡೆಯು ಯೋಜನಾ ವಿಷಯಗಳಿಗೆ ಸಂಬಂಧಿಸಿ ಮತ್ತು ತೆರಿಗೆ ಸುಧಾರಣೆ ಸಂಬಂಧಿಸಿ ಮತ್ತು ಈ ಕಾರ್ಯಪಡೆಯು ಎರಡು ಪ್ರಮುಖ ಕ್ಷೇತ್ರಗಳಾದ ಕಾರ್ಮಿಕ ಕ್ಷೇತ್ರ ಮತ್ತು ವಿದ್ಯುತ್ ಕ್ಷೇತ್ರದಲ್ಲಿ ತೀವ್ರತರವಾದ ಸುಧಾರಣೆಗಳನ್ನು ಜಾರಿಗೊಳಿಸಲು ಶಿಫಾರಸ್ಸು ಮಾಡಿತು. ನಂತರದಲ್ಲಿ ಬಂದ ನರೇಶ್ ಕಮಿಟಿ ಪ್ರಮುಖವಾಗಿ ಸೇವಾಸೌಲಭ್ಯಗಳ ಹಾಗೂ ಕೊಂಡುಕೊಳ್ಳುವಿಕೆ



ಉದ್ಯೋಗಾಕಾಂಕ್ಷಿಗಳ ಸಾಲು

**ಈ** ಸುಧಾರಣೆಗಳ ಇನ್ನೊಂದು ಮುಖವೆಂದರೆ ಅತ್ಯಂತ ಕಡಿಮೆ ಉದ್ಯೋಗವಕಾಶಗಳನ್ನು ತೋರಿಸಿ ಭಾರಿ ಪ್ರಚಾರ ಗಿಟ್ಟಿಸುವುದು! ಬ್ಯಾಂಕಿಂಗ್ ಕ್ಷೇತ್ರದಲ್ಲಿ ಹಿಂದೆಲ್ಲಾ ಉದ್ಯೋಗಗಳಿಗೆ ಆಯ್ಕೆ ಮಾಡುತ್ತಿದ್ದ ಬ್ಯಾಂಕಿಂಗ್ ಸರ್ವಿಸ್ ರಿಕ್ರುಟ್‌ಮೆಂಟ್ ಬೋರ್ಡ್(BSRB) ಯನ್ನು ರದ್ದು ಮಾಡಲಾಯಿತು. ವಿಮಾ - ದೂರಸಂಪರ್ಕ-ಅಂಚೆ ಕ್ಷೇತ್ರಗಳಲ್ಲಿ ಕಳೆದ 11 ವರ್ಷಗಳಿಂದ ನೇಮಕಾತಿ ಪ್ರಕ್ರಿಯೆಯನ್ನೇ ನಿಲ್ಲಿಸಲಾಗಿದೆ. ಅಷ್ಟೆಲ್ಲಾ ಯಾಕೆ? ಉದ್ಯೋಗ ಮತ್ತು ತರಬೇತಿ ಎಂಬ ಹೆಸರಿನಲ್ಲಿ ಕಾರ್ಮಿಕ ಇಲಾಖೆಯ ಅಡಿಯಲ್ಲಿ ಕೆಲಸ ಮಾಡುತ್ತಿದ್ದ 'ಉದ್ಯೋಗ ವಿನಿಮಯ ಕೇಂದ್ರ'ಗಳಲ್ಲಿ 'ಉದ್ಯೋಗ' ಎನ್ನುವ ಪದ ಬಳಕೆಯನ್ನೇ ತೆಗೆಯಲಾಗಿದೆ. ಕೇಂದ್ರ ಸರ್ಕಾರದ ಮಂತ್ರಿಮಂಡಲದಲ್ಲಿಯೇ 'ಉದ್ಯೋಗ ನಾಶಕ್ಕೆ ಒಬ್ಬ ಮಂತ್ರಿ'ಯನ್ನೇ ನೇಮಿಸುತ್ತಿರುವಾಗ 'ಉದ್ಯೋಗ' ಎಂಬ ಪದ ಬಳಕೆಯನ್ನು ರದ್ದು ಪಡಿಸುವುದರಲ್ಲಿ ಯಾವ ತಪ್ಪಿದೆ? ಹತ್ತಾರು ವರ್ಷಗಳಿಂದ ತುಂಬದೇ ಇರುವ ಬ್ಯಾಕ್ ಲಾಗ್ ಹುದ್ದೆಗಳನ್ನು ಇತ್ತೀಚೆಗೆ - ಸುಪ್ರೀಂ ಕೋರ್ಟ್ ಛೀಮಾರಿ ಹಾಕಿದ್ದರಿಂದ ತುಂಬಬೇಕಾಯಿತು. ತುಂಬಿದ್ದಾದರೂ ಎಷ್ಟು ಹುದ್ದೆಗಳು? ಒಂದೊಂದು ಇಲಾಖೆಯಲ್ಲಿ 1 ಅಥವಾ 2 ಜಾಸ್ತಿಯೆಂದರೆ 5 ರಿಂದ 10ಮಾತ್ರ. ಇನ್ನು ಇತ್ತೀಚೆಗೆ ಕರ್ನಾಟಕ ಸರ್ಕಾರದವರು ಶಿಕ್ಷಕರ ಹುದ್ದೆಗಾಗಿ CET ಪರೀಕ್ಷೆ ನಡೆಸಿದರು. ಹುದ್ದೆಗಳ ಸಂಖ್ಯೆ - 2000, CET ಬರೆದವರು 50 ಸಾವಿರ! ಕರ್ನಾಟಕ ಲೋಕಸೇವಾ ಆಯೋಗ (KPSC) ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ 534 ಪ್ರಥಮದರ್ಜೆ ಸಹಾಯಕ ಹುದ್ದೆಗಾಗಿ ಅರ್ಜಿ ಕರೆದಿದೆ. ಅರ್ಜಿ ಸಲ್ಲಿಸಲು ಜುಲೈ 23 ಕೊನೆಯ ದಿನಾಂಕವಾಗಿತ್ತು. ಈ ಲೇಖನ ಸಿದ್ದಪಡಿಸುವ ವೇಳೆಗೆ ಕೆಪಿಎಸ್‌ಸಿ ಯನ್ನು ಸಂಪರ್ಕಿಸಿದಾಗ ಅವರು ಹೇಳಿದ್ದಿಷ್ಟು. 'ಇದೂವರೆಗೆ ಸುಮಾರು 2 ಲಕ್ಷದಷ್ಟು ಅರ್ಜಿಗಳನ್ನು ನಾವು ಸ್ವೀಕರಿಸಿದ್ದೇವೆ. ಆದರೆ ನಿಖರ ಮಾಹಿತಿ ಸಿಕ್ಕಾಗ ಸಂಖ್ಯೆ ಇನ್ನೂ ಜಾಸ್ತಿಯಾಗುತ್ತದೆ. ಯಾಕೆಂದರೆ ರಾಜ್ಯದ 70 ಅಂಚೆ ಕಛೇರಿಗಳಲ್ಲಿ ಸ್ವೀಕಾರಾರ್ಹವಾಗಿರುವ ಅರ್ಜಿಗಳು ಇನ್ನೂ ಬರುತ್ತಲೇ ಇವೆ" ಎನ್ನುತ್ತಾರೆ. ಒಂದೊಂದು ಅರ್ಜಿಗೂ ಪ.ಜಾತಿ/ಪಂಗಡದವರಿಗೆ ರೂ. 50, ಇತರರಿಗೆ ರೂ. 100. ಅರ್ಜಿ ಭರ್ತಿ ಮಾಡಿ ಸಲ್ಲಿಸುವಾಗ ಪರಿಶಿಷ್ಟ ಜಾತಿ/ವರ್ಗದವರಿಗೆ ರೂ. 100 ಹಾಗೂ ಇತರೆಯವರು ರೂ. 300 ನಗದು / ಡಿಡಿ ತುಂಬಬೇಕು. ಇನ್ನೂ ಸ್ವಾರಸ್ಯದ ಸಂಗತಿಯೆಂದರೆ - ಈ 534 ಅಭ್ಯರ್ಥಿಗಳನ್ನು ಪರೀಕ್ಷೆಯಲ್ಲಿ ಪಾಸು ಮಾಡಿಸಲು ಪಣತೊಟ್ಟು ಭಾರಿ ಪ್ರಚಾರದೊಂದಿಗೆ - ಹಲವು ದಿನಪತ್ರಿಕೆಗಳು ನಿತ್ಯ ಕಾಲಂ ಆರಂಭಿಸಿವೆ. ಬೆಂಗಳೂರು ವಿಶ್ವ ವಿದ್ಯಾಲಯ ಸೇರಿದಂತೆ ನೂರಾರು ಸಂಸ್ಥೆಗಳು ಅಬ್ಬರದ ಪ್ರಚಾರದೊಂದಿಗೆ ತರಬೇತಿ ಪ್ರಾರಂಭಿಸಿವೆ. ಇನ್ನು ಪರೀಕ್ಷಾರ್ಥಿಗಳಿಗೆ ಸಹಾಯ ಮಾಡಲು ನಾಮುಂದು-ತಾಮುಂದು ಎಂಬಂತೆ ಹತ್ತಾರು ತರಹದ ಪ್ರಕಟಣೆಗಳು ಹೊಸ ಹೊದಿಕೆಯೊಂದಿಗೆ ಮಾರುಕಟ್ಟೆ ಪ್ರವೇಶಿಸಿ ನಿರುದ್ಯೋಗಿಗಳಿಂದ ಹಣ ಸುಲಿಗೆ ಮಾಡುತ್ತಿವೆ. ಇಲ್ಲಿ ಒಂದು ಅಂಶವನ್ನು ಪರೀಕ್ಷಿಸೋಣ - 2 ಲಕ್ಷ ಅರ್ಜಿಗಳಲ್ಲಿ 1.5 ಲಕ್ಷ ಸಾಮಾನ್ಯ ವರ್ಗದಿಂದ ಬಂದಿದ್ದಾವೆ ಎಂದುಕೊಂಡರೂ ಒಂದು ಅರ್ಜಿ ಶುಲ್ಕ ರೂ. 100. ಅಂದರೆ - ಒಂದೂವರೆ ಕೋಟಿ ಹಣ ಆಗುತ್ತದೆ. ಪರಿಶಿಷ್ಟ ಜಾತಿ ಜನಾಂಗದವರಿಂದ 50 ಸಾವಿರ ಅರ್ಜಿ ಬಂದಿದ್ದರೂ 25 ಲಕ್ಷ ಹಣವಾಗುತ್ತದೆ..

ಇದಲ್ಲದೆ ಅಭ್ಯರ್ಥಿಗಳ ಡಿ.ಡಿ. ಹಣದಿಂದ 5 ಕೋಟಿ ರೂ ಕೆಪಿಎಸ್‌ಸಿ ಯನ್ನು ಈಗಾಗಲೇ ಸೇರಿದೆ. ಅಂದರೆ 534 ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಪೂರ್ವದಲ್ಲಿ 2 ಲಕ್ಷ ಅಭ್ಯರ್ಥಿಗಳಿಂದ ಸುಮಾರು 2 ಕೋಟಿ ಹಾಗೂ ಡಿಡಿ/ನಗದು ರೂಪದಲ್ಲಿ 5 ಕೋಟಿ ಒಟ್ಟು ಸುಮಾರು 7 ಕೋಟಿ ಹಣವನ್ನು ನಿರುದ್ಯೋಗಿ ಯುವ ಜನರಿಂದ ಹಗಲು ದರೋಡೆ ನಡೆಸಿದೆ. ಈ ರೀತಿ ಸುಲಿಗೆಗೆ ಸರ್ಕಾರವೇ ನೇರ ಸಹಕರಿಸುತ್ತಿದೆ. ಹಿಂದಿನ ರಾಜ್ಯಸರ್ಕಾರ 'ಕಂಪು' ಎನ್ನುವ ಯೋಜನೆಯನ್ನು 'ಉದ್ಯೋಗ ವಿನಿಮಯ ಕೇಂದ್ರ'ದಲ್ಲಿಯೇ ತೆರೆಯಲು ಅವಕಾಶ ನೀಡಿ ಖಾಸಗಿ ಸಂಸ್ಥೆಯೊಂದು 20 ಕೋಟಿ ಹಣ ಮಾಡಿಕೊಳ್ಳಲು ಅವಕಾಶ ಮಾಡಿಕೊಟ್ಟಿತು. ಈಗಿನ ಕಾರ್ಮಿಕ ಸಚಿವ ತನ್ವೀರ್‌ಸೇಟ್ ಈ ಉದ್ಯೋಗ ವಿನಿಮಯ ಕೇಂದ್ರಗಳನ್ನು 'ಮಾಹಿತಿ ಪಾರ್ಕು' ಗಳನ್ನಾಗಿ ಮಾಡಲು ಹೊರಟಿದ್ದಾರೆ. ಇದು ಮತ್ಯಾರಿಗೆ ಲಾಭ ನೀಡುತ್ತದೋ ಕಾದು ನೋಡಬೇಕು.

ಹಾಗೂ ವಿಲೀನ ಸಂಬಂಧಿಸಿ ಮತ್ತು ಕೇಳ್ಕರ್ ಸಮಿತಿ, ಗೋಪಾಲರೆಡ್ಡಿ ಸಮಿತಿಗಳು ಪ್ರಮುಖವಾಗಿ ತೆರಿಗೆ ಸುಧಾರಣೆಗಳು, ಕೊರತೆ ಬಜೆಟ್ ಶೇ 3 ಮೀರದಂತೆ ತಡೆಯುವುದು, ಮತ್ತು ನೌಕರರ 12ನೇ ವೇತನ ಆಯೋಗದ ಶಿಫಾರಸುಗಳಿಗೆ ಸಂಬಂಧಿಸಿ ಚರ್ಚಿಸಿ ಸರ್ಕಾರಕ್ಕೆ ಆಯಾ ಸಂದರ್ಭಗಳಲ್ಲಿ ವರದಿಗಳನ್ನು ನೀಡಿವೆ.

ಕರ್ನಾಟಕದಲ್ಲಿ ವಿಶ್ವಬ್ಯಾಂಕಿನ ಅಣತಿಯಂತೆ ಕೆಲಸ ಮಾಡುತ್ತಿದ್ದ ಹಿಂದಿನ ಮುಖ್ಯಮಂತ್ರಿ ಎಸ್.ಎಂ.ಕೃಷ್ಣರವರು ಹಿಂದೆ ಬೀಳಲಿಲ್ಲ. ಅವರು ಆಡಳಿತ ಸುಧಾರಣೆ ಹೆಸರಲ್ಲಿ ಹಾರ್ನಳ್ಳಿ ರಾಮಸ್ವಾಮಿ ಆಯೋಗವನ್ನು ರಚಿಸಿದರು. ಮಾತ್ರವಲ್ಲ ಅವರು ನೀಡಿದ ಎಲ್ಲಾ ನೌಕರ ವಿರೋಧಿ -ದುಡಿಯುವ ಜನ ವಿರೋಧಿ ಶಿಫಾರಸ್ಸುಗಳನ್ನು ಜಾರಿಗೊಳಿಸಿದರು. ಅಲ್ಲದೆ ಇತ್ತೀಚೆಗೆ ಸುಂದರ್ ಸಿಂಗ್ ನೇತೃತ್ವದಲ್ಲಿ ಐಎಎಸ್-ಐಪಿಎಸ್ ಹುದ್ದೆಗಳ ಕಡಿತಕ್ಕೆ ಸಂಬಂಧಿಸಿ ವರದಿಯು ಸರ್ಕಾರಕ್ಕೆಸೇರಿವೆ.

**ಒಟ್ಟಾರೆ ಫಲ : ಉದ್ಯೋಗಗಳ ನಾಶ**

ಸುಧಾರಣೆಯ ಹೆಸರಿನಲ್ಲಿ ರಚಿತವಾದ ರಾಕೇಶ್ ಸಿಂಗ್ ಕಮಿಟಿಯಿಂದ ಹಿಡಿದು ನಮ್ಮ ರಾಜ್ಯದಲ್ಲಿ ಜಾರಿಗೊಂಡ ಹಾರ್ನಳ್ಳಿ ರಾಮಸ್ವಾಮಿ ಹಾಗೂ ಸುಂದರ್ ಸಿಂಗ್ ನೇತೃತ್ವದ ಎಲ್ಲಾ ಆಡಳಿತ ಮತ್ತು ಇತರೆ ಎಲ್ಲಾ ಸುಧಾರಣೆಗಳ ಒಟ್ಟಾರೆ ಫಲಿತಾಂಶವೆಂದರೆ - ವಿಶ್ವಬ್ಯಾಂಕ್ ನಿರ್ದೇಶನದಂತೆ ಆಡಳಿತವನ್ನು ಸುಧಾರಿಸುವ ನೆಪದಲ್ಲಿ, ತೆರಿಗೆಗಳನ್ನು, ಸಾಲ ಸೌಲಭ್ಯಗಳನ್ನು ಸರಳೀಕರಿಸುವ ನೆಪದಲ್ಲಿ ಜನಸಾಮಾನ್ಯರು, ಬಡವರು ಹಾಗೂ ಮಧ್ಯಮವರ್ಗದವರ ಎಲ್ಲಾ ಸವಲತ್ತುಗಳನ್ನು, ಹಕ್ಕುಗಳನ್ನು ಕಿತ್ತುಕೊಳ್ಳುವುದು.

ಈ ನೀತಿಗಳ ಪರಿಣಾಮವಾಗಿ ಕಳೆದ 15 ವರ್ಷಗಳಿಂದ ಉದ್ಯೋಗ ನೇಮಕಾತಿಯ ಮೇಲೆ ನಿರ್ಬಂಧ ಹೇರಲಾಗಿದೆ. ಶೇ 10 ರಷ್ಟು ಉದ್ಯೋಗಗಳನ್ನು ಕಡಿತ ಮಾಡುವ ತೀರ್ಮಾನದ ಫಲವಾಗಿ ಹಿಂದೆ ಇದ್ದ ಎನ್‌ಡಿಎ ಸರ್ಕಾರ ಪ್ರತಿವರ್ಷ 66ಸಾವಿರ ಹುದ್ದೆಗಳನ್ನು ರದ್ದುಗೊಳಿಸುವ ತೀರ್ಮಾನ ಕೈಗೊಂಡಿತು.

ನಮ್ಮ ದೇಶದಲ್ಲಿ ನವ- ಉದಾರವಾದಿ ನೀತಿಗಳು ಜಾರಿಯಾದಾಗಿನಿಂದ ಇಲ್ಲಿಯವರೆಗೂ ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳಲ್ಲಿ 7 ಲಕ್ಷ ಹುದ್ದೆಗಳನ್ನು ರದ್ದುಪಡಿಸಲಾಗಿದೆ ಮತ್ತು ಖಾಲಿ ಇದ್ದ 3 ಲಕ್ಷ ಹುದ್ದೆಗಳನ್ನು ತುಂಬಲಾಗಿಲ್ಲ. ಒಟ್ಟಾರೆ 10 ಲಕ್ಷ ಉದ್ಯೋಗಗಳು ನಾಶಗೊಂಡಿವೆ. ಇದಲ್ಲದೆ ವಿವಿಧ ರಾಜ್ಯಗಳಲ್ಲಿ ಖಾಲಿ ಇರುವ 15 ಲಕ್ಷ ಸರ್ಕಾರಿ ಹುದ್ದೆಗಳನ್ನು ತುಂಬಲು ಅನುಮತಿ ನೀಡಲಾಗಿಲ್ಲ.ಈ ಎಲ್ಲಾ ನೀತಿಗಳ ಪರಿಣಾಮ ಭಾರಿ ಪ್ರಮಾಣದ ನಿರುದ್ಯೋಗಕ್ಕೆ ಪ್ರೇರೇಪಿಸುತ್ತದೆ ಮತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದ ವಿಭಾಗಕ್ಕೂ ಸಿಗಬೇಕಾದ ಸಾಮಾಜಿಕ ನ್ಯಾಯವನ್ನು ನಿರಾಕರಿಸಲಾಗುತ್ತಿದೆ.



ಕರ್ನಾಟಕ ರಾಜ್ಯದಲ್ಲಿ ಈ ಎಲ್ಲಾ ಸುಧಾರಣೆಗಳ ಫಲವಾಗಿ, ರಾಜ್ಯದಲ್ಲಿ ಖಾಲಿ ಇದ್ದ 1 ಲಕ್ಷ ಹುದ್ದೆಗಳನ್ನು ಹಿಂದಿನ ಎಸ್‌ಎಂ ಕೃಷ್ಣ ನೇತೃತ್ವದ ಸರ್ಕಾರ ರದ್ದುಪಡಿಸಿತು. ಮತ್ತೆ ಅದೇ ನೀತಿಗಳ ಭಾಗವಾಗಿ ಧರ್ಮಸಿಂಗ್ ನೇತೃತ್ವದ ಸಮ್ಮಿಶ್ರ ಸರ್ಕಾರ 20142 ಖಾಲಿ ಹುದ್ದೆಗಳನ್ನು ರದ್ದುಪಡಿಸುವ ತೀರ್ಮಾನ ಕೈಗೊಂಡಿವೆ. ಇದಲ್ಲದೆ, ರಾಜ್ಯದಲ್ಲಿರುವ ಸಾರ್ವಜನಿಕ ಉದ್ದಿಮೆಗಳನ್ನು ಮುಚ್ಚುವುದು, ಇಲ್ಲವೇ ಮಾರುವುದು, ಆಡಳಿತ ಸುಧಾರಣಾ ಆಯೋಗದ ಶಿಫಾರಸ್ಸಿನನ್ವಯ ವಿವಿಧ ಇಲಾಖೆಗಳನ್ನು ಮುಚ್ಚುವುದು ಇಲ್ಲವೇ ವಿಲೀನಗೊಳಿಸುವುದು, ನೌಕರರಿಗೆ - ಕಾರ್ಮಿಕರಿಗೆ ಸ್ವಯಂ ನಿವೃತ್ತಿ ಯೋಜನೆಗಳನ್ನು ಜಾರಿಗೊಳಿಸುತ್ತಿರುವುದು, ಇಲ್ಲವೇ ವಜಾಗೊಳಿಸುತ್ತಿರುವುದು, ಅನುಕಂಪದ ಆಧಾರದ ಮೇಲಿನ ನೇಮಕಾತಿ ನಿರ್ಬಂಧ ಹೇರುವುದು, ಮಿತವ್ಯಯ ಕ್ರಮಗಳ ಹೆಸರಲ್ಲಿ, ವಿದ್ಯುನ್ಮಾನ ಆಡಳಿತ ಹೆಸರಲ್ಲಿ, ಇಲಾಖೆ ಸಮೀಕ್ಷೆ ಕಾರ್ಯಗಳ ಹೆಸರಲ್ಲಿ, ಹೊರ ಸಂಪನ್ಮೂಲ ಬಳಕೆಯ ಹೆಸರಲ್ಲಿ ಮತ್ತುಖಾಸಗೀ ಸಹಭಾಗಿತ್ವದ ಹೆಸರಲ್ಲಿ ಹಲವಾರು ಜನ ವಿರೋಧಿ ನೀತಿಗಳನ್ನು ಹರಿಯಬಿಡಲಾಗುತ್ತಿದೆ.

ಇಂತಹ ಎಲ್ಲಾ ನೀತಿಗಳನ್ನು ಒಪ್ಪಿಕೊಳ್ಳುವುದೆಂದರೆ ನಮ್ಮ ಸ್ವಾತಂತ್ರ್ಯ, ಸಾರ್ವಭೌಮತ್ವನ್ನು ಮತ್ತೆ ವಿದೇಶಿಯರಿಗೆ ಶಿರಬಾಗಿ ಒಪ್ಪಿಸುವುದೆಂದೇ ಅರ್ಥ. ಇಂತಹ ಜನವಿರೋಧಿ - ದೇಶವಿರೋಧಿ ಹಾಗೂ ಯುವಜನ ವಿರೋಧಿ ನೀತಿಗಳ ವಿರುದ್ಧ ಹೋರಾಡುವುದೊಂದೇ ಈಗ ನಮ್ಮೆದುರು ಉಳಿದಿರುವ ಏಕೈಕ ಮಾರ್ಗ.

# ...ೀ ಉದ್ಯೋಗ ನಾಶ !

## ಸಂಸತ್ತಿನ ಅಂಗೀಕಾರಕ್ಕೆ ಕಾದಿರುವ

# ಗ್ರಾಮೀಣ ಉದ್ಯೋಗ ಭರವಸೆ ಮಸೂದೆ

**ಆಳುವ ಸರ್ಕಾರಗಳು ಸೃಷ್ಟಿಸಿರುವ ಗಂಭೀರ ಬರ ಮತ್ತು ಭೀಕರ ಬಿಕ್ಕಟ್ಟಿನ ಪರಿಸ್ಥಿತಿಗಳಿಂದಾಗಿ ಕನಿಷ್ಠ ಜೀವನಾಸರೆಯನ್ನು ಖಾತ್ರಿ ಪಡಿಸುವ ಸೂಕ್ತ ಉದ್ಯೋಗ ಭರವಸೆ ಯೋಜನೆ ಇಂದಿನ ತುರ್ತು ಅಗತ್ಯವಾಗಿದೆ. ಇದು ಕೇವಲ ಗ್ರಾಮೀಣ ಪ್ರದೇಶಕ್ಕೆ ಮಾತ್ರವಲ್ಲ, ನಗರ ಪ್ರದೇಶಕ್ಕೂ ವಿಸ್ತರಣೆಯಾಗಬೇಕಿದೆ.**

ಬೆಳೆ ಕುಸಿತ, ಕೃಷಿ ಸಾಲದ ಅಭಾವ, ಬಡ್ಡಿ ಸಾಹುಕಾರರ ಶೋಷಣೆ ಮುಂತಾದ ಸಂಕಷ್ಟಕ್ಕೆ ಕಾರಣವಾಗಿರುವ ನೀತಿಗಳ ಪರಿಣಾಮವಾಗಿ ಸಾವಿರಾರು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕೃಷಿ ಕೂಲಿಕಾರರು ಹಸಿವಿನಿಂದ ಸಾವಿಗೆ ಶರಣಾಗಿದ್ದಾರೆ. ಹತ್ತಾರು ಸಾವಿರ ರೈತಾಪಿ ಮಂದಿ ಕೆಲಸ ಅರಸಿ ಗುಳೆ-ವಲಸೆ ಹೊರಟಿದ್ದಾರೆ. ವಲಸೆ ಬಂದ ಮಂದಿ ಪಟ್ಟಣಗಳಲ್ಲಿ ಕಟ್ಟಡ ಮುಂತಾದ ಕೆಲಸಗಳಲ್ಲಿ ತೊಡಗಿ ಅಮಾನವೀಯ ಬದುಕನ್ನು ನಗರಗಳ ರಸ್ತೆಬದಿ ಜೋಪಡಿಗಳಲ್ಲಿ ನಡೆಸಿದ್ದಾರೆ.

90ರ ದಶಕದ ಆರಂಭದಲ್ಲಿ ನಮ್ಮ ದೇಶದಲ್ಲಿ ಆರಂಭಿಸಲಾದ ಉದಾರೀಕರಣ - ಖಾಸಗೀಕರಣ - ಜಾಗತೀಕರಣ ನೀತಿಗಳನ್ನು ನಂತರದ ಎಲ್ಲಾ ಕೇಂದ್ರ ಸರ್ಕಾರಗಳು ತೀವ್ರಗತಿಯಲ್ಲಿ ಮುಂದುವರಿಸಿದ ಪರಿಣಾಮ, ಗ್ರಾಮೀಣ ಭಾರತದಲ್ಲಿ ಕಾರ್ಷಿಕ ಬಿಕ್ಕಟ್ಟು ಮತ್ತಷ್ಟು ತೀವ್ರಗೊಂಡಿತು. ಇದರ ಪರಿಣಾಮವಾಗಿ ಗ್ರಾಮೀಣ ಭಾರತದಲ್ಲಿ ಹಿಂದೆಂದೂ ಕಂಡರಿಯದಂತಹ ಆಹಾರ ಕೊರತೆ, ಹಸಿವು ಮತ್ತು ಬಡತನ ತೀವ್ರಗೊಂಡಿತು.

1980ರ ದಶಕದಲ್ಲಿ ವಾರ್ಷಿಕ ಶೇ. 3.5ರಷ್ಟು ಪ್ರಮಾಣದಲ್ಲಿ ಬೆಳವಣಿಗೆ ಕಂಡಿದ್ದ ಕೃಷಿ ಉತ್ಪಾದನೆಯು 1990ರ ದಶಕದಲ್ಲಿ ಶೇ.2.0ಕ್ಕೆ ಕುಸಿದಿದೆ. ಇದೇ ಅವಧಿಯಲ್ಲಿ ನೈಜ ಆದಾಯದ ವಾರ್ಷಿಕ ಬೆಳವಣಿಗೆ ಪ್ರಮಾಣವು ಶೇ.4.5ರಿಂದ ಶೇ.2.5ಕ್ಕೆ ಇಳಿದಿದೆ. 2001ರಲ್ಲಿ ಸರಾಸರಿ ಆಹಾರಧಾನ್ಯದ ಲಭ್ಯತೆಯು 1950 ರಲ್ಲಿದ್ದ ಪ್ರಮಾಣಕ್ಕಿಂತ ಕೆಳಕ್ಕೆ ಕುಸಿದಿದೆ. ಯೋಜನಾ ಆಯೋಗದ ವರದಿಗಳ ಪ್ರಕಾರ 1983-94ರ ನಡುವೆ ವಾರ್ಷಿಕ ಶೇ.2.04ರ ಪ್ರಮಾಣದಲ್ಲಿ ಬೆಳವಣಿಗೆ ಸಾಧಿಸಿದ್ದ ಉದ್ಯೋಗವೃದ್ಧಿ ದರವು 1994-2000 ರ ನಡುವೆ ಶೇ.0.98ಕ್ಕೆ ಕುಸಿದಿದೆ. ಒಟ್ಟಾರೆ ಉದ್ಯೋಗದ ಶೇ.70ರಷ್ಟಕ್ಕೆ ಕಾರಣವಾಗಿರುವ ಕೃಷಿ ಮತ್ತು ಸಂಬಂಧಿತ ಸಮುದಾಯದ ಸಾಮಾಜಿಕ ಹಾಗೂ ಇತರೆ ಸೇವೆಗಳಲ್ಲಿ ಹಿಂಜರಿತ ಇದಕ್ಕೆ ಕಾರಣವೆಂದು ವರದಿಗಳು ಉಲ್ಲೇಖಿಸಿವೆ.

ಕೃಷಿಯ ನಿಧಾನಗತಿಯ ಬೆಳವಣಿಗೆ, ನಿರ್ದಿಷ್ಟವಾಗಿ ಆಹಾರಧಾನ್ಯಗಳ ಉತ್ಪಾದನೆಯಲ್ಲಿನ ಬೆಳವಣಿಗೆ ಕೊರತೆ ಮತ್ತು ಗ್ರಾಮೀಣ ಅಭಿವೃದ್ಧಿಗಾಗಿನ ಕೇಂದ್ರ ಸರ್ಕಾರದ ವೆಚ್ಚದಲ್ಲಿನ ಕಡಿತ ಗ್ರಾಮೀಣ ಪ್ರದೇಶಗಳಲ್ಲಿನ ನಿರುದ್ಯೋಗದ ಬಿಕ್ಕಟ್ಟನ್ನು ತೀವ್ರಗೊಳಿಸಿದೆ. 8ನೇ ಪಂಚವಾರ್ಷಿಕ ಯೋಜನಾವಧಿಯ ಕಾಲದಲ್ಲಿ ರಾಷ್ಟ್ರೀಯ ಉತ್ಪನ್ನದ (ಜಿಡಿಪಿ) ಸರಾಸರಿ ಶೇ.13ರಷ್ಟು ಪಾಲನ್ನು ಪಡೆದಿದ್ದ ಗ್ರಾಮೀಣ ಅಭಿವೃದ್ಧಿ ವೆಚ್ಚವು 10ನೇ ಯೋಜನಾವಧಿಯಲ್ಲಿ ಶೇ.5ಕ್ಕೆ ಸೀಮಿತವಾಗಿದೆ. ಇವುಗಳ ಪರಿಣಾಮವೇ ಅನಿಯಂತ್ರಿತ ಹಸಿವಿನ ಸಾವು ಮತ್ತು ರೈತರ ಆತ್ಮಹತ್ಯೆಗಳು.



**ಜನಾದೇಶದ ಒತ್ತಾಸೆ**

ಇಂತಹ ಪರಿಸ್ಥಿತಿಯಲ್ಲಿ ಹಿಂದಿನ ಬಿಜೆಪಿ ನೇತೃತ್ವದ ಎನ್.ಡಿ.ಎ ಸರ್ಕಾರವನ್ನು ಅದರ ದಿವಾಳಿಕೋರ ನೀತಿಗಳಿಂದಾಗಿ ತಿರಸ್ಕರಿಸಿದ ಭಾರತದ ಜನತೆ, ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರಕ್ಕೆ ನಾಂದಿ ಹಾಡಿದರು. ಯುಪಿಎ ಸರ್ಕಾರವು ತನ್ನ ರಾಷ್ಟ್ರೀಯ ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ (ಎನ್.ಸಿ.ಎಂ.ಪಿ) ರಾಷ್ಟ್ರದ ಪ್ರತಿ ಒಂದು ಕುಟುಂಬದ ಒಬ್ಬ ಸದಸ್ಯರಿಗೆ ವಾರ್ಷಿಕ ಕನಿಷ್ಠ 100 ದಿನಗಳ ಉದ್ಯೋಗವನ್ನು ಖಾತ್ರಿಪಡಿಸುವ ಕಾನೂನಾತ್ಮಕ ರಕ್ಷಣೆ ಒದಗಿಸುವ ಅಂಶವನ್ನು ಪ್ರಕಟಿಸಿತು. ಅದಕ್ಕಾಗಿ ರಾಷ್ಟ್ರೀಯ ಉದ್ಯೋಗ ಭರವಸೆ ಕಾಯ್ದೆ ರೂಪಿಸುವುದಾಗಿ ಘೋಷಿಸಿತು.

**ನಿಧಾನವೇ ಪ್ರಧಾನ**

ಸರ್ಕಾರ ರಚನೆಗೊಂಡು ತಿಂಗಳುಗಳೇ ಕಳೆದರು, ಅಂತಹ ಯೋಜನೆಗಳಿಗೆ ವಾರ್ಷಿಕ ರೂ.35,000ದಿಂದ ರೂ.45,000 ಕೋಟಿ ಹಣ ಬೇಕಾಗುತ್ತದೆ, ಅಷ್ಟೊಂದು ಹಣ ಎಲ್ಲಿಂದ ತರಬೇಕು ಎಂಬ ತಗಾದೆ ತೆಗೆದು, ಮಸೂದೆಯನ್ನೇ ಸಂಸತ್ತಿನಲ್ಲಿ ಮಂಡಿಸಲಿಲ್ಲ. ಚಳುವಳಿಗಳು-ಹೋರಾಟ, ಎಡ ಪಕ್ಷಗಳ ಒತ್ತಡಕ್ಕೆ ಮಣಿದು 2004ರ ಆಗಸ್ಟ್‌ನಲ್ಲಿ ಗ್ರಾಮೀಣಾಭಿವೃದ್ಧಿ ಸಚಿವಾಲಯವು ಕರಡು ಮಸೂದೆ ಒಂದನ್ನು ತಯಾರಿಸಿ, ಜನಾಭಿಪ್ರಾಯ ಸಂಗ್ರಹಣೆಗೆಂದು ಬಿಡುಗಡೆ ಮಾಡಿತು. ಮಸೂದೆಯನ್ನು ಗ್ರಾಮೀಣ ಪ್ರದೇಶಗಳಿಗೆ ಸೀಮಿತಗೊಳಿಸಿ, ನಗರ ಪ್ರದೇಶವನ್ನು ಅದರಿಂದ ಹೊರ ಉಳಿಸಲಾಗಿತ್ತು.

ಅಂತಹ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಭರವಸೆ ಮಸೂದೆಯಲ್ಲಿನ ಲೋಪದೋಷ ಸರಿಪಡಿಸಿ, ಸಂಸತ್ತಿನಲ್ಲಿ ಮಂಡಿಸಿ ಅಂಗೀಕರಿಸಿ, ನಂತರದ ಒಂದು ವರ್ಷದಲ್ಲಿ ನಗರ ಪ್ರದೇಶಕ್ಕೂ ಅದನ್ನು ವಿಸ್ತರಿಸಿ ಎಂದು ವಿವಿಧ ಸಂಘಟನೆಗಳು, ಸಿಪಿಐ(ಎಂ) ಮತ್ತು ಇತರೆ ಎಡಪಕ್ಷಗಳು ಒತ್ತಾಯಿಸಿದವು. ಅಂತು ಇಂತು ನಿಧಾನವೇ ಪ್ರಧಾನವೆಂಬಂತೆ ಒತ್ತಡಕ್ಕೆ ಮಣಿದು 2004 ಡಿಸೆಂಬರ್‌ನಲ್ಲಿ ಸಂಸತ್ತಿನ ಗ್ರಾಮೀಣ ಉದ್ಯೋಗ ಭರವಸೆ ಮಸೂದೆಯನ್ನೇನೊ ಮಂಡಿಸಲಾಯಿತು. ಜನಾಭಿಪ್ರಾಯ ಸಂಗ್ರಹಣೆ ಮಾಡಿದ ನಂತರವೆಂದು ಮಂಡಿಸಲಾಗಿರುವ ಮಸೂದೆಯಲ್ಲಿ ಕರಡು ಮಸೂದೆಯಲ್ಲಿದ್ದ ಅನೇಕ ಅಂಶಗಳು ಮಂಗಮಾಯವಾಗಿವೆ. ಗ್ರಾಮೀಣ ಪ್ರದೇಶದ ಎಲ್ಲಾ ಕುಟುಂಬಗಳಿಗೆಂದು ಸೂಚಿಸಲಾಗಿದ್ದ ಮಸೂದೆಯ ವ್ಯಾಪ್ತಿಯನ್ನು ಕೇವಲ ಬಡತನ ರೇಖೆಗಿಂತ ಕೆಳಗಿನ ಕುಟುಂಬಗಳಿಗೆ ಸೀಮಿತಗೊಳಿಸಲಾಗಿದೆ. ಕೇವಲ 150 ಜಿಲ್ಲೆಗಳಲ್ಲಿ ಪ್ರಾಯೋಗಿಕವಾಗಿ ಜಾರಿಗೊಳಿಸಿ, ಅನಂತರ ಅದರ ಅನುಭವದ ಆಧಾರದಲ್ಲಿ ಇತರೆಡೆಗೆ ಜಾರಿಗೊಳಿಸುವ ಅಂಶ ಒಳಗೊಳ್ಳಲಾಗಿದೆ. ಕನಿಷ್ಠ ಕೂಲಿ ನಿಗದಿಯಲ್ಲಿ ಅಸ್ಪಷ್ಟತೆ, ಶಾಸಕಾಂಗದ ವ್ಯಾಪ್ತಿಯನ್ನು ಕಡಿಮೆ ಮಾಡಿ ಕಾರ್ಯಾಂಗಕ್ಕೆ ಇಡೀ ಯೋಜನೆಯನ್ನು ಮಾರ್ಪಡಿಸುವ ಅಧಿಕಾರ ನೀಡಲಾಗಿದೆ. ರಾಜ್ಯ ಸರ್ಕಾರಗಳ ಮೇಲೆ 'ನಿರುದ್ಯೋಗ ಭತ್ಯೆ' ಹೊರೆ ಹೊರಿಸುವ ಯತ್ನ ನಡೆಸಲಾಗಿದೆ. ಇದರಿಂದಾಗಿ ಉದ್ಭವಿಸುವ ಸಹಜ ಪ್ರಶ್ನೆಯೆಂದರೆ ಕರಡಿಗೆ ತಿದ್ದುಪಡಿ ಮಾಡಿ ಮಂಡಿಸುವಾಗ ಯಾವ ಜನರ ಅಭಿಪ್ರಾಯಕ್ಕೆ ಆದ್ಯತೆ ನೀಡಲಾಗಿದೆ ಎಂಬುದು. ಮೂಲ ಕರಡಿನಲ್ಲಿದ್ದಂತೆ ಹಾಗೂ ಎಡ ಪಕ್ಷಗಳ ಮತ್ತು ಇತರೆ ಸಂಘಟನೆಗಳ ಒತ್ತಾಯದ ತಿದ್ದುಪಡಿಗಳನ್ನು ಒಳಗೊಂಡಲ್ಲಿ ಬರಾಬರಿ ಖರ್ಚು ಮಾಡಬೇಕಾದ್ದು ಕಟ್ಟಿಟ್ಟ ಬುತ್ತಿ, ಹಾಗಾಗಿ ಖರ್ಚು ಕಡಿಮೆ ಮಾಡಲು ಆದಷ್ಟು ಯೋಜನೆ ಸೀಮಿತಗೊಳಿಸಬೇಕೆಂಬುದೆ ಇದರ ಹಿಂದಿನ ಪ್ರಧಾನ ಅಂಶವಾದಂತೆ ಕಾಣುತ್ತದೆ. ಅಂದರೆ ಜನಾಭಿಪ್ರಾಯ ಎಂದರೆ ವಾರ್ಷಿಕ ಬಜೆಟ್ ಹಣವಾದ ರೂ.5,25,000 ಕೋಟಿ ಹಣದಲ್ಲಿ ಈ ಯೋಜನೆಗೆ ರೂ.35ರಿಂದ ರೂ.45,000 ಕೋಟಿ ಏಕೆ ವೆಚ್ಚ ಮಾಡಬೇಕು, ಅದನ್ನೆ ತೆರಿಗೆ ವಿನಾಯ್ತಿ ಮತ್ತಿತರೆ ಹೆಸರಿನಲ್ಲಿ ಗುತ್ತೆದಾರಿ ಬಂಡವಾಳಗಾರರು, ಭೂಮಾಲಿಕರು, ಹಾಗೂ ಬಹುರಾಷ್ಟ್ರೀಯ ಬಂಡವಾಳಕ್ಕೆ ನೀಡಿದರೆ ಒಳಿತಲ್ಲವೇ ಎಂಬ ಅಭಿಪ್ರಾಯವೇ, ರಾಷ್ಟ್ರದ ಜನಾಭಿಪ್ರಾಯವೆಂದು ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಪರಿಗಣಿಸಿದಂತಿದೆ.

**ಮಸೂದೆ ಚರ್ಚೆ ವಿಳಂಬ**

ಮಸೂದೆ ಮಂಡಿಸಿ 9 ತಿಂಗಳಾದರೂ ಸಂಸತ್ತಿನಲ್ಲಿ ಅದು ಚರ್ಚೆಗೆ ಬರಲಿಲ್ಲ! ಕಾರಣ

ಪುಟ 11 ಕ್ಕೆ

# ಪುಸ್ತಕ ಕೇಳಿದ ಮುಖಂಡರ ಮಸ್ತಕದ ಮೇಲೆ ಬಡಿದು 'ಗುರುವರ್ಯ'ರ ಗೂಂಡಾಗಿರಿ

**ಪುಸ್ತಕ ಕೇಳಿದ ವಿದ್ಯಾರ್ಥಿ ಮುಖಂಡರ ಮಸ್ತಕದ ಮೇಲೆ ಬಡಿದ ಪ್ರಾಂಶುಪಾಲ ಮಹಾಶಯರೊಬ್ಬರ ಘನ ಕಾರ್ಯ ಗದಗ ಜಿಲ್ಲೆಯ ರೋಣ ತಾಲ್ಲೂಕು-ಬೆಳವಣಿಕೆ ಎಂಬ ಊರಿನಿಂದ ವರದಿಯಾಗಿದೆ. ಮೊದಲು ಎಸ್‌ಎಫ್‌ಐ ಮುಖಂಡ ಅನಿಲ ತೆಗ್ಗಿನಕೇರಿಯ ಮೇಲೆ ಹಲ್ಲೆ ಮಾಡಿದ ಈ 'ಗುರುವರ್ಯ'ರು ಈ ಬಗ್ಗೆ ಪ್ರಶ್ನಿಸಿ - ಪ್ರತಿಭಟನೆಗೆ ತೆರಳಿದ ಡಿವೈಎಫ್‌ಐ ಮುಖಂಡ ಶರಣಬಸವ ಮರದ್‌ರವರ ಮೇಲೂ ಗೂಂಡಾಗಿರಿ ನಡೆಸಿದ್ದಾರೆ. ಎಸ್ಸೆಫೈ - ಡಿವೈಎಫ್‌ಐ ಸಂಘಟನೆಗಳು ವಿದ್ಯಾರ್ಥಿಗಳ ನ್ಯಾಯಬದ್ಧ ಹಕ್ಕುಗಳ ಬೇಡಿಕೆಗಳಿಗಾಗಿ ಮತ್ತು 'ಗುರುವರ್ಯ'ರ ಗೂಂಡಾಗಿರಿಯ ವಿರುದ್ಧ ಚಳುವಳಿ ತೀವ್ರಗೊಳಿಸಿವೆ.**


ಓದಲಿಕ್ಕೆ ಗ್ರಂಥಾಲಯದ ಪುಸ್ತಕ ಕೊಡಿ, ವಿದ್ಯಾರ್ಥಿನಿಯರಿಗೆ ಪ್ರತ್ಯೇಕವಾದ ಶೌಚಾಲಯ ನಿರ್ಮಿಸಿ, ಸರ್ಕಾರ ನಿಗದಿಪಡಿಸಿದ ದಂಡರಹಿತ ಪ್ರವೇಶ ಅವಧಿ ಮುಗಿಯುವ ಪೂರ್ವದಲ್ಲಿಯೇ ವಿದ್ಯಾರ್ಥಿಗಳಿಂದ ದಂಡ ಯಾಕೆ? ಎಂದು ಗೌರವಪೂರ್ವಕವಾಗಿ ವಿದ್ಯಾರ್ಥಿಗಳು ಪ್ರಿನ್ಸಿಪಾಲರನ್ನು ಪ್ರಶ್ನಿಸಿದ್ದಕ್ಕೆ ಸಿಕ್ಕ ಉತ್ತರ ಏನು ಗೊತ್ತೆ? ಪ್ರಶ್ನಿಸಿದ ವಿದ್ಯಾರ್ಥಿ ಮುಖಂಡರ ಮೇಲೆ ಪ್ರಿನ್ಸಿಪಾಲರಿಂದ ಅಮಾನುಷ ಹಲ್ಲೆ ಮತ್ತು ಜಾತಿ ನಿಂದನೆ. ಸಾಲದಕ್ಕೆ ಇಬ್ಬರೂ ವಿದ್ಯಾರ್ಥಿ ಮುಖಂಡರನ್ನು ಕಾಲೇಜಿನಿಂದಲೇ ಹೊರ ಹಾಕಲಾಗಿದೆ. ಇದನ್ನು ಪ್ರಶ್ನಿಸಿ ಜಿಲ್ಲಾಧಿಕಾರಿ, ಜಿಲ್ಲಾ ಪಿಯು ಉಪ ನಿರ್ದೇಶಕರಿಗೆ ಮೊರೆ - ಜಿಲ್ಲಾಧಿಕಾರಿಗಳಿಂದ ತನಿಖೆಗೆ ಆದೇಶ. ತನಿಖೆಗೆ ಬಂದ ಪಿಯು ಉಪ ನಿರ್ದೇಶಕರ ಎದುರೇ ವಿದ್ಯಾರ್ಥಿ-ಯುವಜನ ಮುಖಂಡರ ಮೇಲೆ ಪ್ರಿನ್ಸಿಪಾಲರ ಗೂಂಡಾಪಡೆಗಳಿಂದ ಕಾಲೇಜು ಕ್ಯಾಂಪಸ್ಸಿನಲ್ಲಿ ತೀವ್ರ ಹಲ್ಲೆ!

ಈ ಘಟನೆ ಬಿಹಾರದಲ್ಲಿ ನಡೆದಿದೆ ಎಂದುಕೊಳ್ಳಬೇಡಿ. ಕರ್ನಾಟಕದ ಗದಗ ಜಿಲ್ಲೆ ಬೆಳವಣಿಕೆ ಎಂಬ ಗ್ರಾಮದಲ್ಲಿ ಜರುಗಿದೆ. ಬೆಳವಣಿಕೆಯಲ್ಲಿ ಅನುದಾನಿತ ಶ್ರೀ ವೀರಭದ್ರೇಶ್ವರ ಸಂಯುಕ್ತ ಪದವಿಪೂರ್ವ ಕಾಲೇಜಿನಲ್ಲಿ ಎಸ್‌ಎಫ್‌ಐ ಮೂರ್‍ನಾಲ್ಕು ವರ್ಷಗಳಿಂದ ಕ್ರಿಯಾಶೀಲವಾಗಿ ಬೆಳೆಯುತ್ತಿದೆ. ಇದನ್ನು ಸಹಿಸದ ಊರಿನ ಕೆಲ ಪಾಳೇಗಾರಿ ಪುಢಾರಿ ಜಾತಿವಾದಿ ರಾಜಕಾರಣಿಗಳು ಪ್ರಿನ್ಸಿಪಾಲರನ್ನು ಈ ಕೆಲಸಕ್ಕೆ ಬಳಸಿಕೊಂಡಿದ್ದಾರೆ. ಅವಮಾನತ್ತಿಗೆ ಒಳಗಾದವರು ಎಸ್‌ಎಫ್‌ಐ ಮುಖಂಡ ಅನಿಲಕುಮಾರ ತೆಗ್ಗಿನಕೇರಿ ಮತ್ತು ಈರೇಶ ತಾಳದವರ ಹಲ್ಲೆಗೆ ಒಳಗಾದವರು ಡಿವೈಎಫ್‌ಐ ನ ಶರಣಬಸವ ಮರದ.

**ಘಟನೆಯ ವಿವರ**

ಬೆಳವಣಿಕೆ ಗ್ರಾಮದಲ್ಲಿರುವ ಶ್ರೀ ವೀರಭದ್ರೇಶ್ವರ ಸಂಯುಕ್ತ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿ ಹಾಗೂ ಎಸ್‌ಎಫ್‌ಐನ ಗದಗ ಜಿಲ್ಲಾ ಸಂಘಟನಾ ಸಮಿತಿ ಸದಸ್ಯರಾದ ಅನಿಲಕುಮಾರ ತೆಗ್ಗಿನಕೇರಿ ನೇತೃತ್ವದಲ್ಲಿ ಹಲವಾರು ದಿನಗಳಿಂದ ಗ್ರಂಥಾಲಯ ಕೊರತೆ, ಡೊನೇಷನ್ ಹಾವಳಿ, ಕುಡಿಯುವ ನೀರು, ಎನ್‌ಎಸ್‌ಎಸ್, ಎನ್‌ಸಿಸಿ, ಶಿಕ್ಷಕರ ಕೊರತೆ ವಿರುದ್ಧ ಪ್ರತಿಭಟನೆ ನಡೆಸುತ್ತಾ ಮತ್ತು ಮನವಿ ಸಲ್ಲಿಸುತ್ತಾ ಬರಲಾಗಿದೆ. ಸುಮಾರು 300 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿರುವ ಕಾಲೇಜಿನ ಕಟ್ಟಡ ಕಟ್ಟಿ 5 ವರ್ಷ ಗತಿಸಿದರೂ 'ಕಟ್ಟಡ ಸಹಾಯಾರ್ಥ' ಎಂಬ ಹೆಸರಿನಲ್ಲಿ 250 ರೂ ನಿಂದ 300 ಪ್ರತಿವರ್ಷ ವಸೂಲಿ ಮಾಡಲಾಗುತ್ತಿದೆ. ಹಾಲಿ ವಿದ್ಯಾರ್ಥಿಗಳಿಂದ 'ಹಳೆ ವಿದ್ಯಾರ್ಥಿ ಸಂಘ'ಕ್ಕೆ ಶುಲ್ಕ ವಸೂಲಿ ಮಾಡಲಾಗುತ್ತಿದೆ. ಉಪನ್ಯಾಸಕರ ಕೊರತೆ ಎದ್ದು ಕಾಣುತ್ತಿದೆ. ಮುಖ್ಯವಾಗಿ ಈ ವರ್ಷದ ಪಿಯು ಪ್ರವೇಶಕ್ಕೆ ಸರ್ಕಾರ ನಿಗದಿಪಡಿಸಿದ ದಂಡರಹಿತ ಅವಧಿ ಇರುವಾಗಲೇ ಹಲವಾರು ವಿದ್ಯಾರ್ಥಿಗಳಿಂದ ದಂಡ ವಸೂಲಿ ನಡೆಸಿರುವುದನ್ನು ಗಮನಿಸಿ ಅನಿಲ ಕುಮಾರ ತೆಗ್ಗಿನಕೇರಿ ನೇತೃತ್ವದಲ್ಲಿ ಎಸ್‌ಎಫ್‌ಐ ಸಂಘಟನೆಯಿಂದ ಹೋರಾಟ ಮಾಡಿ ವಿದ್ಯಾರ್ಥಿಗಳಿಗೆ ದಂಡದ ಸುಮಾರು 3000 ರೂ. ವಾಪಸ್ ಕೊಡಿಸಿದ್ದಾರೆ. ಕಾಲೇಜು ಆರಂಭವಾಗಿ ತಿಂಗಳು ಗತಿಸಿದರೂ ಪುಸ್ತಕ, ಶೌಚಾಲಯ ಪೂರೈಸದ್ದನ್ನು ಪ್ರಶ್ನಿಸಿದ ಅನಿಲಕುಮಾರರನ್ನು ಪ್ರಿನ್ಸಿಪಾಲರು 'ಸೂ... ಮಗನೇ ನಿಂದು ಪ್ರಶ್ನಿಸೋದು ಜಾಸ್ತಿ ಆಗೈತಿ' ಎಂದು ಅವಾಚ್ಯ ಶಬ್ದಗಳಿಂದ ಬೈದು ದರದರನೆ ಎಳೆದು ಹೊಡೆದಿದ್ದಾರೆ. ಅಲ್ಲದೇ ಕ್ಲಾಸ್ ರೂಂಗೆ ಕರೆದೊಯ್ದು ಎಲ್ಲಾ ವಿದ್ಯಾರ್ಥಿಗಳಿಗೂ 'ಲೇ ಮಕ್ಕಾ ಯಾವನಾದ್ರೂ ಇನ್ನೊಮ್ಮೆ ಅದು ಬೇಕು, ಇದು ಬೇಕು ಅಂದ್ರ ಇದೇ ಗತಿ ಆಗ್ತೈತಿ, ಎಸ್‌ಎಫ್‌ಐಗೆ ಯಾವನಾದ್ರೂ ಸೇರಿದ್ರ ನಿಮ್ಮ ಕ್ಲಾಸಿನಿಂದ ಡಿಬಾರ್ ಮಾಡ್ತೇನಿ, ಫೇಲ್ ಮಾಡ್ತೀನಿ, ನಿಮ್ಮಪ್ಪಂದಿರನ್ನು ಕರ್‍ಸಿ, ನಿಮ್ಮ ಮಕ್ಕು ಸರಿಯಿಲ್ಲ ಅಂತ ಹೇಳ್ತೀನಿ" ಎಂದು ಹೆದರಿಸಿದ್ದಾರೆ. ಮಾರನೇ ದಿನ ನೋಟಿಸ್ ಬೋರ್ಡ್‌ಗೆ 'ಕಾಲೇಜಿನಿಂದ ಅನಿಲ್‌ಕುಮಾರ ತೆಗ್ಗಿನಕೇರಿಯನ್ನು ದುರ್ನಡತೆಗಾಗಿ ಹೊರಹಾಕಲಾಗಿದೆ' ಎಂದು ನೋಟೀಸ್ ಹಚ್ಚಲಾಗಿದೆ.

ಅದನ್ನು ಪ್ರಶ್ನಿಸಿ ಜುಲೈ 11 ಎಸ್‌ಎಫ್‌ಐ ಜಿಲ್ಲಾ ಸಮಿತಿ ನೇತೃತ್ವದಲ್ಲಿ ಗದಗ ಜಿಲ್ಲಾಧಿಕಾರಿಗಳಿಗೆ ಮತ್ತು ಪಿಯು ಉಪನಿರ್ದೇಶಕರಿಗೆ ಮನವಿ ಸಲ್ಲಿಸಿದ್ದರಿಂದ ಜಿಲ್ಲಾಧಿಕಾರಿಗಳು ಪಿಯು ಉಪನಿರ್ದೇಶಕರಿಗೆ ತನಿಖೆಗೆ ಆದೇಶಿಸಿದ್ದಾರೆ. ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದ್ದು ಪತ್ರಿಕೆಯಲ್ಲಿ ಪ್ರಕಟವಾಗಿ ಅದರಲ್ಲಿ ಅದೇ ಕಾಲೇಜಿನ ಈರೇಶ ತಾಳದವರ ಹೆಸರಿದೆ ಎಂಬ ಕಾರಣಕ್ಕಾಗಿ ಪ್ರಿನ್ಸಿಪಾಲರು 'ಏ ಹೊಲೆಯ ಸೂ... ಮಗನೆ ನಿನ್ನ ಎಲ್ಲಿ ಇಡಬೇಕಾಗಿತ್ತೋ ಅಲ್ಲೇ ಇಡಬೇಕು' ಎಂದು ಜಾತಿ ನಿಂದನೆ ಮಾಡಿ ಅವನನ್ನು ಹೊಡೆದು ಡಿಬಾರ್ ಮಾಡಿದ್ದಾರೆ. ಜುಲೈ 15 ರಂದು ಜಿಲ್ಲಾಧಿಕಾರಿ ಆದೇಶದಂತೆ ಮೂರು ಹಂತದ ತನಿಖೆಗೆ ಹೋದ DDPU ಗೆ ಆಡಳಿತ ಮಂಡಳಿ ಮತ್ತು ಪ್ರಿನ್ಸಿಪಾಲ್ ಸಹಕರಿಸಿಲ್ಲ, ನಂತರ ಜುಲೈ 16 ರಂದು ಉಪನಿರ್ದೇಶಕರು ತನಿಖೆಗೆ ಬಂದದ್ದನ್ನು ಗಮನಿಸಿ ಹೈಸ್ಕೂಲು ಮತ್ತು ಕಾಲೇಜು ವಿದ್ಯಾರ್ಥಿಗಳನ್ನು ಪ್ರಿನ್ಸಿಪಾಲ್ ಸಿಬ್ಬಂದಿ ಬೆದರಿಸಲಾರಂಭಿಸಿದ್ದಾರೆ. ಎಸ್‌ಎಫ್‌ಐ ಸದಸ್ಯರಾದವರನ್ನು ಸುಮ್ಮನೆ ಬಿಡೋದಿಲ್ಲ ಎಂದು ಸವಾಲು ಹಾಕಿದ್ದಾರೆ. 'ಎಸ್‌ಎಫ್‌ಐ ಏನು ಅನ್ಯಾಯ ಮಾಡಿಲ್ಲ, ಅನ್ಯಾಯ ಮೆಟ್ಟಿ ನಿಲ್ಲದೆ ಸರ್. ನಾನು ಅದರ ಸದಸ್ಯ' ಎಂದ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿ ಮಂಜುನಾಥನನ್ನು(ಅದೇ ಕಾಲೇಜಿನ ನೌಕರರೊಬ್ಬರ ಮಗ) ಬಾಸುಂಡೆ ಮೂಡುವ ರೀತಿಯಲ್ಲಿ ಪ್ರಿನ್ಸಿಪಾಲರು ಹೊಡೆದಿದ್ದಾರೆ. ಮತ್ತು ಎಸ್‌ಎಫ್‌ಐ ಜಿಲ್ಲಾ ಸಮಿತಿ ಒತ್ತಾಯ ಹೇರಿದಾಗ DDPU 18 ರಂದು ಡಿವೈಎಫ್‌ಐ ಮುಖಂಡರಿಗೆ ಬರಲು ಹೇಳಿ ಕಾಲೇಜಿಗೆ ತನಿಖೆಗೆ ಬಂದಾಗ ಪ್ರಿನ್ಸಿಪಾಲರು ಅಧಿಕಾರಿಗಳ ಮುಂದೆ ವಕೀಲರೂ ಆಗಿರುವ ಡಿವೈಎಫ್‌ಐ ಮುಖಂಡ ಮತ್ತು ಎಸ್‌ಎಫ್‌ಐ ಮಾಜಿ ರಾಜ್ಯ ಸಮಿತಿ ಸದಸ್ಯ ಶರಣಬಸವ ರವರನ್ನು ಪರಿಚಯ ಮಾಡಿಕೊಳ್ಳುವ ಪೂರ್ವದಲ್ಲೇ ಹೊರದೂಡಿದ್ದಾರೆ. ಒಳಗಡೆ ತನಿಖೆ ನಡೆಸುವಾಗ ಕಾಲೇಜಿನ ಕ್ಯಾಂಪಸ್ಸಿನಲ್ಲೇ ಪೂರ್ವಯೋಜಿತವಾಗಿಯೇ ಪ್ರಿನ್ಸಿಪಾಲ್ ಗೂಂಡಾಪಡೆ ಹಿಂದುಮುಂದು ನೋಡದೆ ತಲೆ, ಬೆನ್ನು, ಕೈಕಾಲುಗಳಿಗೆ ಸಿಕ್ಕಾಪಟ್ಟೆ ಹೊಡೆದಿದ್ದಾರೆ. ಶಿಸ್ತು, ಶಾಂತಿ, ಸಹನೆ ಕಲಿಸಬೇಕಾದ ಪ್ರಿನ್ಸಿಪಾಲರೇ (ಊರಿನ ಕೆಲವು ಜಾತಿ ರಾಜಕೀಯ ಪುಢಾರಿಗಳ ತಾಳಕ್ಕೆ ತಕ್ಕಂತೆ) ಗೂಂಡಾ ಪ್ರವೃತ್ತಿ ಪ್ರದರ್ಶಿಸಿದ್ದಾರೆ.



ವಿದ್ಯಾರ್ಥಿಗಳ ಪ್ರತಿಭಟನೆ

ಹಲ್ಲೆಗೊಳಗಾದ ಶರಣಬಸವ ಮರದ ನಂತರ ಎಸ್‌ಪಿ ಯವರನ್ನು ಭೇಟಿಯಾಗಿ ಪ್ರಕರಣ ವಿವರಿಸಿದ್ದಾರೆ. ಎಸ್‌ಪಿ ಸೂಚನೆಯಂತೆ ರೋಣ ಪಿಎಸ್‌ಐ ಗೆ ಕಂಪ್ಲೆಂಟ್ ನೀಡಿದ್ದಾರೆ. ಕಂಪ್ಲೆಂಟ್ ಆದ ಸುದ್ದಿ ತಿಳಿದು ಪ್ರಿನ್ಸಿಪಾಲರ ಬೆಂಬಲಿಗರು ಕಾಲೇಜಿನ ದಲಿತ ನೌಕರನನ್ನು ಬಳಸಿಕೊಂಡು ಅಟ್ರಾಸಿಟಿ ಕೇಸ್ ಹಾಕುವ ಪ್ರಯತ್ನ ಮಾಡಿದ್ದಾರೆ. ಎಸ್‌ಎಫ್‌ಐ, ಡಿಸಿ ಮತ್ತು ಎಸ್.ಪಿ.ಗೆ ಮೊದಲೇ ದೂರು ಸಲ್ಲಿಸಿದ್ದರಿಂದ ಅದು ಸಾಧ್ಯವಾಗದೆ, ಕೊನೆಗೆ "ಕಾಲೇಜಿಗೆ ಗುಂಪಾಗಿ ಬಂದು ಪ್ರಿನ್ಸಿಪಾಲರನ್ನು ಹೊಡೆದಿದ್ದಾರೆ. ಕಾಲೇಜಿಗೆ ಕಲ್ಲು ತೂರಿದ್ದಾರೆ" ಎಂದು ಎಸ್‌ಎಫ್‌ಐ - ಡಿವೈಎಫ್‌ಐನ ಮುಖಂಡರ ಮೇಲೆ ಸುಳ್ಳುಕೇಸ್ ಹಾಕಿದ್ದಾರೆ. ಆ ಘಟನೆ ನಡೆದ ದಿನ ಊರಿನಲ್ಲಿಯೇ ಇಲ್ಲದ ಡಿವೈಎಫ್‌ಐ ಮುಖಂಡ ಅಬ್ದುಲ್ ರಜಾಕ್ ಮುಲ್ಲಾ ಮತ್ತು ಎಸ್‌ಎಫ್‌ಐ ರಾಜ್ಯ ಸಹ ಕಾರ್ಯದರ್ಶಿ ಎಂ.ಎಸ್.ಹಡಪದ ಮೇಲೂ ಕೇಸ್ ದಾಖಲು ಮಾಡಲಾಗಿದೆ.

**ಗದಗ ಜಿಲ್ಲೆಯಲ್ಲಿ ಹಾಗೂ ರಾಜ್ಯವ್ಯಾಪಿ ಪ್ರತಿಭಟನೆ**

ಈ ಪ್ರಕರಣ ಖಂಡಿಸಿ - ಎಸ್‌ಎಫ್‌ಐ - ಡಿವೈಎಫ್‌ಐ ಚಳುವಳಿ ಹಾಗೂ ಕಾನೂನು ಮೂಲಕ ಎದುರಿಸಲು ತೀರ್ಮಾನಿಸಿದ್ದು, ದಿನಾಂಕ 20.04.05 ರಂದು ಗದಗ ನಗರದಲ್ಲಿ ನೂರಾರು ವಿದ್ಯಾರ್ಥಿಗಳು ಮೆರವಣಿಗೆ ಮೂಲಕ ಜಿಲ್ಲಾಧಿಕಾರಿ ಕಛೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದ್ದಾರೆ. ಪ್ರತಿಭಟನೆಯಲ್ಲಿ ಎಸ್‌ಎಫ್‌ಐ ರಾಜ್ಯ ಉಪಾಧ್ಯಕ್ಷ ವಿಜಯಕುಮಾರ್ ದೊಡ್ಡಮನಿ, ಕೃಷಿ ಕೂಲಿಕಾರರ ಸಂಘಟನೆಯ ರಾಜ್ಯಾಧ್ಯಕ್ಷರಾದ ನಿತ್ಯಾನಂದಸ್ವಾಮಿ ಭಾಗವಹಿಸಿದರೆ, ದಲಿತ ಯುವ ಸೇನೆ ಮತ್ತು ಡಿ.ಎಸ್.ಎಸ್. ಮುಂತಾದ ಸಂಘಟನೆಗಳು ಹೋರಾಟ ಬೆಂಬಲಿಸಿವೆ. ಜಿಲ್ಲಾಧಿಕಾರಿಗಳು ಗ್ರಾಮದಲ್ಲಿ ಶಾಂತಿಸಭೆ ನಡೆಸಿ ಪ್ರಕರಣ ಇತ್ಯರ್ಥಪಡಿಸುವ ಭರವಸೆ ನೀಡಿದರು. ಗಜೇಂದ್ರಗಡದಲ್ಲಿ ಹಾಗೂ ರೋಣ ತಾಲ್ಲೂಕು ಕೇಂದ್ರದಲ್ಲಿಯೂ ವಿದ್ಯಾರ್ಥಿಗಳು ತರಗತಿಗಳನ್ನು ಬಹಿಷ್ಕರಿಸಿ ಪ್ರತಿಭಟನಾ ಮೆರವಣಿಗೆಗಳನ್ನು ನಡೆಸಿ ವಿದ್ಯಾರ್ಥಿಗಳ ಮೇಲೆ ಹಲ್ಲೆ ಮಾಡಿದ ಪ್ರಾಚಾರ್ಯರನ್ನು ಅಮಾನತುಗೊಳಿಸಲು ಆಗ್ರಹಿಸಿದ್ದಾರೆ.

ಹೊರಹಾಕಲ್ಪಟ್ಟ ವಿದ್ಯಾರ್ಥಿಗಳನ್ನು ಮನಃ ಅದೇ ಕಾಲೇಜಿಗೆ ಸೇರಿಸಿಕೊಳ್ಳಬೇಕು. ದಲಿತ ವಿದ್ಯಾರ್ಥಿ ವಿರೋಧಿ ಪ್ರಿನ್ಸಿಪಾಲರನ್ನು ಕೆಲಸದಿಂದ ವಜಾ ಮಾಡಬೇಕು, ಹಲ್ಲೆ ಮಾಡಿದ ಪ್ರಿನ್ಸಿಪಾಲ ಮತ್ತು ಅವರ ಬೆಂಬಲಿಗರ ಮೇಲೆ ಕಾನೂನು ಕ್ರಮ ಜರುಗಿಸಬೇಕು. ವಿದ್ಯಾರ್ಥಿ-ಯುವಜನ ಮುಖಂಡರ ಮೇಲೆ ಹಾಕಲಾದ ಕೇಸ್‌ಗಳನ್ನು ವಾಪಸ್ ಪಡೆಯಬೇಕು ಎಂಬಿತ್ಯಾದಿ ಬೇಡಿಕೆ ಆಧಾರದಲ್ಲಿ ಜುಲೈ 28 ರಾಜ್ಯವ್ಯಾಪಿ ಹೋರಾಟಕ್ಕೆ ಎಸ್‌ಎಫ್‌ಐ ಕರೆ ನೀಡಿದ್ದರ ಭಾಗವಾಗಿ ಹಾವೇರಿ, ರೋಣ, ಕೋಲಾರ, ಸಿಂಧಗಿ, ಹಾಸನ, ಬೆಂಗಳೂರು, ದಾವಣಗೆರೆ, ಬಳ್ಳಾರಿ, ಗಂಗಾವತಿ ಮುಂತಾದ ಕಡೆ ಸಾವಿರಾರು ವಿದ್ಯಾರ್ಥಿಗಳು ಬೀದಿಗಿಳಿದು ಪ್ರತಿಭಟಿಸಿದ್ದಾರೆ. ಅಮಾನತುಗೊಂಡ ವಿದ್ಯಾರ್ಥಿಗಳನ್ನು ವಾಪಾಸ್ ಕಾಲೇಜಿಗೆ ಸೇರಿಸಿ ಕೊಳ್ಳುವವರೆಗೂ ಹೋರಾಟ ಮುಂದುವರೆಸ ಬೇಕಾಗಿದೆ. ಅನ್ಯಾಯ, ಅಸಮಾನತೆ - ಶೋಷಣೆ, ವಂಚನೆ ಇಲ್ಲವಾಗಿಸುವ ಕನಸು ಹೊತ್ತ ಎಸ್‌ಎಫ್‌ಐ - ಡಿವೈಎಫ್‌ಐಗೆ ಇಂತಹ ಹತ್ತಾರು - ನೂರಾರು ಕೇಸುಗಳು ಬಲಿಷ್ಟ ಚಳುವಳಿ ಕಟ್ಟಲು ಹುರಿದುಂಬಿಸುತ್ತವೆ.

■ **ವಿಜಯ ಕುಮಾರ್ ದೊಡ್ಡಮನಿ**

## ........ ಕಾರ್ಮಿಕ ವರ್ಗದ ಪಾತ್ರ

**ಪುಟ 2 ರಿಂದ**

ಎದುರಿನ ವೃತ್ತದಲ್ಲಿರುವುದನ್ನು ನೋಡಬಹುದು.

1911ರಲ್ಲಿ ವೇಲ್ಸ್‌ನ ರಾಜಕುಮಾರ ಭೇಟಿ ನೀಡಿದಾಗ ಕಾರ್ಮಿಕವರ್ಗ ಎದ್ದು ನಿಂತು ಪ್ರತಿಭಟಿಸಿದ ಪರಿಯನ್ನು ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡ ಬೇಕಾಗಿದೆ. ಬಾಂಬೆಯ ಆಡಳಿತಗಾರರು ರಾಜಕುಮಾರರನ್ನು ಸ್ವಾಗತಿಸಲು ಸ್ವಾಗತ ಕಮಾನು 'ಗೇಟ್ ವೇ ಆಫ್ ಇಂಡಿಯಾ'ವನ್ನು ನಿರ್ಮಿಸಿದರು. ಆದರೆ ಕಾರ್ಮಿಕರಿಗೆ ಈ ಭೇಟಿಯ ಕುರಿತು ಯಾವ ಸಂಭ್ರಮವೂ ಇರಲಿಲ್ಲ. 1930ರಲ್ಲಿ ಸೈಮನ್ ಕಮಿಷನ್‌ನ್ನು ಬಹಿಷ್ಕರಿಸಿ ರಾಷ್ಟ್ರವ್ಯಾಪಿ ನಡೆದ ಪ್ರತಿಭಟನೆಗಳಲ್ಲೂ ಕಾರ್ಮಿಕರು ಮುಂಚೂಣಿಯಲ್ಲಿದ್ದರು.


ಜವಳಿ ಕಾರ್ಮಿಕರು ಈ ಚಳುವಳಿಗಳಲ್ಲಿ ಅತ್ಯಂತ ತೀವ್ರ ಮುಂಚೂಣಿ ಹೋರಾಟಗಾರರಾಗಿದ್ದರು. ಏಕೆಂದರೆ ಅವರೇ ಅಂದಿನ ಸಂದರ್ಭದ ಆಧುನಿಕ ಶ್ರಮಿಕ ವರ್ಗವಾಗಿದ್ದರು. 1908ರಿಂದ 1946-47ರವರೆಗಿನ ಸ್ವಾತಂತ್ರ್ಯ ಚಳುವಳಿಯಲ್ಲಿ ಕಾರ್ಮಿಕ ವರ್ಗವು ಯಾವಾಗಲೂ ಮುಂಚೂಣಿಯಲ್ಲಿತ್ತು.

ಯಾವುದೇ ಒಬ್ಬ ಇತಿಹಾಸದ ಗಂಭೀರ ವಿದ್ಯಾರ್ಥಿ ಸ್ವಾತಂತ್ರ್ಯ ಚಳುವಳಿಯಲ್ಲಿ ಕಾರ್ಮಿಕ ವರ್ಗದ ತ್ಯಾಗ ಬಲಿದಾನಗಳನ್ನು ಮತ್ತು ಚಾರಿತ್ರಿಕ ಸನ್ನಿವೇಶಕ್ಕೆ ಉಕ್ಕೊಡಗಿದ ಕಾರ್ಮಿಕ ವರ್ಗದ ಭಾವನಾತ್ಮಕ ಸ್ಪಂದನವನ್ನು ದಾಖಲಿಸದೇ ಬಿಡುವುದು ಸಾಧ್ಯವಿಲ್ಲ. ಆದರೆ ಈ ರಾಷ್ಟ್ರೀಯ ಚಳುವಳಿಯ ನಾಯಕತ್ವ ವಹಿಸಿದ ರಾಷ್ಟ್ರೀಯ ಬಂಡವಾಳಗಾರರು ಮತ್ತು ಭೂಮಾಲಿಕ ವರ್ಗಗಳು ಕಾರ್ಮಿಕ ವರ್ಗದ ನಿರೀಕ್ಷೆ ಮತ್ತು ಆಶೋತ್ತರಗಳಿಗೆ ದ್ರೋಹ ಬಗೆದರೆನ್ನುವುದು ವಿಪರ್ಯಾಸ.

ಈ ಸಂದರ್ಭದಲ್ಲಿ ಎ.ಕೆ. ಗೋಪಾಲನ್‌ರ ಉದಾಹರಣೆ ಈ ಸ್ವಾತಂತ್ರ್ಯದ ಒಂದು ಕ್ರೂರ ವ್ಯಂಗ್ಯವಾಗಿದೆ. ಭಾರತದ ಸ್ವಾತಂತ್ರ್ಯ ಸಾಧನೆಗೆ ತನ್ನದೆಲ್ಲವನ್ನೂ ತ್ಯಾಗ ಮಾಡಿದ ಈ ಮಹೋನ್ನತ ನಾಯಕ ಭಾರತ ಸ್ವಾತಂತ್ರ್ಯೋತ್ಸವದ ಸಂಭ್ರಮಾಚರಣೆಯಲ್ಲಿದ್ದಾಗ ಕಣ್ಣೂರಿನ ಜೈಲಿನಲ್ಲೇ ಬಂಧಿಯಾಗಿದ್ದರು. ಆದರೆ ಅವರು ಹತಾಶೆಗೊಳ್ಳಲಿಲ್ಲ. ಕಣ್ಣೂರಿನ ಜೈಲಿನಲ್ಲೇ ಅವರು ಹೇಗೋ ಒಂದು ರಾಷ್ಟ್ರೀಯ ಧ್ವಜವನ್ನು ಸಂಪಾದಿಸಿಕೊಂಡು ಇತರ ಖೈದಿಗಳೊಂದಿಗೆ ಸೇರಿ ಬಾವುಟವನ್ನು ಹಾರಿಸಿ ಜೈಲಿನಲ್ಲೇ ಮೆರವಣಿಗೆ, ಬಹಿರಂಗ ಸಭೆ ನಡೆಸಿ, ಹೊಸ ಆಡಳಿತಗಾರರು ತನಗೆ ಸ್ವಾತಂತ್ರ್ಯವನ್ನು ವಂಚಿಸಿದ್ದರೂ ಸಹ ಸಹಖೈದಿಗಳಿಗೆ ಸ್ವಾತಂತ್ರ್ಯದ ಕುರಿತು ತಿಳಿಸಿಕೊಟ್ಟರು.

ಕಾರ್ಮಿಕ ವರ್ಗ ತನ್ನನು ಬಂಧಿಸಿರುವ ಸಂಕೋಲೆಗಳನ್ನು ಕಡಿದೆಸೆದು ತನ್ನನ್ನು ತಾನು ವಿಮೋಚನೆಗೊಳಿಸಿಗೊಳ್ಳಬಲ್ಲದು. ಮತ್ತು ಜನತೆಗೆ ನಿಜವಾದ ಸ್ವಾತಂತ್ರ್ಯ ಪ್ರಜಾಪ್ರಭುತ್ವ ಮೌಲ್ಯಗಳನ್ನು ಖಾತ್ರಿಪಡಿಸಬಲ್ಲುದು.

ಕರ್ನಾಟಕ ರಾಜ್ಯದ ರಾಜಕಾರಣಕ್ಕೆ ಮಹತ್ವದ ತಿರುವನ್ನು ತಂದುಕೊಟ್ಟ ಐತಿಹಾಸಿಕ ಚಳುವಳಿ ನರಗುಂದ-ನವಲಗುಂದ ರೈತ ಬಂಡಾಯಕ್ಕೆ ಇಪ್ಪತ್ತೈದು ವರ್ಷಗಳು ತುಂಬಿವೆ. ಪಕ್ಷ ರಾಜಕಾರಣದ ಮಿತಿಗಳನ್ನು ಮೀರಿ ರೈತಾಪಿ ಜನತೆಯ ಐಕ್ಯ ಚಳುವಳಿಯಾಗಿ ಚಿಮ್ಮಿದ ಈ ಹೋರಾಟ ಸಾಧಿಸಿದ ಸಾಧನೆಯ ಮಹತ್ವ ಹಾಗೂ ಅದರಿಂದ ಕಲಿಯಬೇಕಾದ ಪಾಠದ ಕುರಿತು ಲೇಖನ ಇಲ್ಲಿದೆ



# ಮಲಪ್ರಭಾ ರೈತರ ಹೋರಾಟ ಜಂಟಿ ಚಳುವಳಿಯ ಯಶಸ್ವಿ ಹೋರಾಟ

ನಿತ್ಯಾನಂದಸ್ವಾಮಿ

ರೈತರು ಮುಗ್ದರು. ತಮ್ಮ ಶ್ರಮ ಮತ್ತು ತಮ್ಮ ಸಾಧನೆಗಿಂತಲೂ ಹೆಚ್ಚಾಗಿ ಅವರಿಗೆ ದೇವರ(?) ಅನುಗ್ರಹದ ಮೇಲೆ ಹೆಚ್ಚು ನಂಬಿಕೆ. ಹೀಗಾಗಿ ಅವರು ಬಂಡವಾಳಗಾರರ ಮತ್ತು ಬಂಡವಾಳಶಾಹಿ ಸರ್ಕಾರಗಳ ಸುಲಿಗೆಗೆ ಸುಲಭದ ಬಲಿ ಪಶುಗಳಾಗುತ್ತಾ ಬಂದಿದ್ದಾರೆ. ಆದರೆ ರೈತರೊಮ್ಮೆ ಎಚ್ಚೆತ್ತುಕೊಂಡರೆ, ಅವರೊಮ್ಮೆ ಸಂಘಟಿತರಾಗಿ ಬೀದಿಗಿಳಿದರೆ, ಸರ್ಕಾರಗಳು, ಸರ್ಕಾರಗಳ ನೀತಿಗೆಟ್ಟ ನೀತಿಗಳು ಹೇಗೆ ತರಗೆಲೆ ಕಸಕಡ್ಡಿಯಂತೆ ಹಾರಿ ಹೋಗುತ್ತವೆ ಎಂಬುದಕ್ಕೆ 25 ವರ್ಷಗಳ ಹಿಂದೆ ನಡೆದ ಮಲಪ್ರಭಾ ರೈತರ ಹೋರಾಟ ಒಂದು ಒಳ್ಳೆಯ ಉದಾಹರಣೆಯಾಗಿದೆ. ನ್ಯಾಯ ಕೇಳಿದ ರೈತರ ಮೇಲೆ ಗುಂಡು ಹಾರಿಸಿದ ಗುಂಡುರಾಯರ ಕಾಂಗ್ರೆಸ್ ಸರ್ಕಾರವನ್ನೇ ಅಧಿಕಾರದಿಂದ ಕಿತ್ತೆಸೆದ ಚಳುವಳಿ ಅದಾಗಿತ್ತು. "ನರಗುಂದ ನವಲಗುಂದ ರೈತ ಬಂಡಾಯ" ಎಂದೇ ಪ್ರಸಿದ್ಧವಾದ ಈ ಚಳುವಳಿಯು ರೈತರಲ್ಲಿ ಸ್ವಾಭಿಮಾನದ ಕೆಚ್ಚನ್ನು ಉಂಟುಮಾಡಿತಲ್ಲದೆ ರಾಜ್ಯದ ರಾಜಕೀಯದಲ್ಲಿ ರೈತರ ಪರವಾದ ಚಿಂತನೆಗೆ ನಾಂದಿ ಹಾಡಿತು. ಮಲಪ್ರಭಾ ಅಚ್ಚುಕಟ್ಟು ಪ್ರದೇಶದ ರೈತರ ಮೇಲೆ ಹೇರಲಾಗಿದ್ದ ಅನ್ಯಾಯದ 'ಅಭಿವೃದ್ಧಿ ಕರ'ವನ್ನು ರದ್ದುಪಡಿಸುವಲ್ಲಿ ಯಶಸ್ವಿಯಾದ ಈ ಚಳುವಳಿಯು ಒಂದು ಪಕ್ಷಾತೀತ ಜಂಟಿ ಚಳುವಳಿಯ ಯಶಸ್ವಿ ಮಾದರಿಯಾಗಿದೆ ಎಂದು ಮಲಪ್ರಭಾ ರೈತ ಚಳುವಳಿಗೆ ನೇತೃತ್ವ ನೀಡಿದ ನಾಯಕರನ್ನು ಸನ್ಮಾನಿಸಲು ಧಾರವಾಡದಲ್ಲಿ ಜುಲೈ 19ರಂದು ಏರ್ಪಡಿಸಲಾಗಿದ್ದ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ವಿವಿಧ ರೈತ ಸಂಘಗಳ ಹಾಗೂ ರಾಜಕೀಯ ಪಕ್ಷಗಳ ಮುಖಂಡರು ಅಭಿಪ್ರಾಯ ಪಟ್ಟರು.

**ಚರಿತ್ರಾರ್ಹವಾದ ಹೋರಾಟ :**

ನವಿಲುತೀರ್ಥದಲ್ಲಿ ಮಲಪ್ರಭಾ ನದಿಯನ್ನು ತಡೆದು ನಿಲ್ಲಿಸುವ ಅಣೆಕಟ್ಟನ್ನು ನಿರ್ಮಿಸಿದಾಗ ಸತತವಾಗಿ ಬರಗಾಲಕ್ಕೆ ತುತ್ತಾಗುತ್ತಿದ್ದ ಅವಿಭಜಿತ ಧಾರವಾಡ ಜಿಲ್ಲೆಯ ನರಗುಂದ, ನವಲಗುಂದ, ರೋಣ್ ತಾಲ್ಲೂಕುಗಳ ಮತ್ತು ಬೆಳಗಾಂವ ಜಿಲ್ಲೆಯ ಸವದತ್ತಿ ಮತ್ತು ರಾಮದುರ್ಗ ತಾಲ್ಲೂಕುಗಳ ರೈತರ ಮನಸ್ಸಿನಲ್ಲಿ ಹಲವು ಕನಸುಗಳು ಮೂಡಿದ್ದವು. ಆದರೆ ಯೋಜನೆ ಪೂರ್ಣಗೊಂಡು ರೈತರ ಹೊಲಗಳಿಗೆ ನೀರು ಹರಿದು ಬರುವುದರೊಳಗಾಗಿ ಸಮಸ್ಯೆಗಳ ಪ್ರವಾಹವೇ ಅವರನ್ನು ಆವರಿಸುವಂತಾಯಿತು. ಕಾಲುವೆ ಉಪಕಾಲುವೆಗಳ ನಿರ್ಮಾಣವಾಗುವ ಮೊದಲೇ ಹರಿದು ಬಂದ ನೀರು ಹಳ್ಳಗಳಲ್ಲಿ ವ್ಯರ್ಥವಾಗಿ ಹರಿದು ಹೋಗುವಂತಾಯಿತು. ಒಂದು ಕಡೆ ಕಾಲುವೆಗಳ ಕೊನೆತುದಿಯ ರೈತರ ಹೊಲಗಳಿಗೆ ನೀರು ಹರಿದುಬರಲೇ ಇಲ್ಲ. ಇನ್ನೊಂದು ಕಡೆ ಬಸಿಕಾಲುವೆಗಳ ನಿರ್ಮಾಣವಾಗದೆ ಸಾವಿರಾರು ಎಕರೆ ಕಪ್ಪುಮಣ್ಣಿನ ಭೂಮಿಯು ಜವುಳು ಸವುಳು ಆಗಿ ಹಾಳಾಯಿತು. ಇವೆಲ್ಲದರ ನಡುವೆಯೂ ರೈತರು ದುಬಾರಿ ಬೀಜ, ರಸಗೊಬ್ಬರ ಮತ್ತು ಕ್ರಿಮಿನಾಶಕಗಳಿಗಾಗಿ ಸಾಲ ಮಾಡಿ ಬೆಳೆದ ವರಲಕ್ಷ್ಮಿ ಹತ್ತಿಯ ಬೆಲೆ ಕುಸಿದು ರೈತರ ಎಲ್ಲ ಕನಸುಗಳು ನುಚ್ಚುನೂರಾದವು. ರೈತರು ತೀವ್ರ ಸಂಕಷ್ಟಕ್ಕೆ ಒಳಗಾದ ಈ ಸಮಯದಲ್ಲಿ ರಾಜ್ಯ ಸರ್ಕಾರವು ರೈತರ ನೆರವಿಗೆ ಧಾವಿಸಬೇಕಾಗಿತ್ತು. ಆದರೆ ಅದರ ಬದಲಾಗಿ, ರಾಜ್ಯ ಸರ್ಕಾರವು




ಮಲಪ್ರಭಾ ರೈತರ ಮೇಲೆ ನೀರಾವರಿ ಕರ ಏರಿಕೆಯ ಹೊರೆಯನ್ನು ಹೇರಲು ಮುಂದಾಯಿತಲ್ಲದೆ ಯೋಜನೆಯ ಖರ್ಚನ್ನು ರೈತರಿಂದ ಸಂಗ್ರಹಿಸುವ ಉದ್ದೇಶದ 'ಅಭಿವೃದ್ಧಿ ಕರ'ವನ್ನು ಆಕರಣೆ ಮಾಡಲು ಹೊರಟಿತು. ಸರ್ಕಾರದ ಈ ಕ್ರಮ ರೈತರ ಪಾಲಿಗೆ 'ಗಾಯದ ಮೇಲೆ ಬರೆ' ಎಳೆದಂತಾಯಿತು.

ರೈತರ ಹೊಲಗಳಿಗೆ ನೀರು ಬಂದದ್ದು 1976 ರಲ್ಲಿ. ಆದರೆ ನೀರಿನ ಕರವನ್ನು 1974ರಿಂದ ಪೂರ್ವಾನ್ವಯವಾಗುವಂತೆ ಹೇರಲಾಯಿತು. ನೀರಾವರಿ ಇಲಾಖೆಯ ಅಧಿಕಾರಿಗಳು ಬಲವಂತದ ವಸೂಲಿಗೆ ಮುಂದಾದರು. ಇತ್ತ ಸಾಲ ಕೊಟ್ಟ ಬ್ಯಾಂಕುಗಳು ರೈತರ ಮನೆಗಳ ಜಪ್ತಿ ಆರಂಭಿಸಿದರು. ಅತ್ತ ಸರ್ಕಾರ ಎಕರೆಗೆ ರೂ.1500ರಂತೆ ಹೇರಿದ 'ಬೆಟರ್‌ಮೆಂಟ್ ಲೆವಿ' ಸಂದಾಯ ಮಾಡುವಂತೆ ಕಂದಾಯ ಅಧಿಕಾರಿಗಳ ಒತ್ತಡ ತೀವ್ರವಾಯಿತು. ದಿಕ್ಕು ತೋಚದಂತಾದ ರೈತರು ಕೊನೆಗೆ ಹೋರಾಟದ ಹಾದಿ ಹಿಡಿದರು.

**1980 ಜುಲೈ 21 :**

ನವಲಗುಂದ ತಾಲ್ಲೂಕಿನ ಅಳಗವಾಡಿ ಗ್ರಾಮದ ಖಾಸಗಿ ಪ್ರೌಢಶಾಲೆಯೊಂದರಲ್ಲಿ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದ ಬಿ.ಎಸ್.ಸೊಪ್ಪಿನ ಗ್ರಾಮದ ರೈತರ ವಿಶ್ವಾಸಾರ್ಹ ವ್ಯಕ್ತಿ, ರೈತರ ಭವಣೆಯನ್ನು ಪ್ರತ್ಯಕ್ಷ ಕಂಡ ಅವರು ರೈತರ ಸಭೆಯೊಂದನ್ನು ಏರ್ಪಡಿಸಿದರು. ಧಾರವಾಡ ವಿಶ್ವವಿದ್ಯಾಲಯದಲ್ಲಿ ಚಿನ್ನದ ಪದಕದೊಂದಿಗೆ ಎಂ.ಎ.ಪದವಿ ಪಡೆದು, ವಿದ್ಯಾರ್ಥಿಗಳ ಹೋರಾಟಕ್ಕೆ ನೇತೃತ್ವ ನೀಡುತ್ತಾ ಸಾರ್ವಜನಿಕರ ಗಮನವನ್ನು ಸೆಳೆದಿದ್ದ ವಿ.ಎನ್.ಹಳಕಟ್ಟಿ ಅವರನ್ನು ಈ ಸಭೆಗೆ ಸೊಪ್ಪಿನ್ ಅವರು ಆಮಂತ್ರಿಸಿದ್ದರು. ಹಳಕಟ್ಟಿ ಅವರು ಸಿಪಿಐ(ಎಂ) ಪಕ್ಷದ ಒಬ್ಬ ಪ್ರಮುಖ ಕಾರ್ಯಕರ್ತರಾಗಿದ್ದು ಪಂಜಾಬ ರಾಜ್ಯದಲ್ಲಿ ಸಿಪಿಐ(ಎಂ) ಮುಖಂಡ ಹರಕಿಶನ್ ಸಿಂಗ್ ಸುರ್ಜಿತ್ ಅವರ ನೇತೃತ್ವದಲ್ಲಿ ರೈತರು 'ಬೆಟರ್‌ಮೆಂಟ್ ಲೆವಿ' ವಿರೋಧಿಸಿ ನಡೆಸಿದ ಯಶಸ್ವಿ ಹೋರಾಟದ ಅಭ್ಯಾಸ ಉಳ್ಳವರಾಗಿದ್ದರು. ಅದೇ ಮಾದರಿಯಲ್ಲಿ ಮಲಪ್ರಭಾ ರೈತರ ಚಳುವಳಿಯೊಂದನ್ನು ಕಟ್ಟಿ ಯಶಸ್ವಿಗೊಳಿಸ ಬಹುದೆಂದು ಅವರು ತಮ್ಮ ಸಲಹೆಗಳನ್ನು ರೈತರ ಮುಂದಿಟ್ಟರು. ಹೀಗೆ ಬಿತ್ತಲಾದ ಹೋರಾಟದ ಬೀಜವು ಮೊಳಕೆಯೊಡೆದು, ಬೆಳೆಯುತ್ತಾ ಹೆಮ್ಮರವಾಗಿ ನವಲಗುಂದ, ನರಗುಂದ ಮತ್ತು ಸವದತ್ತಿ ತಾಲ್ಲೂಕುಗಳ ರೈತರನ್ನು ಮಲಪ್ರಭಾ ನೀರಾವರಿ ಪ್ರದೇಶ ರೈತ ಸಮನ್ವಯ ಸಮಿತಿಯ ಅಡಿಯಲ್ಲಿ ತರುವಲ್ಲಿ ಯಶಸ್ವಿಯಾಯಿತು.

ಇದೊಂದು ಪಕ್ಷಾತೀತ, ಜಾತ್ಯಾತೀತ ಹೋರಾಟ ಸಮಿತಿಯಾಗಿತ್ತು. ಸಮಿತಿಯ 7 ಜನ ಸಂಚಾಲಕರಲ್ಲಿ ವಿ.ಎನ್.ಹಳಕಟ್ಟಿ ಮತ್ತು ಸವದತ್ತಿಯ ಎಸ್.ಹೆಚ್.ಕಪ್ಪಣ್ಣವರ ಸಿಪಿಐ(ಎಂ)ಗೆ ಸೇರಿದವರಾಗಿದ್ದರೆ, ನರಗುಂದದ ಬಿ.ಆರ್.ಯಾವಗಲ್ ಮತ್ತು ಅಳಗವಾಡಿಯ ಬಿ.ಬಿ.ಗಾಣಗೇರ ಕಾಂಗ್ರೆಸ್ ಪಕ್ಷದವರಾಗಿದ್ದರು. ನರಗುಂದದ ರಾಜಶೇಖರ ಹೊಸಕೇರಿ ಮತ್ತು ಎಸ್.ಎಂ.ಬಾಳಿಕಾಯಿ ಹಾಗೂ ನವಲಗುಂದದ ಶಿವದೇವಗೌಡ ಪಾಟೀಲ್ ಜನತಾ ಪಾರ್ಟಿಗೆ ಸೇರಿದವರಾಗಿದ್ದರು. ಪಕ್ಷ ರಾಜಕೀಯವನ್ನು ರೈತರ ಚಳುವಳಿ ಸಂಘಟನೆಯೊಳಗೆ ತರದಿರಲು ಇವರು ಕೈಗೊಂಡ ನಿರ್ಧಾರವನ್ನು ಕೊನೆಯವರೆಗೂ ಪಾಲಿಸಿಕೊಂಡು ಬಂದರು.



1981 ರಲ್ಲಿ ಸವದತ್ತಿಯಲ್ಲಿ ನಡೆದ ಪ್ರಥಮ ರೈತ ಹುತಾತ್ಮ ದಿನಾಚರಣೆಯಲ್ಲಿ ಹೋರಾಟಗಾರರಾದ ಎಸ್.ಎಚ್.ಕಪ್ಪಣ್ಣವರ ಮಾತನಾಡಿದ ಚಿತ್ರ. ನರಗುಂದ ಬಂಡಾಯದ ಮುಖಂಡರಾದ ಶಿವಪ್ಪ ಬಾಳಿಕಾಯಿ, ಬಿ.ಆರ್.ಯಾವಗಲ್, ಶಿವದೇವಗೌಡ ಪಾಟೀಲ ಚಿತ್ರದಲ್ಲಿದ್ದಾರೆ.

ಮೂರೂ ತಾಲೂಕುಗಳ ಹಳ್ಳಿಹಳ್ಳಿಗಳಲ್ಲಿ ರೈತರ ಸಭೆಗಳನ್ನು ನಡೆಸಲಾಯಿತು. ಮಲಪ್ರಭಾ ಅಚ್ಚುಕಟ್ಟು ಪ್ರದೇಶದ ರೈತರ ಪ್ರಮುಖ ಬೇಡಿಕೆಗಳನ್ನು ಪಟ್ಟಿ ಮಾಡಿ ಪ್ರಚಾರ ಮಾಡಲಾಯಿತು. ಸರ್ಕಾರಕ್ಕೆ ಮನವಿಗಳನ್ನು ಸಲ್ಲಿಸಲಾಯಿತು. ಮೂರೂ ತಾಲ್ಲೂಕಾ ಕೇಂದ್ರಗಳಲ್ಲಿ ರೈತರ ಸರದಿ ಉಪವಾಸ ಸತ್ಯಾಗ್ರಹವನ್ನು ನಡೆಸಲಾಯಿತು. ಚಳುವಳಿ ತಿಂಗಳುಗಟ್ಟಲೆ ನಡೆದರೂ ಗುಂಡುರಾವ್ ಸರ್ಕಾರ ತಿರುಗಿ ನೋಡಲಿಲ್ಲ. ಅಂತಿಮವಾಗಿ 1980 ಜುಲೈ 21ರಂದು ಮೂರೂ ತಾಲ್ಲೂಕುಗಳಲ್ಲಿ ಬಂದ್ ಆಚರಿಸಲು ನಿರ್ಧರಿಸಲಾಯಿತು.

ಸವದತ್ತಿಯಲ್ಲಿ ಬಂದ್ ಶಾಂತಿಯುತವಾಗಿ ಯಶಸ್ವಿಯಾಗಿ ನಡೆಯಿತು. ಸಾವಿರಾರು ರೈತರು ಭಾಗವಹಿಸಿದ್ದ ಬೃಹತ್ ಮೆರವಣಿಗೆಯ ಸಮಯದಲ್ಲಿ ಕಿಡಿಗೇಡಿಗಳು ನಡೆಸಿದ ಕಲ್ಲು ತೂರಾಟವನ್ನು ನಿಯಂತ್ರಿಸಲು ಪೊಲೀಸರು ನಡೆಸಿದ ಲಘು ಲಾಠಿ ಪ್ರಹಾರವನ್ನು ಬಿಟ್ಟರೆ ಬೇರೆ ಯಾವ ಅಹಿತಕರ ಘಟನೆಗಳು ಸವದತ್ತಿಯಲ್ಲಿ ಜರುಗಲಿಲ್ಲ -ತಾಲ್ಲೂಕ ತಹಶಿಲ್ದಾರರು ಕಛೇರಿಯನ್ನು ಬಂದ್ ಮಾಡಿ ರೈತರೊಂದಿಗೆ ಮೆರವಣಿಗೆಯಲ್ಲಿ ನಡೆದುಬಂದರು.


ಆದರೆ ನರಗುಂದದಲ್ಲಿ ಹಾಗೆ ಆಗಲಿಲ್ಲ. ನರಗುಂದದ ಬೀದಿಗಳಲ್ಲಿ ರೈತರು ನೀರಿನಂತೆ ನಿಂತಿದ್ದರು. ತಾಲ್ಲೂಕು ಕಛೇರಿಯನ್ನು ಮುಚ್ಚಲು ಆಗ್ರಹಿಸುತ್ತಿದ್ದ ರೈತರು ತಹಶೀಲ್ದಾರರು ಕಛೇರಿ ಒಳಗೆ ಹೋಗುವುದನ್ನು ತಡೆಯಲು ರಸ್ತೆಯಲ್ಲೇ ಮಲಗಿದರು. ತಹಶೀಲ್ದಾರ ರೈತರನ್ನು ತನ್ನ ಬೂಟುಗಾಲಿನಿಂದ ತುಳಿದೇ ಒಳಗೆ ಹೋಗಲು ಯತ್ನಿಸಿದನು. ಆಗ ರೈತರು ಸಹನೆ ಕಳೆದುಕೊಳ್ಳುವ ಪರಿಸ್ಥಿತಿ ಉಂಟಾಯಿತು. ಅಷ್ಟರಲ್ಲಿ ಒಬ್ಬ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ರೈತರನ್ನು ಹೆದರಿಸಿ ಚದುರಿಸಲು ತನ್ನ ರಿವಾಲ್ವರ್‌ನಿಂದ ಗುಂಡು ಹಾರಿಸಿದನು. ಗುಂಡು ಚಿಕ್ಕನರಗುಂದ ಗ್ರಾಮದ ಯುವರೈತ ಈರಪ್ಪ ಬಸಪ್ಪ ಕಡ್ಲಿಕೊಪ್ಪ ಎಂಬವರನ್ನು ಬಲಿತೆಗೆದುಕೊಂಡಿತು. ಜನಜಂಗುಳಿ ಪೊಲೀಸ್ ಸಬ್ ಇನ್ಸ್‌ಪೆಕ್ಟರನ್ನು ಬೆನ್ನುಹತ್ತಿತು. ಒಂದು ಖಾಸಗಿ ಆಸ್ಪತ್ರೆಯ ಬೆಂಚಿನ ಕೆಳಗೆ ಅವಿತುಕೊಂಡಿದ್ದ ಆತನನ್ನು ಹೊರಗೆ ಎಳೆತಂದು ಕಲ್ಲಿನಿಂದ ಜಜ್ಜಿ ಸಾಯಿಸಲಾಯಿತು. ಅದರಂತೆ ಇನ್ನೊಬ್ಬ ಪೊಲೀಸ್ ಪೇದೆ ಆಹುತಿಯಾದನು. ಮೂರನೆಯ ಪೊಲೀಸ್ ಪೇದೆಯೊಬ್ಬನು ಜನಜಂಗುಳಿಯಿಂದ ತಪ್ಪಿಸಿಕೊಂಡು ಓಡುತ್ತಿರುವಾಗ ಆಳವಾದ ಬಾವಿಯಲ್ಲಿ ಬಿದ್ದುಸತ್ತನು. ತಹಶಿಲ್ದಾರರೂ ತೀವ್ರವಾಗಿ ಗಾಯಗೊಂಡರು. ಕಿಡಿಗೇಡಿಗಳು ಪರಿಸ್ಥಿತಿಯ ದುರ್ಲಾಭ ಪಡೆದರು. ಪೊಲೀಸ್ ವಾಹನಗಳು ಬೆಂಕಿಗೆ ಆಹುತಿಯಾದವು. ಕಛೇರಿ ಕಡತಗಳಿಗೆ ಮತ್ತು ಕಛೇರಿಯಲ್ಲಿ ಇಡಲಾಗಿದ್ದ ಜಪ್ತಿ ಮಾಡಲಾದ ಸರಾಯಿ ಬ್ಯಾರೆಲ್‌ಗಳಿಗೆ ಬೆಂಕಿ ಹಚ್ಚಲಾಯಿತು.

ನರಗುಂದದ ಘಟನೆಗಳ ಸುದ್ದಿ ಹರಡಿದಂತೆ, ನವಲಗುಂದದಲ್ಲಿ ಅದುವರೆಗೆ ಶಾಂತಯುತವಾಗಿದ್ದ ಪ್ರತಿಭಟನಾಕಾರರು ಉದ್ರಿಕ್ತರಾದರು. ಕಲ್ಲು ತೂರಾಟದಲ್ಲಿ ತೊಡಗಿದ್ದವರನ್ನು ಚದುರಿಸಲು ಪೊಲೀಸರು ಗುಂಡು ಹಾರಿಸಿದಾಗ, ಗುಂಡು ತಗಲಿದ ಅಳಗವಾಡಿ ಗ್ರಾಮದ ಇನ್ನೊಬ್ಬ ಯುವರೈತ ಬಸಪ್ಪ ಶಿವಪ್ಪ ಲಕ್ಕುಂಡಿ ಸ್ಥಳದಲ್ಲೇ ಮೃತಪಟ್ಟನು. ಅಷ್ಟರಲ್ಲಿ ಧಾರವಾಡದಿಂದ ಧಾವಿಸಿ ಬಂದ ಹೆಚ್ಚುವರಿ ಪೊಲೀಸ್ ಪಡೆಗಳು ಲಾಠಿ ಪ್ರಹಾರ ಮಾಡಿ ರೈತರನ್ನು ಚದುರಿಸಿದವು.

ರೈತರ ಮೇಲೆ ಗುಂಡುಹಾರಿಸಿದ ಈ ಪ್ರಕರಣಕ್ಕೆ ರಾಜ್ಯಾದ್ಯಂತ ತೀವ್ರ ಪ್ರತಿಭಟನೆ ವ್ಯಕ್ತವಾಯಿತು.

ಪುಟ 10 ಕ್ಕೆ

ಜುಲೈ 19, 2005 ರಲ್ಲಿ ನಡೆದ ವಿಚಾರಣ ಸಂಕಿರಣದಲ್ಲಿ ಜಿ.ಎನ್.ನಾಗರಾಜ್, ಮಾರುತಿ ಮಾನ್ಪಡೆ, ಬಾಬುಗೌಡ ಪಾಟೀಲ, ಬಸವರಾಜ ತಂಬಾಕೆ, ಎಂ.ಗೋಪಾಲ, ನಿತ್ಯಾನಂದಸ್ವಾಮಿ ಮತ್ತಿತರರು



# ಖಾಸಗೀಕೃತ ಪಿಂಚಣಿ ಯೋಜನೆ ವಿರುದ್ಧ ಹೋರಾಟ ಅನಿವಾರ್ಯ

**- ಕೆ.ಆರ್.ಹೆಗ್ಡೆ**

ಕೇಂದ್ರ ಸರ್ಕಾರವು ಹೊಸದಾಗಿ ಅನುಷ್ಠಾನಗೊಳಿಸುತ್ತಿರುವ ಖಾಸಗೀಕೃತ ಪಿಂಚಣಿ ಯೋಜನೆಯು ಸಂಪೂರ್ಣವಾಗಿ ನೌಕರ ವಿರೋಧಿಯಾಗಿದ್ದು, ಸರಕಾರಿ ಸೇವೆಯಲ್ಲಿ ಹೊಸದಾಗಿ ನೇಮಕಗೊಂಡವರನ್ನು ಮಾತ್ರ ಬಾಧಿಸುತ್ತಿಲ್ಲ. ಬದಲಾಗಿ ಅದು ಈಗಾಗಲೇ ಸೇವೆಯಲ್ಲಿರುವ ನೌಕರರು ಮತ್ತು ಪಿಂಚಣಿದಾರರನ್ನು ತೀವ್ರವಾಗಿ ಬಾಧಿಸುತ್ತದೆ. ಈ ಯೋಜನೆಯನ್ನು ಹೊಸದಾಗಿ ಕೆಲಸಕ್ಕೆ ಸೇರಿದ ನೌಕರರಿಗೆ ಮಾತ್ರ ಅನ್ವಯಿಸಲಾಗುವುದು ಎಂದು ಸರಕಾರವು ಹೇಳುತ್ತಿದ್ದರೂ, ಪಿಂಚಣಿಯನ್ನು ಖಾಸಗೀಕರಣಗೊಳಿಸುವ ಹೆಸರಿನಲ್ಲಿ ನೌಕರರ ಮತ್ತು ಶಿಕ್ಷಕರ ಪಿಂಚಣಿ ಸವಲತ್ತುಗಳನ್ನು ಸಂಪೂರ್ಣವಾಗಿ ತಡೆಹಿಡಿಯಲು ಸರಕಾರವು ಪ್ರಯತ್ನಿಸುತ್ತಿದೆ. ಈಗ ಸೇವೆ ಸಲ್ಲಿಸುತ್ತಿರುವ ನೌಕರರ ಮತ್ತು ಪಿಂಚಣಿದಾರರ ಪಿಂಚಣಿಯನ್ನು ತಡೆಹಿಡಿಯುವುದು ಅಥವಾ ತೀವ್ರವಾಗಿ ಕಡಿತಗೊಳಿಸುವುದು ಈ ಮಸೂದೆಯ ಮೂಲ ಉದ್ದೇಶವಾಗಿದೆ. ಈ ಹೊಸ ಪಿಂಚಣಿ ಯೋಜನೆ ಪ್ರಕಾರ ನೌಕರರು ತಮ್ಮ ವೇತನ ಮತ್ತು ತುಟ್ಟಿಭತ್ಯೆಯ ಶೇಕಡಾ 10ರಷ್ಟು ಮೊತ್ತವನ್ನು ಪ್ರತಿ ತಿಂಗಳು ಪಿಂಚಣಿ ನಿಧಿಗೆ ಪಾವತಿಸಬೇಕಾಗಿದೆ.

ಈಗ ಚಾಲ್ತಿಯಲ್ಲಿರುವ ಪಿಂಚಣಿ ವ್ಯವಸ್ಥೆಯು ನೌಕರರಿಗೆ ಉತ್ತಮವಾದ ಸಾಮಾಜಿಕ ಭದ್ರತೆಯನ್ನು ನೀಡುತ್ತಿದೆ. ಆದರೆ ಈ ಪಿಂಚಣಿ ವ್ಯವಸ್ಥೆಯ ವಿರುದ್ಧ ರಾಷ್ಟ್ರೀಯ ಪತ್ರಿಕೆಗಳು ಅಗ್ರ ಲೇಖನಗಳನ್ನು ಬರೆಯುತ್ತಿವೆ. ಅಲ್ಲದೆ ನೌಕರರ ಪಿಂಚಣಿಯ ಹೊರೆಯನ್ನು ನಿರ್ವಹಿಸಲು ಸರಕಾರಕ್ಕೆ ಸಾಧ್ಯವಿಲ್ಲವೆಂದು ಸರಕಾರದ ವಕ್ತಾರರು ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದಾರೆ.

ಹೊಸ ಪಿಂಚಣಿ ಯೋಜನೆಗೆ ಸಂಬಂಧಿಸಿದಂತೆ ಭಟ್ಟಾಚಾರ್ಯ ಸಮಿತಿ ನೀಡಿರುವ ವರದಿ ಪಿಂಚಣಿದಾರರಿಗೆ ಭಾರೀ ಆಘಾತವನ್ನುಂಟು ಮಾಡಿದೆ. ಈ ವರದಿಯ



ವಿರುದ್ಧ ಪಿಂಚಣಿದಾರರ ಸಂಘಟನೆಗಳಿಂದ ರಾಷ್ಟ್ರವ್ಯಾಪಿ ಪ್ರತಿಭಟನೆಗಳು ನಡೆದಿವೆ.

ಖಾಸಗೀಕೃತ ಪಿಂಚಣಿ ಯೋಜನೆಯು ಜಾಗತೀಕರಣದ ದುಷ್ಪರಿಣಾಮಗಳಲ್ಲಿ ಒಂದಾಗಿದೆ. ಇದು ವಿಶ್ವಬ್ಯಾಂಕ್ ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಯ ಮೂಲಕ ಬಂದಿರುವ ದೊಡ್ಡ ಧಾಳಿಯಾಗಿರುತ್ತದೆ. ಈ ಯೋಜನೆಯನ್ನು ವಿಶ್ವದ ಹಲವು ಭಾಗಗಳಲ್ಲಿ ಜಾರಿಗೊಳಿಸಲಾಗಿದ್ದು, ಬ್ರಿಟನ್, ಫ್ರಾನ್ಸ್, ಅಮೇರಿಕಾ ಸೇರಿದಂತೆ ಐರೋಪ್ಯ ದೇಶಗಳಲ್ಲಿ ನೌಕರರು ಮತ್ತು ಕಾರ್ಮಿಕರ ಮೇಲೆ ಆಗುತ್ತಿರುವ ಧಾಳಿಯ ವಿರುದ್ಧ ತೀವ್ರವಾದ ಸಂಘಟಿತ ಪ್ರತಿಭಟನೆಗಳನ್ನು ನಡೆಸಲಾಗಿದೆ. ಭಾರತ ಸರಕಾರ ಮತ್ತು ಏಳು ರಾಜ್ಯ ಸರಕಾರಗಳು ಖಾಸಗೀಕೃತ ಪಿಂಚಣಿ ಯೋಜನೆಯನ್ನು ಜಾರಿಗೊಳಿಸಲು ಈಗಾಗಲೇ ತೀರ್ಮಾನಿಸಿರುತ್ತವೆ.

ಈ ಹಿನ್ನೆಲೆಯಲ್ಲಿ ಈಗ ಸಂಸತ್ತಿನ ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಬಾಕಿ ಇರುವ ನೌಕರ ವಿರೋಧಿ ಪಿಂಚಣಿ ನಿಧಿ ನಿರ್ವಹಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ (ಪಿ.ಎಸ್.ಆರ್.ಡಿ.ಎ) ಮಸೂದೆಯನ್ನು ಸರ್ಕಾರವು ಕಾಯಿದೆಯಾಗಿ ಅಂಗೀಕಾರ ಮಾಡದಂತೆ ತಡೆಯಲು ನೌಕರವರ್ಗ ರಾಷ್ಟ್ರವ್ಯಾಪಿಯಾಗಿ ಪ್ರಬಲವಾದ ಐಕ್ಯ ಹೋರಾಟವನ್ನು ನಡೆಸಲು ಮುಂದಾಗಿದೆ. ಖಾಸಗೀಕೃತ ಪಿಂಚಣಿ ಯೋಜನೆ ಮತ್ತಿತರ ನೌಕರ ವಿರೋಧಿ, ಕಾರ್ಮಿಕ ವಿರೋಧಿ ನೀತಿಗಳನ್ನು ಪ್ರತಿಭಟಿಸಲು, ಜುಲೈ 8 ರಂದು ದೆಹಲಿಯಲ್ಲಿ ಕೇಂದ್ರ ಮತ್ತು ರಾಜ್ಯ ಸರಕಾರಿ ನೌಕರರು ಮತ್ತು ಶಿಕ್ಷಕರ ಸಂಘಟನೆಗಳು ಜಂಟಿ ಸಮಾವೇಶವನ್ನು ನಡೆಸಿ, ಸೆಪ್ಟೆಂಬರ್ 29ರಂದು ಅಖಿಲಭಾರತ ಮುಷ್ಕರಕ್ಕೆ ಕರೆ ನೀಡಿವೆ.

ಖಾಸಗೀಕೃತ ಪಿಂಚಣಿ ಯೋಜನೆಯ ಮಸೂದೆಯನ್ನು ಸಂಸತ್ತಿನಲ್ಲಿ ವಿರೋಧಿಸಲು ಎಲ್ಲಾ ಎಡಪಕ್ಷಗಳು ತೀರ್ಮಾನಿಸಿವೆ. ಈ ಮಸೂದೆಯನ್ನು ಯಥಾಸ್ಥಿತಿಯಲ್ಲಿ ಹಿಂದಕ್ಕೆ ಪಡೆಯುವಂತೆ ಎಡಪಕ್ಷಗಳು ಪ್ರಧಾನ ಮಂತ್ರಿಗಳಿಗೆ ಈಗಾಗಲೇ ಪತ್ರ ಬರೆದಿರುತ್ತವೆ. ಅಲ್ಲದೆ ಅಖಿಲ ಭಾರತ ರಾಜ್ಯ ಸರಕಾರಿ ನೌಕರರ ಒಕ್ಕೂಟವು ಕೇಂದ್ರ ಸರಕಾರದ ಆರ್ಥಿಕ ಸ್ಥಾಯಿ ಸಮಿತಿ ಅಧ್ಯಕ್ಷರಿಗೆ ಸುದೀರ್ಘವಾದ ಪತ್ರವನ್ನು ಬರೆದು ಖಾಸಗೀಕೃತ ಪಿಂಚಣಿ ಯೋಜನೆಯ ಅಪಾಯಕಾರಿ ಪರಿಣಾಮಗಳ ಬಗ್ಗೆ ವಿವರಿಸಿದೆ.

ಈ ಖಾಸಗೀಕೃತ ಪಿಂಚಣಿ ಯೋಜನೆಯು ಸರಕಾರಿ ನೌಕರರಿಗೆ ಮಾತ್ರವಲ್ಲದೇ ಇತರೆ ವಲಯಗಳ ನೌಕರರು, ಕಾರ್ಮಿಕರು ಮತ್ತು ಪಿಂಚಣಿದಾರರಿಗೂ ಬಾಧಕವಾಗುವುದರಲ್ಲಿ ಸಂಶಯವಿಲ್ಲ. ಆದ್ದರಿಂದ ಖಾಸಗೀಕೃತ ಪಿಂಚಣಿ ಯೋಜನೆಯ ಅಪಾಯಗಳನ್ನು ಗಂಭೀರವಾಗಿ ಪರಿಗಣಿಸಿ ಸರಕಾರಿ ನೌಕರರು, ಶಿಕ್ಷಕರು, ಕಾರ್ಮಿಕರು ಮತ್ತು ಪಿಂಚಣಿದಾರರು, ತಮ್ಮ ಪಿಂಚಣಿ ಸವಲತ್ತುಗಳನ್ನು ಉಳಿಸಿಕೊಳ್ಳಲು ಸಂಘಟಿತ ಐಕ್ಯಹೋರಾಟವನ್ನು ನಡೆಸುವುದು ಅನಿವಾರ್ಯವಾಗಿದೆ.

## ಜಪ್ಪಿನ ಮೊಗರುನಲ್ಲಿ ಡಿ.ವೈ.ಎಫ್.ಐ. ಸದಸ್ಯತ್ವ ಅಭಿಯಾನ

ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ್, ಡಿವೈಎಫ್ಐನ ಸದಸ್ಯತ್ವದ ಅಭಿಯಾನ ಜಿಲ್ಲೆಯಾದ್ಯಂತ ನಡೆಯುತ್ತಿದ್ದು, ಜಪ್ಪಿನ ಮೊಗರು ಪ್ರದೇಶವೊಂದರಲ್ಲಿ ಮನೆ, ಮನೆಗೆ ತೆರಳಿ ಒಂದೇ ದಿನದಲ್ಲಿ 1108 ಸದಸ್ಯರನ್ನು ನೊಂದಾಯಿಸಲಾಯಿತು.

14 ರಿಂದ 40 ವರ್ಷದೊಳಗಿನ ಯುವಕ, ಯುವತಿಯರನ್ನು ಸದಸ್ಯರನ್ನಾಗಿಸುವ ಮೂಲಕ, ಅವರನ್ನು ಸಂಘಟಿಸಿ ಜನಪರ ನೀತಿಗಳಿಗಾಗಿ ಅವರನ್ನು ಅಣಿನೆರೆಸುವ ಹಾಗೂ ಯುವಜನರ ಹಾಗೂ ಜನ ಸಾಮಾನ್ಯರ ಸಮಸ್ಯೆಗಳಿಗೆ ನಿರಂತರವಾಗಿ ಸ್ಪಂದಿಸುವ ಏಕೈಕ ಯುವಜನ ಸಂಘಟನೆಯಾಗಿರುತ್ತದೆ. ಜಪ್ಪಿನ ಮೊಗರುವಿನಲ್ಲಿ ಸತತ 5 ವರ್ಷಗಳಿಂದ ಒಂದು ದಿನದಲ್ಲಿ ಸಾವಿರಕ್ಕೂ ಮಿಕ್ಕಿ ಸದಸ್ಯರನ್ನು ನೊಂದಾಯಿಸಲಾಗುತ್ತಿದೆ.

ಸದಸ್ಯತ್ವ ಅಭಿಯಾನದ ನೇತೃತ್ವವನ್ನು ಡಿವೈಎಫ್ಐ ನಗರ ಸಮಿತಿ ಕಾರ್ಯದರ್ಶಿ ವಾಸುದೇವ ಜೆ.ಪಿ., ಘಟಕ ನಾಯಕರುಗಳಾದ ಯೋಗೀಶ್ ಕೆ., ಮನೋಜ್ ಶೆಟ್ಟಿ, ಉದಯಚಂದ್ರ ರೈ, ಹನೀಫ್, ಮನೋಜ್ ಪಿ., ಸಂತೋಷ್ ಆಚಾರ್ಯ, ರಾಜೀವ ಶೆಟ್ಟಿ, ದಿನಕರ ಮುಂತಾದವರು ವಹಿಸಿದ್ದರು.

**ದಿನೇಶ್ ಶೆಟ್ಟಿ**

# ಮಲಪ್ರಭಾ ರೈತರ ಹೋರಾಟ...............

ಪುಟ 9 ರಿಂದ

ಚಳುವಳಿಯನ್ನು ಹತ್ತಿಕ್ಕಲು ಹಲವೆಡೆ ಪೊಲೀಸರು ಗೋಲಿಬಾರ್ ನಡೆಸಿದರು. ನಿಪ್ಪಾಣಿಯಲ್ಲಿ ಚಳುವಳಿ ನಡೆಸುತ್ತಿದ್ದ ತಂಬಾಕು ಬೆಳೆಗಾರರ ಮೇಲೆ ನಡೆದ ಗೋಲಿಬಾರ್‌ನಲ್ಲಿ ರೈತರು ಸತ್ತರು. ಬಾಗೇಪಲ್ಲಿಯಲ್ಲಿ ಸಿಪಿಐ(ಎಂ) ಶಾಸಕ ಅಪ್ಪಸ್ವಾಮಿರೆಡ್ಡಿ ಅವರ ನೇತೃತ್ವದಲ್ಲಿ ನಡೆದ ಚಳುವಳಿಯ ಸಂದರ್ಭದಲ್ಲಿ ಪೊಲೀಸರು ಗುಂಡು ಹಾರಿಸಿದಾಗ ಆದಿನಾರಾಯಣರೆಡ್ಡಿ ಮತ್ತು ದದ್ದಿವಪ್ಪ ಹತರಾದರು. ಮತ್ತು ಅನೇಕ ಜನ ಗಾಯಗೊಂಡರು. ಈ ಅವಧಿಯಲ್ಲಿ ವಿವಿದೆಡೆ ನಡೆದ ಗೋಲಿಬಾರ್‌ನಲ್ಲಿ 100ಕ್ಕೂ ಹೆಚ್ಚು ಜನ ಪ್ರಾಣ ಕಳೆದುಕೊಂಡರು. ಹೀಗೆ "ಎಲ್ಲೆಲ್ಲಿ ಗುಂಡುರಾವ್, ಅಲ್ಲಲ್ಲಿ ಗೋಲಿಬಾರ್" ಎಂಬುದು ಮನೆ ಮಾತಾಗುವಂತಾಯಿತು.

**ರಾಜಧಾನಿಗೆ ರೈತರ ಲಗ್ಗೆ:**

ನರಗುಂದ, ನವಲಗುಂದ ಘಟನೆಯಲ್ಲಿ 68 ಜನ ರೈತ ಧುರೀಣರನ್ನು ಬಂಧಿಸಿ ಜೈಲಿನಲ್ಲಿ ಇಡಲಾಗಿತ್ತು. ಚಳುವಳಿಯ ಪ್ರಮುಖ ನಾಯಕರು ಕೆಲಕಾಲ ಭೂಗತರಾಗಿದ್ದು ಅನಂತರ ನ್ಯಾಯಾಲಯಕ್ಕೆ ಶರಣಾಗತರಾದರು. ಅವರಲ್ಲಿ ಪ್ರಮುಖರಿಗೆ ಗಲ್ಲುಶಿಕ್ಷೆಯಾಗಬಹುದು ಎಂಬ ಆತಂಕ ರೈತರಲ್ಲಿ ಮತ್ತೆ ಹೋರಾಟದ ಕಿಚ್ಚನ್ನು ಹೊತ್ತಿಸಿತು.

ರೈತರ ಈ ಚಳುವಳಿ ರಾಜ್ಯದ ರಾಜಕೀಯದ ಮೇಲೆ ಭಾರಿ ಪರಿಣಾಮ ಬೀರುವಂತಾಯಿತು. ರೈತರಿಗೆ ನ್ಯಾಯ ಒದಗಿಸಲು ವಿರೋಧ ಪಕ್ಷಗಳು ಮುಂದಾಗಿ ಬಂದವು. ಸಿಪಿಐ(ಎಂ), ಸಿಪಿಐ, ಲೋಕದಳ ಮತ್ತು ಅರಸು ಕಾಂಗ್ರೆಸ್ ಪಕ್ಷಗಳು ಒಂದಾಗಿ ಪ್ರಗತಿಪರ ಜನತಂತ್ರ ರಂಗವನ್ನು ಹುಟ್ಟುಹಾಕಿದವು. ಮಲಪ್ರಭಾ ರೈತ ನಾಯಕರ ಮೇಲೆ ಹೂಡಲಾದ ಕೇಸುಗಳನ್ನು ವಾಪಸ್ ತೆಗೆದುಕೊಳ್ಳಬೇಕು ಎಂಬ ಬೇಡಿಕೆಯೂ ಸೇರಿದಂತೆ ರೈತರ ಎಲ್ಲ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ನರಗುಂದದಿಂದ ರೈತ ಹುತಾತ್ಮರ ಜ್ಯೋತಿಯೊಂದಿಗೆ ಬೃಹತ್ ಪಾದಯಾತ್ರೆಯನ್ನು ಸಂಘಟಿಸಲಾಯಿತು. ದೇವರಾಜ್ ಅರಸ್ ಜಾಥಾವನ್ನು ನರಗುಂದದಲ್ಲಿ ಉದ್ಘಾಟಿಸಿದರು. ದಾರಿಯುದ್ದಕ್ಕೂ ಅಮೋಘವಾದ ಸ್ವಾಗತವನ್ನು ಪಡೆಯುತ್ತಾ ಜಾಥಾ ಬೆಂಗಳೂರನ್ನು ತಲುಪಿದಾಗ ಅದೊಂದು ಮಹಾ ಸಾಗರವಾಗಿತ್ತು. ಬೆಂಗಳೂರಿನ ಕಾರ್ಮಿಕ ವರ್ಗ ರೈತರೊಂದಿಗೆ ತಮ್ಮ ವರ್ಗ ಸಖ್ಯತೆಯನ್ನು ಮೆರೆಯಲು ಸಕಲ ಸಿದ್ಧತೆಗಳನ್ನು ಮಾಡಿಕೊಂಡಿತ್ತು. ನಗರದ ಜನತೆ ಮಹಿಳೆಯರು ಮಕ್ಕಳು ಹೂವಿನ ಸುರಿಮಳೆಗೈಯುತ್ತಾ, ಎಳನೀರು, ಹಣ್ಣುಹಂಪಲು, ಆಹಾರದ ಪೊಟ್ಟಣಗಳನ್ನು ನೀಡುತ್ತಾ, ಅನ್ನದಾತ ರೈತರನ್ನು ಸ್ವಾಗತಿಸಿದರು. ಕಬ್ಬನ್ ಪಾರ್ಕ್‌ನಲ್ಲಿ ಬಾರೀ ಬಹಿರಂಗ ಸಭೆ ನಡೆಯಿತು. ಗುಂಡುರಾವ್ ಸರ್ಕಾರಕ್ಕೆ ಅಂತಿಮ ಎಚ್ಚರಿಕೆ ನೀಡಲಾಯಿತು. ಆದರೆ ಮುಖ್ಯಮಂತ್ರಿ ಗುಂಡೂರಾವ್ ಈ ಭಾರಿ ಪ್ರದರ್ಶನವನ್ನು "ಬಾಡಿಗೆ ರೈತರು" ಎಂದು ಬೇಜವಾಬ್ದಾರಿ ಹೇಳಿಕೆ ನೀಡಿದರು. ಆಕ್ರೋಶಗೊಂಡ ರೈತರು ಮಾರನೇ ದಿನ ತಮ್ಮ ತಮ್ಮ ಊರುಗಳಿಗೆ ಮರಳುವ ಬದಲು ವಿಧಾನಸೌಧಕ್ಕೆ ನುಗ್ಗಿ ಪ್ರತಿಭಟಿಸಿದರು.

ರೈತರ ಪ್ರತಿಭಟನೆಗೆ ಕೊನೆಗೂ ಗುಂಡೂರಾವ್ ಸರ್ಕಾರ ಮಣಿಯಬೇಕಾಯಿತು. ಅಭಿವೃದ್ಧಿಕರ ರದ್ದಾಯಿತು. ರೈತರಿಗೆ 85 ಕೋಟಿ ರೂ.ಗಳ ಮಧ್ಯಂತರ ಪರಿಹಾರ ಘೋಷಣೆಯಾಯಿತು. ಮುಂದೆ 1983ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಗುಂಡೂರಾವ್ ಸರ್ಕಾರವನ್ನು ಕಿತ್ತೆಸೆಯಲಾಯಿತು.

**ರೈತ ನಾಯಕರಿಗೆ ಸನ್ಮಾನ :**

ಮಲಪ್ರಭಾ ರೈತ ಬಂಡಾಯಕ್ಕೆ 25 ವರ್ಷ ತುಂಬಿದ ಸಂದರ್ಭವನ್ನು ಆಚರಿಸಲು ಕರ್ನಾಟಕ ಪ್ರಾಂತ ರೈತ ಸಂಘ, ಕರ್ನಾಟಕ ರಾಜ್ಯ ರೈತ ಸಂಘ, ಅಖಿಲಭಾರತ ಕಿಸಾನ್‌ಸಭಾ, ಮಲಪ್ರಭಾ ರೈತ ಹೋರಾಟ ಸಮನ್ವಯ ಸಮಿತಿ ಮತ್ತು ಕೃಷಿ ವಿಶ್ವವಿದ್ಯಾಲಯ ಕೃಷಿ ಕಾರ್ಮಿಕರ ಸಂಘಗಳ ಜಂಟಿ ಆಶ್ರಯದಲ್ಲಿ ಕಳೆದ ಜುಲೈ 19ರಂದು ಧಾರವಾಡದಲ್ಲಿ ಒಂದು ಸಮಾರಂಭವನ್ನು ಏರ್ಪಡಿಸಲಾಗಿತ್ತು. ರಾಜ್ಯ ರೈತ ಸಂಘದ ಅಧ್ಯಕ್ಷರಾದ ಬಸವರಾಜ ತಂಬಾಕೆ, ಕರ್ನಾಟಕ ಪ್ರಾಂತ ರೈತ ಸಂಘದ ಅಧ್ಯಕ್ಷರಾದ ಮಾರುತಿ ಮಾನ್ಪಡೆ, ಅಖಿಲ ಭಾರತ ಕಿಸಾನ್ ಸಭಾದ ರಾಜ್ಯ ಕಾರ್ಯದರ್ಶಿ ಎಂ.ಗೋಪಾಲ, ಮಲಪ್ರಭ ರೈತ ಸಮನ್ವಯ ಸಮಿತಿಯ ಸದಸ್ಯ ನಿತ್ಯಾನಂದಸ್ವಾಮಿ ಮತ್ತು ಕೃ.ವಿ.ವಿ. ಕೃಷಿ ಕಾರ್ಮಿಕರ ಸಂಘದ ಉಪಾಧ್ಯಕ್ಷರಾದ ಎನ್.ಬಿ.ಜೇಕಿನಕಟ್ಟಿ ಅವರುಗಳ ಅಧ್ಯಕ್ಷತೆಯಲ್ಲಿ ಜರುಗಿದ ಸಮಾರಂಭದಲ್ಲಿ ಮಲಪ್ರಭಾ ರೈತ ಚಳುವಳಿಯ ನಾಯಕರಾದ ಬಿ.ಆರ್. ಯಾವಗಲ್ (ಮಾಜಿ ಸಚಿವರು), ವಿ.ಎನ್.ಹಳಕಟ್ಟಿ, ಎಸ್.ಹೆಚ್.ಕಪ್ಪಣ್ಣವರ, ಶಿವದೇವಗೌಡ ಪಾಟೀಲ್ ಮತ್ತು ಎಸ್.ಎಂ.ಬಾಳಿಕಾಯಿ ಅವರನ್ನು ಸನ್ಮಾನಿಸಲಾಯಿತು. ರಾಜಕೀಯ ಪಕ್ಷಗಳ ಪರವಾಗಿ ಮಾತನಾಡಿದ ಜೆಡಿ(ಎಸ್)ನ ಬಾಬಾಗೌಡ ಪಾಟೀಲ್ (ಮಾಜಿ ಕೇಂದ್ರ ಸಚಿವರು) ಮತ್ತು ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ ಅವರು 'ಮಲಪ್ರಭಾ ರೈತ ಚಳುವಳಿ' ಒಂದು ಯಶಸ್ವಿ ಚಳುವಳಿ ಎಂದೂ ಅದರಿಂದ ನಾವು ಇಂದಿಗೂ ಪಾಠ ಕಲಿಯಬೇಕಾಗಿದೆ ಎಂದು ಬಣ್ಣಿಸಿದರು. ಆರಂಭದಲ್ಲಿ ರಾಜ್ಯ ರೈತ ಸಂಘದ ಬಿ.ಸಿ.ಪಾಟೀಲ್ ಸ್ವಾಗತಿಸಿದರು. ಕರ್ನಾಟಕ ಪ್ರಾಂತ ರೈತ ಸಂಘದ ಬಿ.ಎಸ್.ಸೊಪ್ಪಿನ್ ಪ್ರಾಸ್ತಾವಿಕ ಮಾತುಗಳನ್ನು ಆಡಿದರು. ನಿತ್ಯಾನಂದಸ್ವಾಮಿ ಅವರ ಸಮಾರೋಪದ ಮಾತುಗಳೊಂದಿಗೆ ಕಾರ್ಯಕ್ರಮ

### ಸವದತ್ತಿಯಲ್ಲಿ ಸನ್ಮಾನ

ಸವದತ್ತಿಯಲ್ಲಿ ಕಳೆದ ಜುಲೈ 21ರಂದು 25ನೇ ರೈತ ಹುತಾತ್ಮರ ದಿನಾಚರಣೆಯನ್ನು ರೈತರ ಬೃಹತ್ ಮೆರವಣಿಗೆ ಮತ್ತು ಬಹಿರಂಗ ಸಭೆ ನಡೆಸುವ ಮೂಲಕ ಆಚರಿಸಲಾಯಿತು. ಮಲ್ಲಿಕಾರ್ಜುನ ಉಪ್ಪಿನ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಮಾರಂಭದಲ್ಲಿ ಎಸ್.ಹೆಚ್.ಕಪ್ಪಣ್ಣವರ, ಬಿ.ಆರ್. ಯಾವಗಲ್, ಎಸ್.ಎಸ್.ಪಾಟೀಲ ಪಡಕಿ, ವಿ.ಎನ್.ಹಳಕಟ್ಟಿ, ನಿತ್ಯಾನಂದಸ್ವಾಮಿ ಮತ್ತು ಬಿ.ಎಸ್.ಸೊಪ್ಪಿನ್ ಮಾತನಾಡಿದರು. ಎಫ್.ಎಂ.ನಥಾಫ್ ಸ್ವಾಗತಿಸಿದರು. ಎಲ್.ಎಸ್.ನಾಯಕ್ ವಂದಿಸಿದರು.

# ಕೇರಳ - ಎಸ್‌ಎನ್‌ಸಿ ಲೆವನಿನ್ ವಿವಾದ


**ಕೋತಿ ತಾನು ತಿಂದು ಮೇಕೆಯ ಮೂತಿಗೆ ಒರೆಸಿತಂತೆ. ಕೇರಳದಲ್ಲಿ ಸಿಪಿಐ(ಎಂ) ಮತ್ತು ಎಲ್.ಡಿ.ಎಫ್ ವಿರುದ್ಧ ಕಾಂಗ್ರೆಸ್ ನೇತೃತ್ವದ ಯು.ಪಿ.ಎಫ್. ಮತ್ತು ಮಾಧ್ಯಮದ ಕೆಲ ವಿಭಾಗಗಳು ನಡೆಸುತ್ತಿರುವ ಅಪಪ್ರಚಾರ ಹಾಗೂ ಹೊರಿಸುತ್ತಿರುವ ಭ್ರಷ್ಟಾಚಾರದ ಆರೋಪಗಳು ಅದನ್ನೇ ಹೋಲುತ್ತಿವೆ.**

## ಕೋತಿ ತಾನು ತಿಂದು ಮೇಕೆ ಮೂತಿಗೆ ಒರೆಸಿದ ಕತೆ

ನಿರಂತರ ಸೋಲುಗಳಿಂದ ತೀವ್ರ ಹತಾಶೆಯನ್ನೇ ಎದರಿಸಬೇಕಾಗಿ ಬಂದ ಯು.ಡಿ.ಎಫ್.ನ ಕುಮ್ಮಕ್ಕಿನಿಂದಾಗಿ ಕೇರಳದ ಮೂರು ಜಲ ವಿದ್ಯುತ್ ಸ್ಥಾವರಗಳಲ್ಲಿನ ಯಂತ್ರೋಪಕರಣಗಳ ಬದಲಾವಣೆ ಮತ್ತು ನವೀಕರಣ ಸಂಬಂಧ ಕೇರಳ ರಾಜ್ಯಕ್ಕೆ 374 ಕೋಟಿ ರೂಪಾಯಿಗಳ ನಷ್ಟವಾಗುವಂತಹ ದೊಡ್ಡ ಭ್ರಷ್ಟಾಚಾರ ನಡೆದಿದೆ ಎಂದು ಸಿಪಿಐ(ಎಂ) ವಿರುದ್ಧ ಆರೋಪಿಸಲಾಗಿದೆ. ಭ್ರಷ್ಟಾಚಾರ ನಡೆದಿರುವ ಸಾಧ್ಯತೆಯನ್ನೇನೂ ನಾವು ತಳ್ಳಿ ಹಾಕುವಂತಿಲ್ಲ. ಆದರೆ ನಡೆಸಿದವರು ಯಾರು ಎಂಬುದು ಪ್ರಶ್ನೆ.

ಪಲ್ಲಿವಾಸಲ್, ಸೆಂಗುಲಮ್, ಪನ್ನಿಯಾರ್ ಇವು ಹಲವು ದಶಕಗಳ ಹಿಂದೆ ನಿರ್ಮಿಸಲಾದ ಕೇರಳದ ಜಲ ವಿದ್ಯುತ್ ಸ್ಥಾವರಗಳು. ಕಾರ್ಯನಿರ್ವಹಣೆಯೇ ಕಷ್ಟವಾಗಿ ವಿದ್ಯುತ್ ಉತ್ಪಾದನೆ ಕುಸಿದಿದ್ದ ಈ ಸ್ಥಾವರಗಳ ಯಂತ್ರೋಪಕರಣಗಳ ಬದಲಾವಣೆ ಮತ್ತು ನವೀಕರಣ ಅಗತ್ಯವಾಗಿತ್ತು. 1995ರಲ್ಲಿ ಆಗ ಅಧಿಕಾರದಲ್ಲಿದ್ದ ಕಾಂಗ್ರೆಸ್ ನೇತೃತ್ವದ ಯು.ಡಿ.ಎಫ್. ಸರ್ಕಾರ ಈ ಸಂಬಂಧ ಜಾಗತಿಕ ಟೆಂಡರ್ ಕರೆಯದೇ ಕೆನಡಾ ಮೂಲದ ಬಹುರಾಷ್ಟ್ರೀಯ ಕಂಪನಿಯಾದ 'ಎಸ್.ಎನ್.ಸಿ. ಲೆವನಿನ್' ಸಂಸ್ಥೆಯೊಂದಿಗೆ ಮಾತುಕತೆ ನಡೆಸಿ 'ತಿಳುವಳಿಕೆ ಪತ್ರ'ಕ್ಕೆ ಸಹಿ ಹಾಕಿತು. ಆ ನಂತರ ಅದನ್ನು ದೃಢೀಕರಿಸಿ 'ಸರಬರಾಜು ಆದೇಶ ಒಪ್ಪಂದ'ಕ್ಕೆ ಸಹ 1996ರಲ್ಲಿ ಅಂಕಿತ ಹಾಕಿತು.

ಆನಂತರ ಮೇ 1996ರಲ್ಲಿ ಅಧಿಕಾರಕ್ಕೆ ಬಂದ ಸಿಪಿಐ(ಎಂ) ನೇತೃತ್ವದ ಎಡ ಪ್ರಜಾಸತ್ತಾತ್ಮಕ ರಂಗ (ಎಲ್.ಡಿ.ಎಫ್) ಸರ್ಕಾರ ಮುಂದೆ ಈ ಯೋಜನೆಯನ್ನು ಮುಂದುವರಿಸಬೇಕೇ ಬೇಡವೇ ಎಂಬ ಜಿಜ್ಞಾಸೆಗೊಳಗಾಯಿತು.



ಕೇರಳ ಮುಖ್ಯಮಂತ್ರಿ ಉಮನ್ ಚಾಂಡಿ



ಸಿಎನ್‌ಸಿ ಅಧ್ಯಕ್ಷ

'ಎಸ್.ಎನ್.ಸಿ. ಲೆವನಿನ್ ಮತ್ತು ಸರ್ಕಾರದ ನಡುವಿನ ಒಪ್ಪಂದದ ಪ್ರಕ್ರಿಯೆಯು ವಾಪಸ್ ಬರಲಾಗದ ಹಂತವನ್ನು ದಾಟಿದ್ದದ್ದು, ಒಪ್ಪಂದ ಮುರಿದರೆ ಎದುರಾಗಬಹುದಾಗಿದದ ಕಾನೂನು ಸಮಸ್ಯೆ, ಈ ಸಂಬಂಧ ಅನ್ವಯವಾಗುವ ಅಂತರರಾಷ್ಟ್ರೀಯ ಕಾನೂನಿನ ಸ್ವರೂಪ ಮತ್ತು ತೊಡಕುಗಳು, ಅಂತರರಾಷ್ಟ್ರೀಯ ನ್ಯಾಯಾಲಯದಲ್ಲಿ ಆಗುವ ವಿಳಂಬ ಮತ್ತು ಈ ನ್ಯಾಯಾಲಯವು ಇಂತಹದ್ದೇ ಪ್ರಕರಣಗಳಲ್ಲಿ ನೀಡಿರುವ ಈ ಹಿಂದಿನ ಕಂಪನಿಗಳ ಪರವಾದ ತೀರ್ಪು. ಹಾಗು ಇವಿವೆಲ್ಲದರ ಜೊತೆ ಕೇರಳ ರಾಜ್ಯ ಅಂದು ಎದುರಿಸುತ್ತಿದ್ದ ಗಂಭೀರ ವಿದ್ಯುತ್ ಕೊರತೆಯನ್ನು ತುರ್ತಾಗಿ ನಿವಾರಿಸಬೇಕಾಗಿದ್ದುದರ ಅಗತ್ಯ ಇವೆಲ್ಲವನ್ನೂ ಪರಿಶೀಲಿಸಿ ಸರ್ಕಾರವು ಯೋಜನೆಯನ್ನು ಜಾರಿ ಮಾಡಲು ತೀರ್ಮಾನಿಸಿತು.

ಆದರೆ ಎಲ್‌ಡಿಎಫ್ ಸರ್ಕಾರ ಈ ಒಪ್ಪಂದದಿಂದ ಕೇರಳ ರಾಜ್ಯಕ್ಕೆ ಆಗಬಹುದಾದ ಹಾನಿಯನ್ನು ತಪ್ಪಿಸುವ ಮತ್ತು ಕೇರಳ ರಾಜ್ಯಕ್ಕೆ ಹೆಚ್ಚು ಪ್ರಯೋಜನಗಳನ್ನು ಗಳಿಸಿ ಕೊಳ್ಳುವಂತಹ ದೃಷ್ಟಿಯಿಂದ ಕಂಪನಿ ಯೊಂದಿಗೆ ಪುನರ್ ಮಾತುಕತೆ ನಡೆಸಿತು ಮತ್ತು ತನ್ನ ಉದ್ದೇಶದಲ್ಲಿ ಗಣನೀಯ ಯಶಸ್ಸನ್ನು ಸಾಧಿಸಿತು.

ಈ ಪುನರ್ ಮಾತುಕತೆಯ ಪರಿಣಾಮವಾಗಿ ಆದ ಸಾಧನೆಗಳಿವು. ಮೊದಲು 188 ಕೋಟಿ ರೂಪಾಯಿಗಳ ಮೌಲ್ಯದ ವಿದೇಶಿ ಯಂತ್ರೋಪಕರಣಗಳ ಆಮದು ಬಗ್ಗೆ ಒಪ್ಪಂದಕ್ಕೆ ಬರಲಾಗಿತ್ತು. ಪುನರ್ ಮಾತುಕತೆ ನಂತರ ಈ ಮೊತ್ತವನ್ನು 149 ಕೋಟಿ ರೂ.ಗಳಿಗೆ ಇಳಿಸಲಾಯಿತು. ಕಂಪನಿಗೆ ತೆರಬೇಕಿದ್ದ ಸಮಾಲೋಚನಾ ಶುಲ್ಕ (ಕನ್ಸಲ್ಟೆನ್ಸಿ ಫೀ)ವನ್ನು 24.4 ಕೋಟಿ ರೂ.ನಿಂದ 17.88 ಕೋಟಿಗೆ ಇಳಿಸಲಾಯಿತು. ಮತ್ತು ಒಪ್ಪಂದದ ಭಾಗವಾಗಿ ಕೇರಳ ರಾಜ್ಯಕ್ಕೆ ಕೆನಡಾ ದೇಶದಿಂದ ದೊರೆಯುವ ವಿಶೇಷ ಅನುದಾನವನ್ನು (ಕ್ಯಾನ್ಸರ್ ಆಸ್ಪತ್ರೆ ನಿರ್ಮಾಣಕ್ಕಾಗಿ) 43 ಕೋಟಿ ರೂ.ಗಳಿಂದ 98 ಕೋಟಿ ರೂಪಾಯಿಗಳಿಗೆ ಏರಿಸಲಾಯಿತು.

ಎಲ್‌ಡಿಎಫ್ ಸರ್ಕಾರ ಈ ನವೀಕರಣ ಮಾತ್ರವೇ ಅಲ್ಲ ಹೊಸ ಜಲ ವಿದ್ಯುತ್ ಯೋಜನೆಗಳ ಬಗೆಗೆ ಒಟ್ಟಾರೆ ವಿದ್ಯುತ್ ಉತ್ಪಾದನೆ ಹೆಚ್ಚಳಕ್ಕೆ ಸಮರೋಪಾದಿಯಲ್ಲಿ ಕ್ರಮ ವಹಿಸಿದ್ದರಿಂದ ಒಟ್ಟು ವಿದ್ಯುತ್ ಉತ್ಪಾದನೆಯೂ 1083.61 ಮೆ.ವಾ. ಗಳಷ್ಟು ಅಗಾಧವಾಗಿ ಏರಿ ಕೇರಳ ವಿದ್ಯುತ್ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸುವಂತಾಯಿತು. (ಹಿಂದಿನ ಯು.ಡಿ.ಎಫ್. ಸರ್ಕಾರದ ಐದು ವರ್ಷಗಳ ಅವಧಿಯಲ್ಲಿ ಕೇವಲ 14 ಮೆಗಾ ವ್ಯಾಟ್‌ಗಳಷ್ಟು ಮಾತ್ರ ಏರಿಕೆಯಾಗಿತ್ತು.)

ಇದೀಗ ಅಗ್ಗದ ದರದಲ್ಲಿ ನವೀಕರಣ ಯೋಜನೆ ಜಾರಿ ಮಾಡುತ್ತಿದ್ದ ಸರ್ಕಾರಿ ಸ್ವಾಮ್ಯದ ಬಿ.ಹೆಚ್.ಇ.ಎಲ್. ಸಂಸ್ಥೆಯನ್ನು ನಿರ್ಲಕ್ಷಿಸಿ, ಜಾಗತಿಕ ಟೆಂಡರ್ ಕರೆಯದೇ ಕೆನಡಾ ಮೂಲದ ಕಂಪನಿಯ ಜೊತೆ ಎಲ್.ಡಿ.ಎಫ್. ಸರ್ಕಾರ ಒಪ್ಪಂದ ಮಾಡಿಕೊಂಡಿತು ಎಂದು ಆರೋಪಿಸಲಾಗುತ್ತಿದೆ. ಈ ಒಪ್ಪಂದ ಆಗಿರುವುದು ಯು.ಡಿ.ಎಫ್. ಸರ್ಕಾರದ ಅಧಿಕಾರವಿದ್ದಾಗ. ಸ್ವತಃ ಯು.ಡಿ.ಎಫ್.ನ ಇಬ್ಬರು ವಿದ್ಯುತ್ ಮಂತ್ರಿಗಳು ಒಪ್ಪಂದದ ಎರಡೂ ಹಂತಗಳಲ್ಲಿ ಸಹಿ ಮಾಡಿದ್ದಾರೆ. ಹೀಗಿದ್ದಾಗಲೂ ಎಲ್.ಡಿ.ಎಫ್. ಮೇಲೆ ಕೆಸರು ಎರಚುತ್ತಿರುವುದು ವಿಚಿತ್ರವಾಗಿದೆ. ಒಟ್ಟಾರೆ 259 ಕೋಟಿ ರು.ಗಳ ಯೋಜನೆಯಲ್ಲಿ ರಾಜ್ಯಕ್ಕೆ 374 ಕೋಟಿ ರೂಪಾಯಿಗಳ ನಷ್ಟವಾಗಿದೆ ಎಂದು ಹುಯಿಲೆಬ್ಬಿಸಲಾಗುತ್ತಿದೆ! ಆಸ್ಪತ್ರೆ ನಿರ್ಮಾಣದಲ್ಲಿ ಮತ್ತು ಕೆಲವು ಯೋಜನೆಯ ಕೆಲವು ಭಾಗದಲ್ಲಿ ಆದ ವಿಳಂಬಕ್ಕೂ ಎಲ್.ಡಿ.ಎಫ್. ಮೇಲೆ ಗೂಬೆ ಕೂರಿಸಲು ಪ್ರಯತ್ನಿಸಲಾಗುತ್ತಿದೆ.

ಕ್ಯಾನ್ಸರ್ ಆಸ್ಪತ್ರೆ ಅನುದಾನ ನಿಂತಿದ್ದು ಮತ್ತು ವಿಳಂಬವಾದದ್ದು, ಕೇಂದ್ರದ ಎನ್.ಡಿ.ಎ. ಸರ್ಕಾರ ನಡೆಸಿದ ಪೋಖ್ರಾನ್ ಅಣ್ವಸ್ತ್ರ ಸ್ಫೋಟದಿಂದಾಗಿ ಮತ್ತು 2001ರ ನಂತರ ಅಧಿಕಾರ ನಡೆಸಿದ ಯು.ಡಿ.ಎಫ್. ಸರ್ಕಾರ ಆಸ್ಟ್ರೇಲಿಯಾ ಸರ್ಕಾರಕ್ಕೆ ಸರಿಯಾದ ಉತ್ತರಗಳನ್ನು, ಮಾಹಿತಿಗಳನ್ನು ನೀಡದೇ ವಿಳಂಬ ಮಾಡಿದ್ದರಿಂದಾಗಿ, ರಾಜಕೀಯ ಕಾರಣಗಳಿಗಾಗಿ ಸತ್ಯವನ್ನು ತಿರುಚುವ ಯು.ಡಿ.ಎಫ್.ನ ತಂತ್ರವನ್ನು ಕೇರಳದ ಪ್ರಜ್ಞಾವಂತ ಜನತೆ ವಿಫಲಗೊಳಿಸಲಿದ್ದಾರೆ.

2004ರ ಲೋಕಸಭಾ ಚುನಾವಣೆ, ನಂತರದ ವಿಧಾನಸಭಾ ಉಪಚುನಾವಣೆ ಹೀಗೆ ನಿರಂತರವಾಗಿ ಸೋಲನ್ನೇ ಉಣ್ಣುತ್ತಿರುವ ಯು.ಡಿ.ಎಫ್. ಸರ್ಕಾರ ಮುಂಬರಲಿರುವ ವಿಧಾನಸಭಾ ಚುನಾವನೆಗಳಲ್ಲಿ ಕನಿಷ್ಠ ಗೌರವಾರ್ಹವಾದ ಸೋಲನ್ನಾದರೂ ಪಡೆದುಕೊಳ್ಳಲು ಇಂತಹ ಹತಾಶ ಯತ್ನ ನಡೆಸುತ್ತಿದೆಯೆಂಬ ಎಂಬ ಸಂಶಯ ಮೂಡಿದೆ.

○

## .........ಗ್ರಾಮೀಣ ಉದ್ಯೋಗ ಭರವಸೆ ಮಸೂದೆ

ಪುಟ 7 ರಿಂದ

ಮಸೂದೆ ಚರ್ಚೆಗೆ ಬರುವ ಮೊದಲು ಸಂಸದೀಯ ಸಮಿತಿ ಅದನ್ನು ವಿಮರ್ಶಿಸಿ, ಚರ್ಚೆಗೆ ಮಂಡಿಸಬೇಕು. ಈ ಮಸೂದೆ ಕುರಿತ ಸಂಸದೀಯ ಸಮಿತಿ ಅಧ್ಯಕ್ಷರೋ ಬಿಜೆಪಿಯ ಮುಖಂಡರಾದ ಕಲ್ಯಾಣ್ ಸಿಂಗ್! ಚುನಾವಣೆ ನಂತರ ಬಿಜೆಪಿ ಸಂಸತ್ತನ್ನು ಬಹಿಷ್ಕರಿಸುತ್ತಿರುವ ಕಾರಣ, ಕಲ್ಯಾಣ್‌ಸಿಂಗ್ ಸಹಾ ಸಂಸತ್ತಿನ ಕಲಾಪದಲ್ಲಿ ಭಾಗವಹಿಸುತ್ತಿರಲಿಲ್ಲ. ಪರಿಣಾಮವಾಗಿ ಅವರ ಅಧ್ಯಕ್ಷತೆಯಲ್ಲಿನ ಸಮಿತಿ ಸಭೆ ಸೇರಲಿಲ್ಲ. ಹಾಗಾಗಿ ಅದು ಸಂಸತ್ತಿನಲ್ಲಿ ಚರ್ಚೆಗೆ ಬರುವಲ್ಲಿ ವಿಳಂಬವಾಗಿದೆ. (ಹೇಗಿದೆ ನೋಡಿ ಜನತೆಗೆ ಪರಿಹಾರ ನೀಡುವ ಕಾರ್ಯ ವಿಳಂಬ ಮಾಡುವಲ್ಲಿ ಕಾಂಗ್ರೆಸ್- ಬಿಜೆಪಿಯ ದೋಸ್ತಿ. ಹೇಗಾದರೂ ಇಬ್ಬರ ವರ್ಗ ಹಿತಾಸಕ್ತಿಗಳು ಒಂದೇ ಅಲ್ಲವೇ?)

ಸಿಪಿಐ(ಎಂ) ಎಡಪಕ್ಷಗಳ ಒತ್ತಡ, ವಿವಿಧ ಸಂಘಟನೆಗಳ ಹೋರಾಟದಿಂದ ಎಚ್ಚೆತ್ತುಕೊಂಡಿರುವ ಕಲ್ಯಾಣ್ ಸಿಂಗ್ ಜುಲೈ 2005ರಲ್ಲಿ ತಮ್ಮ ನೇತೃತ್ವ ಸಮಿತಿಯ ಮೊದಲ ಸಭೆ ನಡೆಸಿ, ಮಸೂದೆಯನ್ನು ಸಂಸತ್ತಿನ ಚರ್ಚೆಗೆ ಕಳುಹಿಸಿದ್ದಾರೆ. ಅದರ ಬೆನ್ನ ಹಿಂದೆಯೇ ಕಾಂಗ್ರೆಸ್ ಅಧ್ಯಕ್ಷೆ, ಸೋನಿಯಾಗಾಂಧಿ, ಮಸೂದೆಯ ವ್ಯಾಪ್ತಿಯನ್ನು ಎಲ್ಲಾ ಗ್ರಾಮೀಣ ಕುಟುಂಬಗಳಿಗೆ ವಿಸ್ತರಿಸುವ ತಿದ್ದುಪಡಿ ಪ್ರಕಟಣೆ ಮಾಡಿದ್ದಾರೆ.

ಅಂತು-ಇಂತು ಜನತೆ ಇಂತಹದೊಂದು ಪರಿಹಾರಕ್ಕಾಗಿ ಒಂದುವರೆ ವರ್ಷದ ಹಿಂದೆಯೇ ಜನಾದೇಶವನ್ನು ಮೇ2004 ಚುನಾವಣೆ ಮೂಲಕ ನೀಡಿದರು. ಅಂತಹದೊಂದು ಮಸೂದೆಯನ್ನು ರೂಪಿಸಿ ಸಂಸತ್ತಿನಲ್ಲಿ ಚರ್ಚೆಗೆ ಎತ್ತಿಕೊಳ್ಳಲು, ಈ ಸರ್ಕಾರ ಒಂದುವರೆ ವರ್ಷ ತೆಗೆದುಕೊಂಡಿದೆ ಎಂಬುದಂತು ಇಂದಿನ ವಾಸ್ತವ.

**ಎಡಪಕ್ಷಗಳ ತಿದ್ದುಪಡಿಗಳು :**

ಸಂಸತ್ತಿನ ಅಂಗೀಕಾರಕ್ಕಾಗಿ ಕಾದಿರುವ ಗ್ರಾಮೀಣ ಉದ್ಯೋಗ ಭರವಸೆ ಮಸೂದೆಗೆ ಅಗತ್ಯ ಜನಪರ ತಿದ್ದುಪಡಿಗಳನ್ನು ಒಳಗೊಳಿಸಿ, ಅಂಗೀಕರಿಸುವಂತೆ ಸರ್ಕಾರದ ಮೇಲೆ ಒತ್ತಡ ತರಲು ವ್ಯಾಪಕ ಜನಾಂದೋಲನವನ್ನೆ ಎಲ್ಲಾ ಉದ್ಯೋಗ ಪರ ಶಕ್ತಿಗಳು ಮಾಡಬೇಕಿದೆ. ಈ ನಿಟ್ಟಿನಲ್ಲಿ ಎಡ ಪಕ್ಷಗಳು ಈ ಕೆಳಗಿನ ತಿದ್ದುಪಡಿಗಳನ್ನು ಮಸೂದೆಗೆ ಸೂಚಿಸಿ- ಒತ್ತಾಯಿಸುತ್ತಿವೆ. ಸಿಪಿಐ(ಎಂ) ಅದರ ಮೇಲೆ ಆಂದೋಲನಕ್ಕೆ ಆಗಸ್ಟ್ - ಸೆಪ್ಟೆಂಬರ್‌ನಲ್ಲಿ ಕರೆ ನೀಡಿದೆ.

1. ಕಾಲಮಿತಿಯೊಳಗೆ ಯೋಜನೆಯನ್ನು ಇಡಿ ದೇಶಕ್ಕೆ (5 ವರ್ಷಗಳೊಳಗೆ) ವಿಸ್ತರಿಸಬೇಕು. ಒಮ್ಮೆ ಒಂದು ಜಿಲ್ಲೆಯನ್ನು / ಪ್ರದೇಶವನ್ನು ಯೋಜನೆ ವ್ಯಾಪ್ತಿಗೆ ತಂದ ಮೇಲೆ ಅದನ್ನು ರದ್ದುಪಡಿಸುವ ಅವಕಾಶವಿರಬಹುದು

2. ಉದ್ಯೋಗ ಖಾತ್ರಿ, ನಿರುದ್ಯೋಗ ಭತ್ಯೆ ಎಲ್ಲಾ ಕುಟುಂಬಗಳಿಗೆ ಸಾರ್ವತ್ರಿಕವಾಗಿ ಲಭ್ಯವಾಗಬೇಕು. ಬಡ ಕುಟುಂಬಗಳಿಗೆ ಮಾತ್ರ ಎಂಬ ಅಂಶ ತೆಗೆದುಹಾಕಬೇಕು.

3. ಆಯಾಯ ರಾಜ್ಯಗಳಲ್ಲಿರುವ ಕೃಷಿ ಕೂಲಿಕಾರರಿಗೆ ಲಭ್ಯವಿರುವ ಶಾಸನಾತ್ಮಕ ಕನಿಷ್ಠ ಕೂಲಿಯನ್ನು ಯೋಜನೆಯಡಿ ಉದ್ಯೋಗಕ್ಕೆ ಬರುವವರಿಗೆ ಸಿಗುವಂತಾಗಬೇಕು.

4. ಕುಟುಂಬದ ಅರ್ಥ ಸಣ್ಣ ಕುಟುಂಬ (Nuclear Family) ಎಂದಿರಬೇಕು. ದೊಡ್ಡ ಕುಟುಂಬಕ್ಕೂ ಒಂದೇ ಉದ್ಯೋಗ ಎಂದರೆ ಸರಿಯಲ್ಲ. ಗಂಡ-ಹೆಂಡತಿ ಮಕ್ಕಳನ್ನು ಒಂದು ಘಟಕವಾಗಿ ಪರಿಗಣಿಸಬೇಕು.

5. ಉದ್ಯೋಗ ಸೃಷ್ಟಿಸುವ ರಾಜ್ಯ ಸರ್ಕಾರಗಳ ಸಾಮರ್ಥ್ಯ-ಯೋಜನೆಯಡಿ ಕೈಗೆತ್ತಿಕೊಳ್ಳಬಹುದಾದ ಕೆಲಸಗಳು ಮತ್ತು ಹಣಕಾಸಿನ ಲಭ್ಯತೆ ಮೇಲೆ ಅವಲಂಬಿತವಾಗಿದೆ. ಹಾಗಾಗಿ ನಿರುದ್ಯೋಗ ಭತ್ಯೆ ಮತ್ತು ಅದನ್ನು ನೀಡುವ ವಿಧಾನವನ್ನು ಈ ಕೆಳಗಿನಂತೆ ಬಲಪಡಿಸಬೇಕು.

ಅ. ಕೇಂದ್ರಗಳಿಂದ - ರಾಜ್ಯಗಳಿಗೆ ಯೋಜನೆಗಾಗಿ ನೀಡುವ ಹಣವನ್ನು ನಿಗದಿತ ಕಾಲದಲ್ಲಿ ನೀಡುವಂತೆ ಬಿಗಿ ಕ್ರಮಗಳನ್ನು ಒಳಗೊಳ್ಳಬೇಕು. ಉದ್ಯೋಗ ಭರವಸೆ ಯೋಜನೆಗಾಗಿ ಕೇಂದ್ರದಿಂದ ರಾಜ್ಯಗಳಿಗೆ ಲಭ್ಯವಾಗುವ ಹಣಕಾಸಿನ ಮೇಲೆ ರಾಜ್ಯಗಳ ಆರ್ಥಿಕ ಸಾಮರ್ಥ್ಯವನ್ನು ಪರಿಭಾಷಿಸಬೇಕು.

ಆ. ರಾಜ್ಯಗಳಿಗೆ ಕೇಂದ್ರದ ಹಣ ಬಂದೊಡನೆ ಉದ್ಯೋಗ ನೀಡಬೇಕು ಅಥವಾ ನಿರುದ್ಯೋಗ ಭತ್ಯೆ ನೀಡಬೇಕು. ರಾಜ್ಯಕ್ಕೆ ಅದು ಲಭ್ಯವಾಗದಿದ್ದಲ್ಲಿ ನಿರುದ್ಯೋಗ ಭತ್ಯೆ ಜವಾಬ್ದಾರಿಯನ್ನು ಕೇಂದ್ರವೇ ಹೊರಬೇಕು.

ಇ. ಕೈಗೆತ್ತಿಕೊಳ್ಳಬಹುದಾದ ಕೆಲಸಗಳ ವ್ಯಾಪ್ತಿ ವಿಶಾಲಗೊಳಿಸಬೇಕು.

ಈ. ನಿರುದ್ಯೋಗ ಭತ್ಯೆ ನೀಡದಿರಲು ಸಬೂಬು ಹೇಳಲು ಅವಕಾಶ ಕಲ್ಪಿಸುವ ನ್ಯೂನ್ಯತೆಗಳನ್ನು ಸರಿಪಡಿಸಬೇಕು.

7. ಪ್ರತಿ ಬ್ಲಾಕ್ ವ್ಯಾಪ್ತಿಯಲ್ಲಿ ಕನಿಷ್ಠ ಮೂರನೇ ಒಂದರಷ್ಟು ಉದ್ಯೋಗಗಳನ್ನು ಮಹಿಳೆಯರಿಗೆ ಕಲ್ಪಿಸಬೇಕು.

7. ಯೋಜನೆಯು ಪೂರ್ಣವಾಗಿ ಕೇಂದ್ರ ಸರ್ಕಾರ ಪ್ರಾಯೋಜಿತವಾಗಿರ ಬೇಕು. ಕೇಂದ್ರದಿಂದ ಹಣ ಬಂದ ನಂತರವೇ ನಿರುದ್ಯೋಗ ಭತ್ಯೆ ನೀಡುವ ಜವಾಬ್ದಾರಿ ರಾಜ್ಯ ಸರ್ಕಾರಗಳದ್ದಾಗಬೇಕು. 60:40ರ ಪ್ರಮಾಣದಲ್ಲಿ ಕೂಲಿ ಮತ್ತು ಆಹಾರವನ್ನು ಕೇಂದ್ರ ಸರ್ಕಾರ ಒದಗಿಸಬೇಕು.

8. ಕೆಲಸಕ್ಕೆ ಬಾರದ ದಿನಗಳಿಗೆ ಮಾತ್ರ ನಿರುದ್ಯೋಗ ಭತ್ಯೆಯಿಂದ ಕೆಲಸಗಾರರು ವಂಚಿತವಾಗಬೇಕೆ ವಿನಃ 3 ತಿಂಗಳಿಗೆ ಅಲ್ಲ.


9. ಶೇ.50 ಹಣವನ್ನು ಪಂಚಾಯತಿಗಳ ಮೂಲಕವೇ ಖರ್ಚು ಮಾಡಬೇಕು.

10. ಯಾವುದೇ ತಿದ್ದುಪಡಿಯನ್ನು ಕಾಯ್ದೆ/ಯೋಜನೆಗೆ ಕೇಂದ್ರ ಸರ್ಕಾರ ತರಬಯಸಿದಲ್ಲಿ, ಅದಕ್ಕೆ ಸಂಸತ್ತಿನ ಅನುಮೋದನೆ ಕಡ್ಡಾಯಪಡಿಸಬೇಕು.

## ಸಿನಿಮಾ

# ದೇಶೀ 'ಗಾಡ್‌ಫಾದರ್' ಅಥವಾ 'ಉಪಕಾರಿ' ಸರ್ವಾಧಿಕಾರದ ರಾಜಕೀಯ?

**'ಸರ್ಕಾರ್' ಗಾಡ್‌ಫಾದರ್‌ಗೆ ವರ್ಮಾನ 'ಶ್ರದ್ಧಾಂಜಲಿ' ಮಾತ್ರವಲ್ಲ, ಭೂಗತ ಅಪರಾಧಿ ಜಗತ್ತು ಮತ್ತು ರಾಜಕೀಯ ವ್ಯವಸ್ಥೆಗಳ ನಡುವಿನ ಸಂಬಂಧಗಳನ್ನು ಬಿಚ್ಚಿಡುತ್ತದೆ. ಮಾತ್ರವಲ್ಲ, ರಿಪೇರಿ ಆದ ಬಾಳಾ ಠಾಕ್ರೆಯಂತಹ 'ಸರ್ಕಾರ್' 'ಉಪಕಾರಿ ಸರ್ವಾಧಿಕಾರಿ'ಯಾಗಿ ನಮ್ಮ ಅನ್ಯಾಯಯುತ ವ್ಯವಸ್ಥೆಯನ್ನು ರಿಪೇರಿ ಮಾಡಬಲ್ಲ ಎಂಬ ಅಪಾಯಕಾರಿ ರಾಜಕೀಯವನ್ನು ಶಕ್ತಿಯುತವಾಗಿ ಮುಂದಿಡುತ್ತದೆ.**




ಭೂಗತ ಅಪರಾಧಿ ಜಗತ್ತಿನಲ್ಲಿ ಮನುಷ್ಯರ ಸಂಬಂಧಗಳ ಬಗ್ಗೆ ಬಾಲಿವುಡ್ ಫಾರ್ಮುಲಾಗಿಂತ ಭಿನ್ನವಾದ ಫಿಲಂ ತಯಾರಿಸಿದ ಹೆಸರು ರಾಮಗೋಪಾಲ್ ವರ್ಮ ಅವರಿಗಿದೆ. 'ಸತ್ಯ' ಮತ್ತು 'ಕಂಪನಿ' ಈ ದಿಕ್ಕಿನಲ್ಲಿ ಅವರ ಮೊದಲ ಎರಡು ಫಿಲಂಗಳು. 'ಸರ್ಕಾರ್' ಈ ಅಪರಾಧಿ ಜಗತ್ತಿನ ತ್ರಿವಳಿಯ ಕೊನೆ ಫಿಲಂ ಎನ್ನಲಾಗಿದೆ. ಹಲವು ದಶಕಗಳ ಹಿಂದೆ ಗಾಢ ಪ್ರಭಾವ ಬೀರಿದ್ದ ಇಂಗ್ಲೀಷ್‌ನ 'ಗಾಢಫಾದರ್' ಎಂಬ ಪ್ರಸಿದ್ಧ ಫಿಲಂಗೆ ತನ್ನ 'ಶ್ರದ್ಧಾಂಜಲಿ'. ಆದರೆ ಅದು 'ಗಾಡ್‌ಫಾದರ್'ನ ಭಾರತೀಯ ಅವತಾರ ಮಾತ್ರವಲ್ಲ, ಒಂದು ಸ್ವತಂತ್ರ ಕೃತಿ ಎಂದು ವರ್ಮ ಹೇಳುತ್ತಾರೆ. ವರ್ಮಾ ಅವರ ಹಿಂದಿನ ಫಿಲಂಗಳ ವಿಶಿಷ್ಟ ಶೈಲಿಯ ಮುಂದುವರಿಕೆಯಾಗಿ - ಅಸಂಪ್ರದಾಯಕ ಫೋಟೋಗ್ರಾಫಿ, ಹಿನ್ನೆಲೆ ಸಂಗೀತ, ಉಸಿರುಕಟ್ಟಿಸುವಂತೆ ಮುಂದುವರೆಯುವ ನಾಟಕೀಯ ಚಿತ್ರಕಥೆ, ಶಕ್ತಿಯುತ ಸಂಭಾಷಣೆ, ಉತ್ತಮ ಅಭಿನಯ - ಇವೆಲ್ಲ 'ಸರ್ಕಾರ್'ನ್ನು ಸಹ ಶಕ್ತಿಯುತ ಫಿಲಂ ಮಾಡುತ್ತದೆ.

ಸಾಕಷ್ಟು ಚೆನ್ನಾಗಿ ಓಡುತ್ತಿದ್ದು, ಬಾಲಿವುಡ್ ಫಾರ್ಮುಲಾ (ಹಾಡು-ಕುಣಿತ- ಪ್ರೇಮ)ಗಳನ್ನು ಒಡೆದಿದ್ದರೂ - ಎಲ್ಲಾ ವರ್ಗಗಳ ಪ್ರೇಕ್ಷಕರೂ ಮೆಚ್ಚಿಕೊಂಡಂತೆ ಕಾಣುತ್ತಿದೆ. ಅವರು ಏತಕ್ಕಾಗಿ ಮೆಚ್ಚಿಕೊಂಡಿದ್ದಾರೆ? ಅವರಿಗೆ ಈ ಫಿಲಂ ಏನು ಹೇಳುತ್ತಿದೆ? ಎಂಬುದು ಕುತೂಹಲಕಾರಿ ಪ್ರಶ್ನೆಗಳು. ಇದಕ್ಕೆ ಹಲವು ಉತ್ತರಗಳಿದ್ದಂತೆ ಕಾಣುತ್ತದೆ. ಹಲವರು 'ಸರ್ಕಾರ್'ನ್ನು ತೀವ್ರವಾಗಿ ಟೀಕಿಸಿದ್ದಾರೆ ಕೂಡಾ.

**'ಸರ್ಕಾರ್' ಏನು ಹೇಳುತ್ತದೆ? - ವಿವಾದ**

ಭೂಗತ ಜಗತ್ತು ಮತ್ತು ರಾಜಕೀಯ ಶಕ್ತಿ ನಡುವೆ ಸಂಬಂಧಗಳನ್ನು ಉತ್ತಮವಾಗಿ ಬಿಚ್ಚುತ್ತದೆ ಎಂಬುದು ಕೆಲವರ ಮೆಚ್ಚುಗೆ, ಮುರಿದು ಬೀಳುತ್ತಿರುವ ಅನ್ಯಾಯಯುತ ವ್ಯವಸ್ಥೆಯ ವಿರುದ್ಧ ಪ್ರತಿಭಟನೆ, 'ನ್ಯಾಯ' ಕೊಡಬಲ್ಲ ಬದಲಿ ವ್ಯವಸ್ಥೆಯ ಕಣ್ಣೋಟ ಕೊಡುತ್ತದೆ. ಭೂಗತ ಜಗತ್ತಿನಲ್ಲಿ ಗ್ಯಾಂಗ್ - ಸಮರಗಳಲ್ಲಿ, ಗೆದ್ದ ಗ್ಯಾಂಗ್‌ನ ಕುಟುಂಬದೊಳಗಿನ ಕದನದಲ್ಲಿ, ಹಿಂಸೆ ಕೊನೆಗೂ ಹೆಚ್ಚಿನವರನ್ನು ಬಲಿ ತೆಗೆದುಕೊಳ್ಳುತ್ತದೆ. ಆದರೆ ಗ್ಯಾಂಗ್ ಆಳ್ವಿಕೆ ಮುಂದುವರೆಯುತ್ತದೆ ಎಂಬ ಕಟು ಸತ್ಯ ಪರಿಣಾಮಕಾರಿಯಾಗಿ ಹೇಳುತ್ತದೆ. ಇವೇ ಕೆಲವನ್ನು 'ಸರ್ಕಾರ್'ನಲ್ಲಿ ಜನ ಕಂಡಿದ್ದಾರೆ.

ಟೀಕಾಕಾರರೂ ಹಲವು ಕಾರಣಗಳಿಗೆ 'ಸರ್ಕಾರ್'ನ್ನು ಟೀಕಿಸಿದ್ದಾರೆ. ಹಿಂದಿಯಲ್ಲಿ 'ಧರ್ಮಾತ್ಮ', ತಮಿಳಿನಲ್ಲಿ 'ನಾಯಗನ್' ಮೂಲಕ 'ಗಾಡ್‌ಫಾದರ್' ಈಗಾಗಲೇ ದೇಸಿ 'ಅವತಾರ'ಗಳನ್ನು ಕಂಡಿರುವಾಗ ಇನ್ನೊಂದು ದೇಸಿ, 'ಗಾಡ್‌ಫಾದರ್'ನ ಅಗತ್ಯ ಏನಿತ್ತು? 'ಗಾಡ್‌ಫಾದರ್' ಮತ್ತು 'ನಾಯಗನ್'ನ ಕೆಟ್ಟ ಮಿಶ್ರಣವೇ 'ಸರ್ಕಾರ್'. 'ಗಾಡ್‌ಫಾದರ್'ನ ಮೂಲಕಥೆಯ ಸಾರದಿಂದ ತೀರಾ ದೂರವಾಗಿದೆ. 'ಗಾಡ್‌ಫಾದರ್'ನ ಸಾರಕ್ಕೆ ಅಪಚಾರವೆಸಗಿದೆ ಎಂದೂ ಇನ್ನೂ ಕೆಲವು ಟೀಕೆಗಳು.

**ಸರ್ಕಾರ್ ಒಂದು ರಾಜಕೀಯ ಫಿಲಂ**

ಒಂದು ವ್ಯವಸ್ಥೆ ವಿಫಲವಾದಾಗ, ಇನ್ನೊಂದು ಶಕ್ತಿ ಎದ್ದು ಬರುತ್ತದೆ ಎಂದು ಫಿಲಂನ ಆರಂಭದ ಘೋಷ ವಾಕ್ಯ, 'ಸರ್ಕಾರ್ ಭೂಗತ ಜಗತ್ತಿನ ಬಗ್ಗೆ ಫಿಲಂ ಅಲ್ಲ' ಎಂಬ ವರ್ಮಾರ ಹೇಳಿಕೆ (ಸಂದರ್ಶನವೊಂದರಲ್ಲಿ) - ಬೇರೆಯೇ ಚಿತ್ರ ನೀಡುತ್ತದೆ. ಇದು 'ಗಾಡ್‌ಫಾದರ್'ಗೆ ನನ್ನ 'ಶ್ರದ್ಧಾಂಜಲಿ' ಎನ್ನುತ್ತಾರೆ ವರ್ಮಾ. 'ಸರ್ಕಾರ್'ನ 'ಗಾಡ್‌ಫಾದರ್' ಸುಭಾಷ್ ನಾಗ್ರೆ ಬಾಳಾ ಠಾಕ್ರೆಯಂತೆಯೇ ಕನಿಷ್ಠ ಮೇಲ್ನೋಟಕ್ಕೆ ಕಂಡು ಬರುವುದು, 'ಸುಭಾಷ್ ನಾಗ್ರೆಯನ್ನು ಮುಟ್ಟಿದರೆ ಇಡೀ ಮುಂಬಯಿ ಉರಿದು ಹೋಯಿತು' ಎಂಬ ಹೇಳಿಕೆಯನ್ನು ಮುಖ್ಯಮಂತ್ರಿ (ಕುಖ್ಯಾತ ಮುಂಬಯಿ ದಂಗೆಗಳ ಸಮಯದಲ್ಲಿ ಬಾಳಾ ಠಾಕ್ರೆಯನ್ನು ಬಂಧಿಸಬೇಕು ಎಂಬ ಕೂಗು ಎದ್ದಾಗ ಆಗಿನ ಮುಖ್ಯಮಂತ್ರಿಯ ಇಂತಹ ಹೇಳಿಕೆಯನ್ನು ನೆನಪಿಸಿಕೊಳ್ಳಬಹುದು) ನೀಡುವುದು, ಗ್ಯಾಂಗ್‌ವಾರ್‌ಗಳು, ಕುಟುಂಬದೊಳಗಿನ ಕದನ ಎಲ್ಲಾ ಸೇರಿ ಸರ್ಕಾರ ಬಿದ್ದು ಹೋಗಿ ಚುನಾವಣೆಯಲ್ಲಿ ಸುಭಾಷ್ ನಾಗ್ರೆ ಬೆಂಬಲಿತ ಅಭ್ಯರ್ಥಿ ಮುಖ್ಯಮಂತ್ರಿಯಾಗುವುದು, 'ಸರ್ಕಾರ್'ನ ಮಗ 'ಸರ್ಕಾರ್' ಆಗಿ ಮುಂದುವರೆಯುವುದು, 'ಬಾಳಾ ಠಾಕ್ರೆ'ಯಂತಹ ವ್ಯಕ್ತಿ ಇರುವುದು ಸಾಧ್ಯವಿರುವುದಾದರೆ, 'ಸರ್ಕಾರ್' ನಂತಹ ವ್ಯಕ್ತಿ ಯಾಕೆ ಇರಬಾರದು ಎಂಬ ವರ್ಮಾ ಹೇಳಿಕೆ - ಇವೆಲ್ಲಾ 'ಸರ್ಕಾರ್'ನ್ನು ನಿರ್ದಿಷ್ಟ ರಾಜಕೀಯ ಹೇಳುವ ರಾಜಕೀಯ ಫಿಲಂ ಆಗಿ ಮೂಡಿಸುತ್ತದೆ. ಆದರೆ ಯಾವ ರೀತಿಯ 'ರಾಜಕೀಯ' ಸರ್ಕಾರ್ ಹೇಳುತ್ತದೆ?

ಇಲ್ಲಿನ 'ಸರ್ಕಾರ್' ಅಮೆರಿಕಾದ 'ಗಾಡ್‌ಫಾದರ್'ನಂತೆ ವ್ಯವಸ್ಥೆಯ ಲೋಪ - ದೋಷಗಳನ್ನು ಬಳಸಿ ತನ್ನ 'ಬಿಸಿನೇಸ್' ಮುಂದುವರೆಸುವುದರಲ್ಲಿ ಮಾತ್ರ ತೊಡಗಿಲ್ಲ. ಕುಸಿದು ಬಿದ್ದ ಅನ್ಯಾಯಯುತ ವ್ಯವಸ್ಥೆಯಿಂದ ನೊಂದ ಜನಕ್ಕೆ 'ನ್ಯಾಯ' ಕೊಡುತ್ತಾನೆ! ಸರಿ ಅಥವಾ ತಪ್ಪು ಎಂಬುದು ಎಂಥದೂ ಇಲ್ಲ. ಇರುವುದು ಬರಿಯ 'ರಾಜಕೀಯ ಶಕ್ತಿ' ಎಂಬ 'ಸರ್ಕಾರ್'ನ ನೀತಿ ಫಿಲಂನ ಕೇಂದ್ರೀಯ ರಾಜಕೀಯ ಹೇಳಿಕೆಯಾಗಿದೆ.

**ಸರ್ಕಾರ್‌ನ ದರ್ಬಾರಿನ ಕಥೆ**

ಪೋಲಿ ಹುಡುಗರಿಂದ ಬಲಾತ್ಕಾರಕ್ಕೆ ಒಳಗಾಗಿ, ಅಪರಾಧ ಎಸಗಿದ ಹುಡುಗರು ಖುಲಾಸೆಯಾಗಿ ಮಜವಾಗಿ ತಿರುಗುವುದನ್ನು ಕಂಡು ಬೇಸತ್ತ ಹುಡುಗಿಯ ಆತ್ಮಹತ್ಯೆಯಿಂದ ನೊಂದ ತಂದೆಗೆ ನ್ಯಾಯ ಒದಗಿಸುವುದರಿಂದಲೇ (ಪೋಲಿ ಹುಡುಗರನ್ನು ಥಳಿಸಿ ಕೈ ಕಾಲು ಮುರಿಯುವ ಮೂಲಕ!) ಫಿಲಂ ಆರಂಭವಾಗುತ್ತದೆ. ದುಬೈನ ರಶೀದ್‌ನ ಮಾದಕ ದ್ರವ್ಯಗಳ ವ್ಯಾಪಾರಕ್ಕೆ 'ರಕ್ಷಣೆ' ಕೊಡುವುದಿಲ್ಲ - ಮಾತ್ರವಲ್ಲ ಅದನ್ನು ಸಕ್ರಿಯವಾಗಿ ವಿರೋಧಿಸುವ 'ಸರ್ಕಾರ್' ವಿರುದ್ಧ ಎಲ್ಲರೂ (ಇಡೀ 'ವ್ಯವಸ್ಥೆ'?) ವಿರೋಧಿ ಗ್ಯಾಂಗ್‌ಗಳು, ಸರ್ಕಾರ, ಪೋಲೀಸು, ರಾಜಕಾರಣಿಗಳು ಪಿತೂರಿ ಹೂಡುತ್ತಾರೆ. ಸುಭಾಷ್ ನಾಗ್ರೆ('ಸರ್ಕಾರ್')ನೆ ವಿರುದ್ಧವಾಗಿರುವ ರಾಜಕಾರಣಿಯನ್ನು ವಿರೋಧಿ ಗ್ಯಾಂಗ್ ಒಂದು ಕೊಲೆ ಮಾಡಿ, ಕೊಲೆಗಾರ ಶರಣಾಗತವಾಗಿ 'ಸರ್ಕಾರ್' ತನ್ನನ್ನು ಕಳುಹಿಸಿದ್ದು ಮಾಡಬೇಕೆಂದು ಶಪಥ ಮಾಡಿದ ಅಣ್ಣ ವಿಷ್ಣುವನ್ನು ಕೊಲೆ ಮಾಡುವುದರಿಂದ ಆರಂಭಿಸಿ, ಪಿತೂರಿಯಲ್ಲಿ ಭಾಗವಹಿಸಿದವರೆಲ್ಲರ ಕೊಲೆಯ ಸರಣಿ ಆರಂಭಿಸುವ ಪ್ರಕ್ರಿಯೆಯಲ್ಲಿ ತಾನೇ ಹೊಸ 'ಸರ್ಕಾರ್' ಆಗುತ್ತಾನೆ. ಹೊಸ 'ಸರ್ಕಾರ್' ಅನ್ಯಾಯಯುತ ವ್ಯವಸ್ಥೆಯಿಂದ ನೊಂದವರಿಗೆ 'ನ್ಯಾಯ' ಒದಗಿಸುವ ಪರಂಪರೆ ಮುಂದುವರೆಸುತ್ತಾನೆ. 'ಸರ್ಕಾರ್' ವಿರುದ್ಧ ಪಿತೂರಿಯ ಭಾಗವಾದ ಮುಖ್ಯಮಂತ್ರಿಯ ಸರ್ಕಾರ ಬಿದ್ದು ಹೋಗಿ ಚುನಾವಣೆಗಳಿಗೆ ಸರ್ಕಾರ್‌ನ ಬೆಂಬಲದ ವ್ಯಕ್ತಿ ಮುಖ್ಯಮಂತ್ರಿಯಾಗುತ್ತಾನೆ.

ಇದಿಷ್ಟು ಸರ್ಕಾರ್‌ನ ದರ್ಬಾರಿನ ಕಥೆ. ಆ ಕಥೆ ಹೇಳಿದ ರೀತಿ, ಅದು ಧ್ವನಿಸುವ ರಾಜಕೀಯ ಅಭಿಪ್ರಾಯಗಳು ಸ್ಪಷ್ಟವಾಗಿದೆ, ನಿರ್ದಿಷ್ಟವಾಗಿದೆ. ಚಿತ್ರ ಮೆಚ್ಚಿರುವ ಹಲವರು ಅಂದುಕೊಂಡಂತೆ ಭೂಗತ ಅಪರಾಧ ಜಗತ್ತು ಮತ್ತು ರಾಜಕೀಯ ವ್ಯವಸ್ಥೆಯ ನಡುವೆ ಸಂಬಂಧಗಳನ್ನು (ತಾಕಲಾಟ ಸೇರಿದಂತೆ) ಬರಿಯ ತಟಸ್ಥವಾಗಿ ಬಿಟ್ಟು ಬಿಡುವುದಿಲ್ಲ, ಇತರ ಕೆಲವರು ಅಂದುಕೊಂಡಂತೆ ಭೂಗತ ಜಗತ್ತಿನ ಗ್ಯಾಂಗ್- ಕದನದಲ್ಲಿ ಹಿಂಸೆ ಎಲ್ಲರನ್ನೂ ಬಲಿ ತೆಗೆದುಕೊಳ್ಳುತ್ತದೆ. ಈ ಗ್ಯಾಂಗ್-ಕದನ ಉಕ್ಕಿ ಹರಿದು ಸಮಾಜವನ್ನು ಸುಡಬಲ್ಲುದು. ಈ ಕದನದಲ್ಲಿ ಗೆದ್ದ ಕುಟುಂಬದ ಒಳಗೂ ಬೆಂಕಿ ಹಚ್ಚಬಲ್ಲುದು. ಆದರೂ ಗ್ಯಾಂಗ್ ಆಳ್ವಿಕೆ ಭೂಗತ ಜಗತ್ತಿನಲ್ಲೂ, ಹೊರಗಿನ ಸಮಾಜದಲ್ಲೂ ಮುಂದುವರೆಯುತ್ತದೆ ಎಂಬುದನ್ನೂ ಬರಿಯ ತಟಸ್ಥವಾಗಿ ಹೇಳುವುದಿಲ್ಲ.

**'ಉಪಕಾರಿ ಸರ್ವಾಧಿಕಾರ' ಬೇಕು?**

ಇವೆರಡನ್ನೂ ಮೀರಿ 'ಸರ್ಕಾರ್' ಮೌನವಾಗಿ, ನಾಜೂಕಾಗಿ ತನ್ನದೇ ರಾಜಕೀಯ ಮುಂದಿಡುತ್ತದೆ. ಅದು 'ಸರ್ಕಾರ್'ನ ರಾಜಕೀಯ ಧೋರಣೆಯೇ ಮೊದಲನೆಯದಾಗಿ ಉಪಕಾರಿ ಸರ್ವಾಧಿಕಾರ'ದ (Benevolent Dictatorship) ರಾಜಕೀಯ ಧೋರಣೆಯನ್ನು ಸೂಕ್ಷ್ಮವಾಗಿ ಮುಂದಿಡುತ್ತದೆ. ಭೂಗತ ಅಪರಾಧಿ ಜಗತ್ತು ಸಮಾಜದಲ್ಲಿರುವ ಅನ್ಯಾಯಯುತ ವ್ಯವಸ್ಥೆಯ ಹೊರಗಿದ್ದು, ತನ್ನದೇ 'ನ್ಯಾಯ' ವ್ಯವಸ್ಥೆ ಹೊಂದಿದೆ. 'ಸರಿಯಾದ' ಗ್ಯಾಂಗ್ ಲೀಡರ್ ಇದ್ದರೆ ಇದು ಜನತೆಗೆ 'ನ್ಯಾಯ' ಒದಗಿಸಬಲ್ಲುದು. ಸಮಾಜದ ವ್ಯವಸ್ಥೆಗೆ ಸವಾಲು ಹಾಕಬಲ್ಲುದು ಅದನ್ನು ಬದಲಾಯಿಸಬಲ್ಲುದು - ಎಂದು ಹೇಳುತ್ತಾನೆ.

ಇದನ್ನು ಮುಂದೆ ಮಾಡಿ 'ಸರ್ಕಾರ್'ನ್ನು ಬಂಧಿಸಿ, ಜೈಲಿನಲ್ಲಿ ಪುನಃ ಗ್ಯಾಂಗ್ವಲ್ಲೆ ಮಾಡಿ ಆತನನ್ನು ಕೊಲ್ಲುವ ಪಿತೂರಿಯಲ್ಲಿ ಎಲ್ಲರೂ ಸೇರಿರುತ್ತಾರೆ. ಸುಭಾಷ್ ನಾಗ್ರೆಯ ಎರಡು ಮಕ್ಕಳಲ್ಲಿ ಚಿಕ್ಕವ ಶಂಕರ್ ಅಮೆರಿಕದಲ್ಲಿ ಓದಿ ಬಂದಿದ್ದು, ವಾಪಸು ಹೋಗಿ ತನ್ನದೇ ಕಂಪನಿ ಮಾಡಿ ಗರ್ಲ್‌ಫ್ರೆಂಡ್ ಜತೆ ಮದುವೆ ಮಾಡಿಕೊಂಡು ದೂರ ಇರುವ ಯೋಜನೆ ಇರುತ್ತದೆ. ದೊಡ್ಡವ ವಿಷ್ಣು ಫಿಲಂ ತಯಾರಕನಾಗಿದ್ದು ತನ್ನ ತಂದೆ ತನ್ನ ಫಿಲಂ ಉದ್ಯಮದಲ್ಲಿ ಮೇಲುಗೈ ಸಾಧಿಸಲು ಸಹಾಯ ಮಾಡುವುದಿಲ್ಲ ಎಂದು ಅಪ್ಪನ ಮೇಲೆ ಕೆಂಡ ಕಾರುತ್ತಾನೆ. ತನ್ನ ಫಿಲಂನ ನಾಯಕ - ನಟಿ ತನ್ನನ್ನು ಒಲಿಯಲಿಲ್ಲ ಎಂಬ ಕೋಪದಲ್ಲಿ ಆಕೆಯ ಪ್ರೇಮಿ ನಾಯಕ-ನಟನನ್ನು ಸಾರ್ವಜನಿಕವಾಗಿ ಕೊಲೆ ಮಾಡುತ್ತಾನೆ. ಇದರಲ್ಲಿ ತನ್ನ ಬೆಂಬಲಕ್ಕೆ ನಿಲ್ಲುವುದಿಲ್ಲ. ಮಾತ್ರವಲ್ಲ ನಾಯಕ-ನಟಿಗೆ 'ಸರ್ಕಾರ್' ರಕ್ಷಣೆ ನೀಡಿದಾಗ ಪೂರ್ಣವಾಗಿ ದಂಗೆ ಏಳುತ್ತಾನೆ. 'ಸರ್ಕಾರ್' ಆತನನ್ನು ಹೊರಗೆ ಹಾಕಿದಾಗ ವಿರೋಧಿ ಗ್ಯಾಂಗ್ ಜತೆ ಸೇರಿ 'ಸರ್ಕಾರ್' ವಿರುದ್ಧ ಮಸಲತ್ತು ನಡೆಸುತ್ತಾನೆ. ಜೈಲಿನಲ್ಲಿ ಕೊಲೆ ಪ್ರಯತ್ನ ತಪ್ಪಿಸಿಕೊಂಡು ಮನೆಗೆ ಬಂದ 'ಸರ್ಕಾರ್'ನ್ನು ಮನೆಯಲ್ಲಿ ಕೊಲೆ ಮಾಡಲು ಪ್ರಯತ್ನ ಮಾಡುತ್ತಾನೆ. ಇಷ್ಟರಲ್ಲಿ ತಂದೆಯ 'ದರ್ಬಾರ್'ನಿಂದ ದೂರವಿದ್ದರೂ ಆತನ ಫಿಲಾಸಫಿಯನ್ನು ಪೂರ್ತಿ ಒಪ್ಪಿರುವ ಶಂಕರ್, ತಂದೆಯನ್ನು ಇಡೀ ವ್ಯವಸ್ಥೆಯ ಪ್ರಯತ್ನದಿಂದ ಬಚಾವು

ಎಂಬ ಧ್ವನಿ 'ಸರ್ಕಾರ' ಚಿತ್ರದ ತುಂಬಾ ಇದೆ. ಸ್ವಾಭಾವಿಕವಾಗಿಯೇ ಈ ಸಾಧ್ಯತೆ ಬಗ್ಗೆ ಬಹಳ ವ್ಯಾಪಕವಾದ ಸಿನಿಕತನ, ಗಂಭೀರವಾದ ಸಂಶಯ ಸಹ ಇದೆ - ಎಂದು ವರ್ಮಾಗೆ ಗೊತ್ತು. ಆದ್ದರಿಂದ 'ಸರ್ಕಾರ್'ನಲ್ಲಿ ಬಾಳಾಠಾಕ್ರೆಯ ನೆರಳು ಕಾಣುವಂತೆ ಮಾಡಲಾಗಿದೆ. ಆದರೆ 'ಸರ್ಕಾರ್' ಬಾಳಾ ಠಾಕ್ರೆಯಂತೆ ಕುಖ್ಯಾತ ಮುಂಬಯಿ ಕೋಮು ದಂಗೆ ಮಾಡಿಸುವವನಲ್ಲ. ಮರಾಠಿಯೇತರರ ವಿರೋಧಿ ಅಲ್ಲ, ಬಾಳಾ ಠಾಕ್ರೆಯನ್ನು ಸ್ವಲ್ಪ 'ರಿಪೇರಿ' ಮಾಡಿದರೆ 'ಸರ್ಕಾರ್' (ಅಥವಾ 'ಉಪಕಾರಿ ಸರ್ವಾಧಿಕಾರಿ') ಆಗಲಾರನೆ? 'ಬಾಳಾ ಠಾಕ್ರೆಯಂತಹ ವ್ಯಕ್ತಿ ಇರುವುದು ಸಾಧ್ಯವಾದರೆ, 'ಸರ್ಕಾರ್' ನಂತಹ ವ್ಯಕ್ತಿ ಇರುವುದು ಯಾಕೆ ಸಾಧ್ಯವಿಲ್ಲ? 'ಸರ್ಕಾರ್ ಬಾಳಾ ಠಾಕ್ರೆಯ ಕಥೆ ಅಲ್ಲ' ಎಂಬ ವರ್ಮಾ ಹೇಳಿಕೆಗೆ ಇನ್ನೇನು ಅರ್ಥೈಸುವುದು ಸಾಧ್ಯ? ಇದೇ 'ಸರ್ಕಾರ್' ಚಿತ್ರದ ಅತ್ಯಂತ ಅಪಾಯಕಾರಿ ಅಂಶ.

'ಉಪಕಾರಿ ಸರ್ವಾಧಿಕಾರಿ'ಯ ಪರಿಕಲ್ಪನೆ ಸಮಾಜ ತೀವ್ರ ಬಿಕ್ಕಟ್ಟಿನಲ್ಲಿದ್ದಾಗ ಅನ್ಯಾಯಯುತ ವ್ಯವಸ್ಥೆಗೆ ಬದಲಿ ಕಾಣದ್ದಾಗ ತಲೆ ಎತ್ತುತ್ತದೆ. ಹಲವು ಬಾರಿ ಫ್ಯಾಸಿಸಂಗೆ ಜನಸಮ್ಮತಿ ಒದಗಿಸುವ ಮೊದಲ ಹಂತವೂ ಆಗುತ್ತದೆ. ಇಂತಹ ಎಲ್ಲಾ ಸರ್ವಾಧಿಕಾರಿಗಳು ಅನ್ಯಾಯಕ್ಕೆ ಒಳಗಾದ ಜನತೆಗೆ 'ನ್ಯಾಯ' ಒದಗಿಸುವ, ವ್ಯವಸ್ಥೆಯ ವಿರುದ್ಧ ಹೋರಾಟದ ಪೋಸು ಕೊಡುತ್ತಾರೆ. ರಾಜಕೀಯ ಪ್ರಜ್ಞೆ ಬಹುಸಂಖ್ಯಾತರಲ್ಲಿ ಇನ್ನೂ ಜಾಗೃತಿ ಆಗದಿರುವ ಪರಿಸ್ಥಿತಿಯಲ್ಲಿ ಇದು ಬಹಳ ಜನರಿಗೆ ಅಪ್ಯಾಯಮಾನವೆನಿಸುತ್ತದೆ. ಆದ್ದರಿಂದ ಇದು ನಿಜವಾದ ವ್ಯವಸ್ಥೆಯ ಬದಲಾವಣೆಗೆ, ನ್ಯಾಯ-ಸಮಾನತೆ ಆಧರಿಸದೆ 'ನೈಜ ಪ್ರಜಾಪ್ರಭುತ್ವ' ಇಲ್ಲದೆ ಸಾಧ್ಯ ಇಲ್ಲ ಎಂಬ ಸರಿಯಾದ ತಿಳುವಳಿಕೆ ಮೇಲೆ ಅಪಾಯಕಾರಿ ದಾಳಿ ಮಾಡುತ್ತದೆ ಈ 'ಉಪಕಾರಿ ಸರ್ವಾಧಿಕಾರ'ದ ಪರಿಕಲ್ಪನೆ.

**ವ್ಯವಸ್ಥೆ ವಿರುದ್ಧ 'ಹುಸಿ ಬಂಡಾಯ'**

'ಉಪಕಾರಿ ಸರ್ವಾಧಿಕಾರ'ದ ಪರಿಕಲ್ಪನೆಯನ್ನು ನಾಜೂಕಾಗಿ ಸರ್ಕಾರ್ ಮುಂದಿಟ್ಟಿದೆ, ಭೂಗತ ಅಪರಾಧಿ ಜಗತ್ತು ವ್ಯವಸ್ಥೆಯ ಎದ್ದು ಕಾಣುವ ಭಾಗ. ಬಂಡವಾಳಶಾಹಿಗಳು, ವ್ಯಾಪಾರಿಗಳು, ಸಾಮಾನ್ಯ ಜನರು ಸೇರಿದಂತೆ ಎಲ್ಲರನ್ನೂ ಹೆದರಿಸಿ ಬೆದರಿಸಿ ಬೆಳೆಯುತ್ತದೆ ಈ ಭೂಗತ ಅಪರಾಧಿ ಜಗತ್ತು. ಅಸಮಾನತೆ, ಅನ್ಯಾಯದ ಬಂಡವಾಳಶಾಹಿ ವ್ಯವಸ್ಥೆಯ ಪ್ರತಿಫಲನವೇ ಈ ಜಗತ್ತು. 'ಸರ್ಕಾರ್' ಭೂಗತ ಜಗತ್ತು ಮುಖ್ಯ ವ್ಯವಸ್ಥೆಗೆ ವಿರುದ್ಧವಾದದ್ದು, ಅದರ ವಿರುದ್ಧ ಬಂಡೆದ್ದದ್ದು ಎನ್ನುವ 'ಮಿಥ್ಯೆ' ಹರಡುತ್ತದೆ. ಆದ್ದರಿಂದಲೇ ಸುಭಾಷ್ ನಾಗ್ರೆ 'ಸರ್ಕಾರ್' ಹೇಗಾದ? ಇಂತಹ ಭದ್ರಕೋಟೆ, ಎ.ಕೆ.-47 ಹಿಡಿದು ಓಡಾಡುವ ಗೂಂಡಾ ಪಡೆ, ದಾನ- ಧರ್ಮ ಮಾಡಲು ದುಡ್ಡು ಎಲ್ಲಿಂದ ಬರುತ್ತದೆ. ಮಾದಕ ದ್ರವ್ಯ ಸ್ಮಗ್ಲರ್ ರಷೀದ್‌ಗೆ 'ರಕ್ಷಣೆ' ಕೊಡುವುದಿಲ್ಲ. ಇನ್ಯಾರಿಗೆ 'ರಕ್ಷಣೆ' ಕೊಡುತ್ತಾನೆ? ಎಂಬುದೆಲ್ಲಾ 'ಸರ್ಕಾರ್'ನಲ್ಲಿ ಅದರಿಂದಾಗಿಯೇ ಬರುವುದಿಲ್ಲ.

**ಅಪಾಯಕಾರಿ ರಾಜಕೀಯದ ಶಕ್ತಿಯುತ ಚಿತ್ರಣ**

'ವ್ಯವಸ್ಥೆ ವಿರುದ್ಧ ಹುಸಿ ಬಂಡಾಯದ ಫಿಲಂಗಳಿಗೆ ಬಾಲಿವುಡ್‌ನಲ್ಲೂ, ಇತರ ಭಾಷೆಗಳಲ್ಲೂ ಕೊರತೆ ಇಲ್ಲ. ಕನ್ನಡದ 'ಅಂತ', ಹಿಂದಿಯ 'ನಾಯಕ' ಮುಂತಾದವು ಇಂತಹ ಚಿತ್ರಗಳು ಜನಪ್ರಿಯವಾಗಿವೆ. 'ಸರ್ಕಾರ್'ನ ವಿಶಿಷ್ಟತೆ (ಆದರಿಂದ ರಾಜಕೀಯವಾಗಿ ತೀವ್ರ ಅಪಾಯಕಾರಿಯಾಗುವುದು) 'ವ್ಯವಸ್ಥೆಯ ವಿರುದ್ಧ ಹುಸಿ ಬಂಡಾಯ'ವನ್ನು, 'ಉಪಕಾರಿ ಸರ್ವಾಧಿಕಾರ'ದ ಪರಿಕಲ್ಪನೆ ಜತೆ ಜೋಡಿಸಿ ಅದನ್ನು ವೈಭವೀಕರಿಸುತ್ತ ನಾಜೂಕಾಗಿ ಮಂಡಿಸುವುದು. ಸರ್ಕಾರ್‌ಗೆ ಹಲವು ಮೆಚ್ಚಿರುವ, ಟೀಕಿಸಿರುವ ಇತರ ಆಯಾಮಗಳಿವೆ. ಆದರೆ ಈ 'ಅಪಾಯಕಾರಿ ರಾಜಕೀಯ' ಹೇಳುವುದು 'ಸರ್ಕಾರ್'ನ ಮುಖ್ಯ ಧ್ವನಿ. ಅಪಾಯಕಾರಿ ರಾಜಕೀಯವನ್ನು ಅತ್ಯಂತ ಶಕ್ತಿಯಾಗಿ ಹೇಳುತ್ತದೆ 'ಸರ್ಕಾರ್'. ಅದು 'ಗಾಡ್‌ಫಾದರ್'ನ ಉತ್ತಮ ದೇಸಿ ರಿ-ಮೇಕ್. 'ನಾಯಗನ್'ಗಿಂತ ಒಳ್ಳೆಯ ರಿಮೇಕ್ 'ಗಾಡ್‌ಫಾದರ್'ನ್ನು ರಾಜಕೀಯ ಗೊಳಿಸಿದೆ - ಇವೆಲ್ಲ ಅಪ್ರಸ್ತುತ ಚರ್ಚೆ.

**- ಶರತ್‌ಚಂದ್ರ**

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 22236462,
ಮುದ್ರಣ: ಹಾ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor : S.Y.GURUSHANTH